# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 14 ಭಾನುವಾರ 2024

ಸಂಪುಟ: 44 | ಸಂಚಿಕೆ: 268 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




# ಮೋದಿ ಮತ್ತೆ ಪ್ರಧಾನಿ ಆಗ್ತಾರೆ; ಕಾವೇರಿ ಜಲ ಸಮಸ್ಯೆ ನೀಗ್ತಾರೆ

## ಮಾಜಿ ಪ್ರಧಾನಿ ದೇವೇಗೌಡರ ವಿಶ್ವಾಸ: ನಾನು ಸಾಯುವವರೆಗೂ ಕಾವೇರಿಗಾಗಿ ಹೋರಾಡ್ತೀನಿ

ಬೆಂಗಳೂರು, ಜ.13(ಕೆಎಂಶಿ)– ಲೋಕಸಭಾ ಚುನಾವಣೆ ನಂತರ ಕರ್ನಾಟಕ ಎದುರಿಸುತ್ತಿರುವ ಕಾವೇರಿ ಜಲ ಸಂಕಷ್ಟಕ್ಕೆ ಪ್ರಧಾನಿ ನರೇಂದ್ರ ಮೋದಿ ಪರಿಹಾರ ನೀಡಲಿದ್ದಾರೆ ಎಂಬ ವಿಶ್ವಾಸವನ್ನು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಇಂದಿಲ್ಲಿ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಜಲ ವಿವಾದದಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯ ಮತ್ತು ಜನರು ಎದುರಿಸಿದ ಸಂಕಷ್ಟಗಳನ್ನು ಅವರ ಮುಂದೆ ಎಳೆಎಳೆಯಾಗಿ ಬಿಡಿಸಿಟ್ಟಿದ್ದೇನೆ.

ಅವರು ಏನು ಹೇಳಿದ್ದಾರೆಂಬುದನ್ನು ನಾನು ಬಹಿರಂಗಪಡಿಸಲು ಸಾಧ್ಯವಿಲ್ಲ, ಆದರೆ ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿ ಆಗುತ್ತಾರೆ. ಅವರೇ ನಮ್ಮ ಜಲ ಸಂಕಟವನ್ನು ಪರಿಹರಿಸುತ್ತಾರೆ ಎಂಬ ಆತ್ಮವಿಶ್ವಾಸವನ್ನು ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷ ತಮಿಳುನಾಡು ರಾಜ್ಯದವರು ಕಾವೇರಿ ಜಲ ನಿರ್ವಹಣಾ ಸಮಿತಿ ಹಾಗೂ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ ಮುಂದೆ ಕರ್ನಾಟಕದಿಂದ ನೀರು ಕೊಡಿಸಿ ಎಂದು ಅರ್ಜಿ ಹಾಕುತ್ತಾರೆ. ನಮ್ಮ ಬಳಿ ನೀರು ಇಲ್ಲದೆ ಇದ್ದರೂ ನೀರು ಬಿಡಿ ಅಂತಾರೆ. ನಮ್ಮ ಅಧಿಕಾರಿಗಳು ಏನೇ ವಾದ ಮಾಡಿದರೂ ಪ್ರಯೋಜನ ಆಗಿಲ್ಲ. ಕಾವೇರಿ ಪ್ರಾಧಿಕಾರದವರು ಯಾವತ್ತು ಕೂಡ ನಮ್ಮ ರಾಜ್ಯಕ್ಕೆ ಬಂದು ನೀರು ಎಷ್ಟು ಇದೆ ಅಂತ ನೋಡಿಲ್ಲ ಎಂದು ತೀವ್ರ ಬೇಸರ ವ್ಯಕ್ತಪಡಿಸಿದರು.



ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಭೇಟಿಯಾದ ಕ್ಷಣ. (ಸಾಂದರ್ಭಿಕ ಚಿತ್ರ)

**ಕೊನೆಯುಸಿರಿರುವವರೆಗೂ ಹೋರಾಡ್ತೇನೆ:** ಪ್ರಧಾನಿ ಅವರಿಗೆ ನಮಗೆ ಆಗಿರುವ ಅನ್ಯಾಯ ಮನ ಮುಟ್ಟುವಂತೆ ನಾವು ಒಟ್ಟಾಗಿ ಹೋರಾಡಬೇಕು. ಇದರಲ್ಲಿ ರಾಜಕೀಯ ಇರಬಾರದು. ನಾನು ಇನ್ನೂ ಎರಡೂವರೆ ವರ್ಷ ರಾಜ್ಯಸಭೆಯಲ್ಲಿ ಇರುತ್ತೇನೆ. ಹೋರಾಡುತ್ತೇನೆ, ನಾನು ಸಾಯುವವರೆಗೂ ಕಾವೇರಿ ಬಗ್ಗೆ ಹೋರಾಟ ಮಾಡುತ್ತೇನೆ. ರಾಜ್ಯದ ಜನರಿಗೆ ನ್ಯಾಯ ಸಿಗುವವರೆಗೂ ವಿರಮಿಸುವುದಿಲ್ಲ ಎಂದು ಗದ್ಗದಿತರಾದರು. ಕಾವೇರಿ ವಿಚಾರವನ್ನು ನಾನು ಸಂಸತ್‌ನಲ್ಲಿ ಪ್ರಸ್ತಾಪ ಮಾಡುತ್ತೇನೆ. ಈ ವಿಚಾರದಲ್ಲಿ ಮಧ್ಯ ಪ್ರವೇಶ ಮಾಡಬೇಕು ಅಂತ ಪ್ರಧಾನಿ ಮೋದಿ ಅವರಿಗೆ ಮನವಿ ಮಾಡಿದ್ದೇನೆ. ನಮ್ಮ ಜಲಾಶಯಗಳಲ್ಲಿ ನೀರು ಇಲ್ಲದೆ ಇದ್ದರೂ ನೀರು ಬಿಡಿ ಅನ್ನೋದು ಕರ್ನಾಟಕಕ್ಕೆ ಮರಣಶಾಸನ.

● 9ನೇ ಪುಟಕ್ಕೆ

# ಅಯೋಧ್ಯೆ ರಾಮಮಂದಿರಕ್ಕೆ ಡಾ.ಎಸ್.ಎಲ್.ಭೈರಪ್ಪ ಭೇಟಿ



ಮೈಸೂರು, ಜ.13(ಎಸ್‌ಪಿಎನ್)– ಮೈಸೂರಿನ ಖ್ಯಾತ ಕಾದಂಬರಿಕಾರರು ಹಾಗೂ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಡಾ.ಎಸ್.ಎಲ್.ಭೈರಪ್ಪ, ಕುವೆಂಪು ಭಾಷಾ ಭಾರತಿ ಮಾಜಿ ಅಧ್ಯಕ್ಷ ಪ್ರೊ.ಪ್ರಧಾನ ಗುರುದತ್ತ ಅವರು ಅಯೋಧ್ಯೆಯ ಶ್ರೀರಾಮಮಂದಿರಕ್ಕೆ ಶನಿವಾರ ಭೇಟಿ ನೀಡಿದ್ದರು.

ಮೈಸೂರಿನಿಂದ ಡಾ. ಎಸ್.ಎಲ್. ಭೈರಪ್ಪ ಮತ್ತು ಡಾ.ಪ್ರಧಾನ್ ಗುರುದತ್ತ, ಲಕ್ನೋದ ರಾಜ್ಯ ಭಾಷಾ ಕಾರ್ಯನ್ವಯನ್ ಸಮಿತಿ ಹಾಗೂ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಲಕ್ನೋ ಘಟಕ) ಸಹಯೋಗದೊಂದಿಗೆ ಇಂದಿರಾ ಗಾಂಧಿ ಪ್ರತಿಷ್ಠಾನ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ದೇಶ ಒಂದು; ಭಾಷೆ ಹಲವು' ಹಾಗೂ ಡಾ. ಎಸ್.ಎಲ್. ಭೈರಪ್ಪನವರ ಸಾಹಿತ್ಯದಲ್ಲಿ 'ಉತ್ತರ ಭಾರತದ ಝಲಕ್' ಕುರಿತು ಶುಕ್ರವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಲಕ್ನೋಗೆ ತೆರಳಿದ್ದರು. ನಂತರ ಇಬರಿಬ್ಬರೂ ಇಂದು ಅಯೋಧ್ಯೆ ರಾಮಮಂದಿರಕ್ಕೆ ಭೇಟಿ ನೀಡಿ, ಶ್ರೀರಾಮನ ದರ್ಶನ ಪಡೆದು, ಇನ್ನೇನು ಉದ್ಘಾಟನೆಗೆ ಸಿದ್ಧಗೊಳ್ಳುತ್ತಿರುವ ಶ್ರೀರಾಮ ಮಂದಿರದ ಶಿಲ್ಪ ಸೌಂದರ್ಯವನ್ನು ವೀಕ್ಷಿಸಿದರು. ಗುರುವಾರ ಡಾ.ಭೈರಪ್ಪನವರು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಭೇಟಿಯಾಗಿದ್ದರು.



# ಹೈದರಾಬಾದ್‌ನಲ್ಲಿ 'ನಕಲಿ ಮೈಸೂರು ಸ್ಯಾಂಡಲ್ ಸೋಪು' ಮಾರಾಟ; ಇಬ್ಬರ ಬಂಧನ

## ಎರಡು ಕೋಟಿ ಮೌಲ್ಯದ ಸೋಪು; ಇನ್ನಿತರ ಪರಿಕರ ವಶಕ್ಕೆ

ಬೆಂಗಳೂರು, ಜ. 13– ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಮೈಸೂರು ಸ್ಯಾಂಡಲ್ ಸೋಪ್ ಅನ್ನು ನಕಲಿ ಮಾಡಲಾಗಿದೆ. ಹೈದರಾಬಾದ್‌ನಲ್ಲಿ ಕಾರ್ಯ ಪ್ರವೃತ್ತವಾಗಿದ್ದ ಜಾಲವನ್ನು ಪತ್ತೆಹಚ್ಚಲಾಗಿದ್ದು, ಇಬ್ಬರನ್ನು ಬಂಧಿಸಿ, 2 ಕೋಟಿ ರೂ. ಮೌಲ್ಯದ ನಕಲಿ ಸೋಪ್ ಮತ್ತು ಪರಿಕರಗಳನ್ನು ವಶಪಡಿಸಿಕೊಳ್ಳಲಾಗಿದೆ.

ವಿಶೇಷವೆಂದರೆ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್ (ಕೆಎಸ್‌ಡಿಎಲ್) ಅಧ್ಯಕ್ಷರೂ ಆದ ಸಚಿವ ಎಂ.ಬಿ.ಪಾಟೀಲ್ ಅವರಿಗೆ ಬಂದ ಅನಾಮಧೇಯ ಕರೆಯ ಬೆನ್ನತ್ತಿದ ಕೆಎಸ್‌ಡಿಎಲ್ ಅಧಿಕಾರಿ ವರ್ಗ ಹೈದರಾಬಾದ್‌ನಲ್ಲಿ ಜಾಲವನ್ನು ಪತ್ತೆಹಚ್ಚಿ ಆರೋಪಿಗಳನ್ನು ಪೊಲೀಸರಿಗೆ ಹಿಡಿದುಕೊಟ್ಟಿದ್ದಾರೆ.

**ವಿವರ:** ಕೆಲ ದಿನಗಳ ಹಿಂದೆ ಸಚಿವ ಎಂ.ಬಿ. ಪಾಟೀಲ್ ಅವರಿಗೆ ಕರೆ ಮಾಡಿದ ಅನಾಮಧೇಯ ವ್ಯಕ್ತಿಯು ಹೈದರಾಬಾದ್ ಮಾರುಕಟ್ಟೆಯಲ್ಲಿ ನಕಲಿ ಮೈಸೂರು ಸ್ಯಾಂಡಲ್ ಸೋಪ್ ವ್ಯಾಪಕವಾಗಿ ಮಾರಾಟವಾಗುತ್ತಿದೆ ಎಂಬ ಮಾಹಿತಿ ನೀಡಿದ್ದ. ಆದರೆ, ಆತ ನೀಡಿದ್ದ ಮಾಹಿತಿಯಲ್ಲಿ ಹೆಚ್ಚಿನ ವಿವರಗಳೇನೂ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಎಂ.ಬಿ. ಪಾಟೀಲ್ ಅವರು ತಮಗೆ ಬಂದ ಮಾಹಿತಿಯನ್ನು ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಅವರಿಗೆ ರವಾನಿಸಿ, ಅದರ ಬಗ್ಗೆ ಗಮನಹರಿಸುವಂತೆ ಸೂಚಿಸಿದ್ದಾರೆ.

ಮಾಹಿತಿ ಅಸ್ಪಷ್ಟವಾಗಿದ್ದರೂ ಅದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಅವರು, ಸಿಕಂದರಬಾದ್‌ನಲ್ಲಿರುವ ಕೆಎಸ್‌ಡಿಎಲ್ ಅಧಿಕೃತ ಮಾರಾಟ ಕಚೇರಿ ಸಿಬ್ಬಂದಿಗೆ




ಈ ಸಂಬಂಧ ತಿಳಿಸಿ, ಹೈದರಾಬಾದ್ ಮಾರುಕಟ್ಟೆಯಲ್ಲಿ ನಿಗಾ ವಹಿಸುವಂತೆ ಸೂಚಿಸಿದ್ದಾರೆ. ಕೆಎಸ್‌ಡಿಎಲ್ ಸಿಕಂದರಾಬಾದ್ ಸಿಬ್ಬಂದಿ ಕಾರ್ಯಾಚರಣೆಗಿಳಿದ ವೇಳೆ ಹೈದರಾಬಾದ್ ಮಾರುಕಟ್ಟೆಯಲ್ಲಿ 75 ಗ್ರಾಂ ಮತ್ತು 150 ಗ್ರಾಂ ತೂಕದ ನಕಲಿ ಮೈಸೂರು ಸ್ಯಾಂಡಲ್ ಸೋಪ್‌ಗಳು ವ್ಯಾಪಕವಾಗಿ ಮಾರಾಟವಾಗುತ್ತಿರುವುದು ಕಂಡುಬಂದಿದೆ. ಈ ವಿಚಾರವನ್ನು ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಅವರಿಗೆ ತಿಳಿಸಿದ ನಂತರ ಅವರ ಸೂಚನೆ ಮೇರೆಗೆ ನಕಲಿ ಸೋಪ್ ತಯಾರಿಕಾ ಘಟಕವನ್ನು ಪತ್ತೆ ಮಾಡಲೇಬೇಕು ಎಂದು ನಿರ್ಧರಿಸಿದ್ದ ಸಿಬ್ಬಂದಿ, ಮಧ್ಯವರ್ತಿಯೊಬ್ಬರ ಮೂಲಕ 1 ಲಕ್ಷ ರೂ. ಮೌಲ್ಯದ ನಕಲಿ ಸೋಪ್‌ಗಳ ಖರೀದಿಗೆ ಆರ್ಡರ್ ಮಾಡಿದ್ದರು. ಈ ಸೋಪ್‌ಗಳನ್ನು ಪಡೆಯಲು ತಯಾರಿಕಾ ಘಟಕಕ್ಕೆ ಮಧ್ಯವರ್ತಿ ತಮ್ಮನ್ನು ಕರೆದೊಯ್ಯುತ್ತಾನೆ ಎಂದು ಸಿಬ್ಬಂದಿ

● 9ನೇ ಪುಟಕ್ಕೆ

> ಸಚಿವ ಎಂ.ಬಿ.ಪಾಟೀಲ್ ಅವರಿಗೆ ಬಂದಿದ್ದ ಅನಾಮಧೇಯ ಕರೆ ಬಗ್ಗೆ ಪರಿಶೀಲಿಸಿದಾಗ ಹೈದರಾಬಾದ್‌ನ ಕೆಲ ಪ್ರದೇಶಗಳಲ್ಲಿ ಮೈಸೂರು ಸ್ಯಾಂಡಲ್ ನಕಲಿ ಸೋಪ್‌ಗಳು ಮಾರಾಟವಾಗುತ್ತಿರುವುದು ಕಂಡುಬಂದಿತ್ತು. ಆದರೆ, ಅದರ ಮೂಲವನ್ನು ಪತ್ತೆಹಚ್ಚುವ ಸಲುವಾಗಿ ನಮ್ಮ ಸಿಬ್ಬಂದಿ ಸ್ವತಃ ಮೊದಲಿಗೆ ಲಕ್ಷ ರೂ. ಮೌಲ್ಯದ ಉತ್ಪನ್ನಗಳನ್ನು ಖರೀದಿಸಿ ನಂತರ 25 ಲಕ್ಷ ರೂ. ಮೌಲ್ಯದ ಉತ್ಪನ್ನಗಳಿಗೆ ಆರ್ಡರ್ ಕೊಡುವ ಮೂಲಕ ನಕಲಿ ಸೋಪ್ ತಯಾರಿಕಾ ಮೂಲವನ್ನು ಪತ್ತೆಹಚ್ಚಿದ್ದಾರೆ.
>
> – ಪ್ರಶಾಂತ್, ವ್ಯವಸ್ಥಾಪಕ ನಿರ್ದೇಶಕ, ಕೆಎಸ್‌ಡಿಎಲ್

ಮೈಸೂರು ಮಿತ್ರ ಭಾನುವಾರ 14 ಜನವರಿ 2024

# ಜ.21ರಂದು ಮೈಸೂರು ಸಾಹಿತ್ಯ ಹಬ್ಬ

ಮೈಸೂರು,ಜ.13–ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಜ.21ರಂದು ಬೆಳಗ್ಗೆ 10.30ಕ್ಕೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಮೈಸೂರು ಸಾಹಿತ್ಯ ಹಬ್ಬ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಸಂಖ್ಯಾಶಾಸ್ತ್ರಜ್ಞ, ಅನುವಾದಕ ಮತ್ತು ಲೇಖಕರಾದ ಡಾ.ಬಿ.ನಂಜಮ್ಮ ಚಿನ್ನಪ್ಪ ಉದ್ಘಾಟಿಸುವರು. ರಾಜೀವ್ ಗಾಂಧಿ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಅಧ್ಯಕ್ಷತೆ ವಹಿಸುವರು. ಬೆಳಗ್ಗೆ 11.30ಕ್ಕೆ ಕಾದಂಬರಿಕಾರ ಪ್ರೊ.ಥಾಮಸ್ ಮಾಡೆಸ್ಟೋ ಗಲಾನ್ ಅವರು ಪ್ರೊ. ಹೆಚ್.ಎಸ್.ಶಿವಪ್ರಕಾಶ್ ಅವರೊಂದಿಗೆ ಸಂಭಾಷಣೆ ನಡೆಸುವರು. ಮ. 12.30ಕ್ಕೆ ಚಲನಚಿತ್ರ ಮತ್ತು ಸಾಂಸ್ಕೃತಿಕ ವಿಮರ್ಶಕ ಪ್ರೊ.ಎನ್.ಮನು ಚಕ್ರವರ್ತಿ ಅವರು 'ರೀಡಿಂಗ್ ಲಿಟರೇಚರ್: ಎನ್‌ಕೌಂಟರಿಂಗ್ ದಿ ಸ್ಪಿರಿಟ್ ಆಫ್ ದಿ ಟೈಮ್ಸ್' ಕುರಿತು ಮಾತನಾಡುವರು. ಮ. 2.30ಕ್ಕೆ ಸಮಾಜ ಶಾಸ್ತ್ರಜ್ಞೆ ಪ್ರೊ.ಆರ್.ಇಂದಿರಾ ಅವರು ಪಶ್ಚಿಮ ಘಟ್ಟಗಳಲ್ಲಿ ಪರಿಸರ ಪ್ರವಾಸೋದ್ಯಮ–ಯಾರಿಗೆ ಲಾಭ, ಯಾರಿಗೆ ನಷ್ಟ? ಕುರಿತು ಮಾತನಾಡುವರು. ಮ. 3.30ಕ್ಕೆ ಶಿಲ್ಪಿ, ಚಿತ್ರಕಲಾವಿದೆ, ಕವಿ ಅನುರಾಧ ನಲಪಾಟ್ ಅವರು ಹೊಮನ್ ಕುಲಸ್ (ಲಿಟಲ್ ಮ್ಯಾನ್) ಅಂಡ್ ದಿ ಆರ್ಟ್ ಆಫ್ ಯೋ ಯೋಇಂಗ್ ಕುರಿತು ಮಾತನಾಡುವರು.

# ಮಾಚಲಘಟ್ಟದಲ್ಲಿ ಶಾಸನೋಕ್ತ ಮಂತ್ರ–ತಂತ್ರದ ಕಲ್ಲು ಪತ್ತೆ

ಮೈಸೂರು, ಜ.13(ಆರ್‌ಕೆ)–ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ಮಾಚಲಘಟ್ಟ ಗ್ರಾಮದಲ್ಲಿ ಪ್ರಕಟಿತವಾಗದ ಶಾಸನೋಕ್ತ ಪುರಾತನ ಮಂತ್ರ–ತಂತ್ರ ಕಲ್ಲು ಪತ್ತೆಯಾಗಿದೆ. ಗ್ರಾಮದ ಪೂರ್ವ ದಿಕ್ಕಿನಲ್ಲಿರುವ ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿರುವ ಮಲ್ಲೇಶ್ವರ ದೇವಾಲಯದ ಹಿಂಭಾಗದಲ್ಲಿ ಮೈಸೂರಿನ ಕನ್ನಡ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಪುರಾತತ್ವ ಸಂಶೋಧಕ ಡಾ. ಸಿ.ಎ.ಶಶಿಧರ್ ನಡೆಸಿದ ಕಾರ್ಯಾಚರಣೆಯಲ್ಲಿ ಈ ಅಪರೂಪದ ಮಂತ್ರದ ಕಲ್ಲು ಪತ್ತೆಯಾಗಿದೆ.

ಭಾರತೀಯ ಭಾಷಾ ಸಂಸ್ಥಾನ (CIIL)ದ ನಿರ್ದೇಶಕ ಡಾ.ಶೈಲೇಂದ್ರ ಮೋಹನ್ ಅವರ ನಿರ್ದೇಶನದಂತೆ ಕೇಂದ್ರದ ಸಹ ಸಂಶೋಧಕ ಡಾ.ಮರಿಸ್ವಾಮಿ ಹಾಗೂ ಸ್ಥಳೀಯರ ನೆರವಿನಿಂದ ಡಾ.ಶಶಿಧರ್ ಕಲ್ಲನ್ನು ಭೂಮಿಯಿಂದ ಹೊರತೆಗೆದು ಸಂರಕ್ಷಿಸಿದ್ದಾರೆ.

ಕಲ್ಲಿನ ಮೇಲ್ಭಾಗದಲ್ಲಿ ದೇವತಾಮೂರ್ತಿಯ ರೇಖಾಚಿತ್ರವಿದ್ದು, ಕೆಳಭಾಗದಲ್ಲಿ ವಾಸ್ತು ಮಂಡಲಗಳ ರೇಖಾಚಿತ್ರಗಳಿವೆ. ಅಲ್ಲದೆ ಚೌಕಾಕಾರದ ಮನೆಗಳಲ್ಲಿ 'ಓಂ, ಹ್ರಿಂ' ಎನ್ನುವ ಮಂತ್ರ ಬೀಜಾಕ್ಷರಗಳಿವೆ. ಅವು ಕ್ರಿ.ಶ.16 ಮತ್ತು 17ನೇ ಶತಮಾನದ ಕನ್ನಡದ ಮೋಡಿ ಲಿಪಿಯಲ್ಲಿ ಬರೆಯಲ್ಪಟ್ಟಿವೆ. ಅವುಗಳ ಸುತ್ತಲೂ ರಜೋಗುಣ, ತಮೋಗುಣ, ಸತ್ವಗುಣಗಳ ಸಂಕೇತವಾಗಿರುವ ತ್ರಿಶೂಲಗಳನ್ನು ಕೆತ್ತಲಾಗಿದೆ. ಶಿಲೆಯ ಮೇಲ್ತುದಿಯಲ್ಲಿ ಸೂರ್ಯ–ಚಂದ್ರರ ರೇಖಾಚಿತ್ರಗಳಿದ್ದು, ಸೂರ್ಯ–ಚಂದ್ರ ಇರುವವರೆಗೂ ಶಾಶ್ವತ ಎಂಬುದನ್ನು ಸೂಚಿಸುತ್ತವೆ. ಬೀಜಾಕ್ಷರ ಹೊಂದಿರುವ ಚೌಕಾಕಾರದ ಮನೆಗಳ ಕೆಳಭಾಗದಲ್ಲಿ ತಮಿಳು ಲಿಪಿಯ 'ಉರಂಡಕಂ' ಎಂದು ಬರೆಯಲಾಗಿದೆ.



ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಹಿರಿಯ ಸಂಶೋಧಕ ಡಾ.ಸಿ.ಎ.ಶಶಿಧರ್, ಡಾ.ಆರ್. ಮರಿಸ್ವಾಮಿ, ಹೊಯ್ಸಳ ಕುಮಾರ್, ಸಾಗರ್ ಹಾಗೂ ಇತರರನ್ನು ಶಾಸನೋಕ್ತ ಕಲ್ಲಿನೊಂದಿಗೆ ಕಾಣಬಹುದು.

ನಮ್ಮ ಪೂರ್ವಿಕರು ತಮ್ಮ ಗ್ರಾಮಗಳಿಗೆ ಯಾವುದೇ ದುಷ್ಟಶಕ್ತಿಯೂ ಬಾಧಿಸದಿರಲಿ ಎಂಬ ಉದ್ದೇಶದಿಂದ ಗ್ರಾಮದ ಪ್ರವೇಶ ದ್ವಾರಗಳಲ್ಲಿ ಈ ರೀತಿಯ ಮಂತ್ರದ ಕಲ್ಲನ್ನು ನೆಟ್ಟು ಪೂಜಿಸುತ್ತಿದ್ದರು ಎಂಬುದು ಇತಿಹಾಸ.

ಈ ಸಂಶೋಧನೆ ಬಗ್ಗೆ ಪ್ರತಿಕ್ರಿಯಿಸಿರುವ ಡಾ.ಸಿ.ಎ. ಶಶಿಧರ್, ಈ ಹಿಂದೆ ಕಾಲರಾ, ಸಿಡುಬು, ಪ್ಲೇಗ್‌ನಂತಹ ರೋಗಗಳು ಜನರನ್ನು ಬಲಿ ತೆಗೆದುಕೊಳ್ಳುತ್ತಿದ್ದವು. ಈ ರೋಗ ತಟ್ಟದಿರಲಿ, ಜನ–ಜಾನುವಾರುಗಳಿಗೆ ಕಾಯಿಲೆ ಬರಬಾರದೆಂಬ ಉದ್ದೇಶದಿಂದ ಈ ಬಗೆಯ ಮಂತ್ರದ ಕಲ್ಲುಗಳನ್ನು ನಿಲ್ಲಿಸುವ ಪರಿಪಾಠವಿತ್ತು. ವೈರಿಗಳಿಂದ ಅನಾಹುತ ತಪ್ಪಲಿ ಎಂಬುದಕ್ಕಾಗಿಯೂ ಜನರು ನಂಬಿಕೆಯ ದೇವರ ಸಂಬಂಧಿಸಿದ ಮಂತ್ರದ ಬೀಜಾಕ್ಷರಗಳನ್ನು ಶಿಲೆಗಳ ಮೇಲೆ ಬರೆಸಿ ನಿಲ್ಲಿಸುತ್ತಿದ್ದರು ಎಂದರು.

ಪುರಾತತ್ವ ತಜ್ಞ ಪ್ರೊ.ಎನ್.ಎಸ್.ರಂಗರಾಜು ಈ ಕಲ್ಲು ಪತ್ತೆಯಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, ಮಾಚಲಘಟ್ಟ ಗ್ರಾಮದಲ್ಲಿ ಪತ್ತೆಯಾಗಿರುವ ಮಂತ್ರ–ತಂತ್ರದ ಕಲ್ಲಿನಲ್ಲಿರುವ ಬೀಜಾಕ್ಷರಗಳು ವಿಶಿಷ್ಟವಾಗಿವೆ. ಇದು ಮೋಡಿ ಲಿಪಿಯನ್ನು ಒಳಗೊಂಡ ಮಂತ್ರದ ಕಲ್ಲಾಗಿದ್ದು, ಈ ಹಿಂದೆ ಜನಸಾಮಾನ್ಯರು ಆಡುಭಾಷೆಯಲ್ಲದೆ ಮೋಡಿ ಲಿಪಿಯಲ್ಲಿ ಬರೆಯುವ ಪರಿಪಾಠವಿತ್ತು. ಆದರೆ, ಕಲ್ಲಿನಲ್ಲಿ ಈ ರೀತಿಯ ಲಿಪಿ ಕಂಡು ಬಂದಿರುವುದು ವಿಶೇಷವಾಗಿದೆ ಎಂದರು.

# ಮೈಸೂರು ಭಾರತೀಯ ವಿದ್ಯಾ ಭವನದಲ್ಲಿ ಜ.20, 123ನೇ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು,ಜ.13–ಬೆಂಗಳೂರು, ಭಾರತೀಯ ವಿದ್ಯಾಭವನ, ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಮೈಸೂರು ಭಾರತೀಯ ವಿದ್ಯಾ ಭವನದ ಸಂಯುಕ್ತಾಶ್ರಯದಲ್ಲಿ 123ನೇ ಸಾಂಸ್ಕೃತಿಕ ಕಾರ್ಯಕ್ರಮವನ್ನು ಜ.20 (ಶನಿವಾರ)ರಂದು ಸಂಜೆ 6ಕ್ಕೆ ವಿಜಯನಗರ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಏರ್ಪಡಿಸಲಾಗಿದೆ. ವಿದ್ವಾನ್ ಡಾ.ವಿದ್ಯಾಭೂಷಣ ಅವರಿಂದ ದಾಸವಾಣಿ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ಪ್ರಾದೇಶ್–ವಯೋಲಿನ್, ವಿದ್ವಾನ್ ಶಿವಶಂಕರಸ್ವಾಮಿ–ಮೃದಂಗ ಮತ್ತು ವಿದ್ವಾನ್ ರಘುನಂದನರಾವ್ – ಘಟಂನಲ್ಲಿ ಸಹಕಾರ ನೀಡಲಿದ್ದಾರೆ.

**ಜ್ಯೋತಿಷ್ಯ ಕಲಿಕಾ ತರಗತಿಗಳು**

ಬೆಂಗಳೂರು ಭಾರತೀಯ ಜ್ಯೋತಿಷ ಸಂಸ್ಥಾನ ಮತ್ತು ಮೈಸೂರು ಭಾರತೀಯ ವಿದ್ಯಾಭವನದ ಸಹಯೋಗದೊಂದಿಗೆ ವಿಜಯನಗರ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಜ್ಯೋತಿಷ ಕಲಿಕಾ ತರಗತಿಗಳನ್ನು ಹಮ್ಮಿಕೊಳ್ಳಲಾಗಿದೆ.

**ಬೋಧನಾ ವಿಷಯಗಳು:** ಜ್ಯೋತಿಷ್ಯ ಪ್ರವೇಶ, ಜ್ಯೋತಿಷ್ಯ ಪ್ರಾಜ್ಞ, ಜ್ಯೋತಿಷ್ಯ ಆಚಾರ್ಯ, ಅಲ್ಪಾವಧಿ ಕೋರ್ಸ್‌ಗಳು: ವಾಸ್ತು, ಹಸ್ತ ಸಾಮುದ್ರಿಕಾ ಮತ್ತು ಸಂಖ್ಯಾಶಾಸ್ತ್ರ ತರಗತಿಗಳು ಈ ವರ್ಷದ ಆಗಸ್ಟ್ 21ರಿಂದ ಪ್ರತಿ ಭಾನುವಾರ ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ನಡೆಯಲಿವೆ. ಹೆಚ್ಚಿನ ಮಾಹಿತಿಗೆ ಆರ್. ನಂಜುಂಡಯ್ಯ, ಮೊ. 9845174994, ಸುನೀಲ್, ಮೊ. 9986616264, ಕಾವೇರಪ್ಪ, ಮೊ. 8105251633 ಸಂಪರ್ಕಿಸಬಹುದು.



ಮೈಸೂರಿನ ವಿವಿ ಪುರಂ ಆಸ್ಪತ್ರೆಯ ಬಾಣಂತಿಯರಿಗೆ ಆಹಾರ ಪದಾರ್ಥಗಳನ್ನು ವಿತರಿಸುವ ಮೂಲಕ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಕಾರ್ಪೋರೇಟರ್ ಭಾಗ್ಯ ಮಹದೇಶ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಆಸ್ಪತ್ರೆಯ ನಿರ್ವಹಣಾ ಸಮಿತಿ ನಿರ್ದೇಶಕ ಪಾಪಣ್ಣ, ಕಾರ್ಯದರ್ಶಿ ಕೆ.ಕೃಷ್ಣ, ಡಾ.ಕೆಂಪೇಗೌಡ, ಡಾ.ರೂಪ, ಡಾ.ದಿವ್ಯಶ್ರೀ, ಪ್ರದೀಪ್, ಪುರುಷೋತ್ತಮ್, ಕೃಪಾನಂದ, ನಾಗು, ಶಿವು, ಮಾದೇಶ್, ಭೈರ, ರಮೇಶ್, ಜಯಂತ್, ವೆಂಕಟೇಶ್ ಹಾಗೂ ಆಸ್ಪತ್ರೆ ಸಿಬ್ಬಂದಿ ಉಪಸ್ಥಿತರಿದ್ದರು.

# ಜಾನಪದ ಕಲಾ ಪ್ರಕಾರಗಳ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜ.13– 2023–24ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯಡಿಯಲ್ಲಿ 15ರಿಂದ 29 ವರ್ಷದೊಳಗಿನ ಪರಿಶಿಷ್ಟ ಜಾತಿ ಮತ್ತು ಪಂಗಡದ ಮೈಸೂರು ವಿಭಾಗದ (ಮೈಸೂರು, ಮಂಗಳೂರು, ಉಡುಪಿ, ಮಡಿಕೇರಿ, ಚಾಮರಾಜನಗರ, ಮಂಡ್ಯ, ಚಿಕ್ಕಮಗಳೂರು ಮತ್ತು ಹಾಸನ) ಯುವಜನರಿಗೆ 8 ದಿನಗಳ ಕಾಲ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜಾನಪದ ಕಲಾ ಪ್ರಕಾರಗಳ ತರಬೇತಿ ಶಿಬಿರ ಆಯೋಜಿಸಲಾಗಿದೆ. ಆಸಕ್ತರು ಅರ್ಜಿ ಸಲ್ಲಿಸಲು ಜ.25 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ನಜರ್‌ಬಾದ್‌ನ ಚಾಮುಂಡಿ ವಿಹಾರ ಕ್ರೀಡಾಂಗಣದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ದೂರವಾಣಿ ಸಂಖ್ಯೆ: 0821–2564179 ಅನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಾ.ಅಮ್ಮಸಂದ್ರ ಸುರೇಶ್‌ಗೆ ಕಸಾಪ ದತ್ತಿ ಪ್ರಶಸ್ತಿ



ಮೈಸೂರು, ಜ.13–ಕನ್ನಡ ಸಾಹಿತ್ಯ ಪರಿಷತ್ ದೀನ–ದಲಿತರ ಮತ್ತು ಶೋಷಿತ ವರ್ಗಗಳ ರಕ್ಷಣೆಗೆ ಶ್ರಮಿಸುವ ವ್ಯಕ್ತಿಗಳ ಕುರಿತ ಸಾಹಿತ್ಯ ಕೃತಿಗೆ ನೀಡುವ 2022ನೇ ಸಾಲಿನ 'ಜಿ.ಆರ್. ರೇವಯ್ಯ ದತ್ತಿ ಪ್ರಶಸ್ತಿ'ಗೆ ಡಾ.ಅಮ್ಮಸಂದ್ರ ಸುರೇಶ್ ಅವರ 'ಮಹಾ ಮಾನವತಾವಾದಿ' ಕೃತಿ ಆಯ್ಕೆಯಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಜಾಮೀನು ಕೊಡಿಸಲು ಕೋರ್ಟ್‌ಗೆ 3 ಬಾರಿ ನಕಲಿ 'ಆಧಾರ್' ಸಲ್ಲಿಸಿದ ವ್ಯಕ್ತಿ ವಿರುದ್ಧ ಪ್ರಕರಣ ದಾಖಲು

ಮೈಸೂರು, ಜ. 13– ಆರೋಪಿಗಳ ಜಾಮೀನಿಗಾಗಿ ವ್ಯಕ್ತಿಯೋರ್ವ ನ್ಯಾಯಾಲಯಕ್ಕೆ ಮೂರು ಬಾರಿ ನಕಲಿ ಆಧಾರ್ ಕಾರ್ಡ್‌ಗಳನ್ನು ನೀಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಶ್ರೀರಂಗಪಟ್ಟಣ ತಾಲೂಕು ದೊಡ್ಡಪಾಳ್ಯ ಗ್ರಾಮದ ಡಿ.ಸಿ. ಮಧು(40) ಆರೋಪಕ್ಕೆ ಗುರಿಯಾದವನಾಗಿದ್ದು, ಈತ ವಿಭಿನ್ನ ಸಂಖ್ಯೆಗಳಿರುವ 3 ಆಧಾರ್ ಕಾರ್ಡ್‌ಗಳನ್ನು ಬಳಸಿ ಆರೋಪಿಗಳಿಗೆ ಜಾಮೀನು ಕೊಡಿಸಿದ್ದಾನೆ ಎಂದು ಮೈಸೂರಿನ 5ನೇ ಜೆಎಂಎಫ್‌ಸಿ ನ್ಯಾಯಾಲಯದ ಶಿರಸ್ತೇದಾರ್ ಕೆ.ಸಿ.ಪ್ರಕಾಶ್ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ರಾಜ್ಯ ಹೈಕೋರ್ಟ್ 2022ರ ನವೆಂಬರ್ ತಿಂಗಳಿನಲ್ಲಿ ಸುತ್ತೋಲೆಯೊಂದನ್ನು ಹೊರಡಿಸಿ, ನ್ಯಾಯಾಲಯದಲ್ಲಿ ಆರೋಪಿಗಳಿಗೆ ಜಾಮೀನು ನೀಡುವವರು ಆಧಾರ್ ಕಾರ್ಡ್ ಕೊಡಬೇಕು ಎಂದು ತಿಳಿಸಿತ್ತು. ನ್ಯಾಯಾಲಯಕ್ಕೆ ಜಾಮೀನು ನೀಡಲು ಬರುವ ಹಲವಾರು ವ್ಯಕ್ತಿಗಳು ಆಧಾರ್ ಕಾರ್ಡ್‌ನಲ್ಲಿ ಕೆಲವು ಮಾರ್ಪಾಡುಗಳನ್ನು ಕಾನೂನುಬಾಹಿರವಾಗಿ ಕಂಪ್ಯೂಟರ್ ಸೆಂಟರ್‌ಗಳಲ್ಲಿ ಮಾಡಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದುದು ಕಂಡುಬಂದ ಹಿನ್ನೆಲೆಯಲ್ಲಿ ಹೀಗೆ ಫೋರ್ಜರಿ ಆಧಾರ್ ಕಾರ್ಡ್ ನೀಡಿದ ಕೆಲವರಿಗೆ ಎಚ್ಚರಿಕೆ ನೀಡಿ ಕಳುಹಿಸಿಕೊಡಲಾಗಿದೆ. ಹೀಗಿದ್ದರೂ ನಕಲಿ ಆಧಾರ್ ಕಾರ್ಡ್ ಅನ್ನು ನ್ಯಾಯಾಲಯಕ್ಕೆ ಕೊಡುವುದು ನಿರಂತರವಾಗಿ ಪುನರಾವರ್ತನೆ ಆಗುತ್ತಿದೆ ಎಂದು ದೂರಿನಲ್ಲಿ ತಿಳಿಸಿರುವ ಪ್ರಕಾಶ್, ಜನವರಿ 4ರಂದು ಡಿ.ಸಿ.ಮಧು ನಕಲಿ ಆಧಾರ್ ಕಾರ್ಡ್ ಅನ್ನು ನ್ಯಾಯಾಲಯಕ್ಕೆ ನೀಡಿದ್ದಾನೆ. ಈತ ಈ ಹಿಂದೆ 2 ಬಾರಿ ವಿಭಿನ್ನ ಸಂಖ್ಯೆಗಳಿರುವ ಆಧಾರ್ ಕಾರ್ಡ್‌ಗಳನ್ನು ನ್ಯಾಯಾಲಯಕ್ಕೆ ನೀಡಿದ್ದು, ಈತ ಮತ್ತು ಆಧಾರ್ ಕಾರ್ಡ್ ಫೋರ್ಜರಿ ಮಾಡುತ್ತಿರುವ ಕೇಂದ್ರಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಅಶೋಕಪುರಂ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# ಇಂದಿನ ಯುವ ಸಮೂಹಕ್ಕೆ ವಿವೇಕವಾಣಿ ಆದರ್ಶ



ಮೈಸೂರು, ಜ. 13– ಮೈಸೂರಿನ ಪಡುವಾರಹಳ್ಳಿಯ ಸ್ನೇಹ ಬಳಗದ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ರಸ್ತೆಯಲ್ಲಿ ಆಧುನಿಕ ಭಾರತದ ಸಾಂಸ್ಕೃತಿಕ ರಾಯಭಾರಿ ಶ್ರೀ ವಿವೇಕಾನಂದರ 162ನೇ ಜಯಂತಿಯನ್ನು ಆಚರಿಸಲಾಯಿತು.

ಇದೇ ವೇಳೆ ಶ್ರೀವಿವೇಕಾನಂದರ ಭಾವಚಿತ್ರಕ್ಕೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ. ರಾಮಕೃಷ್ಣ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ವಿವೇಕಾನಂದರ ವಿವೇಕವಾಣಿ ವ್ಯಸನಮುಕ್ತ ಯುವ ಭಾರತ, ಶಿಸ್ತು, ಸಮಯ ಪರಿಪಾಲನೆ, ಸ್ವದೇಶಿ ವಸ್ತುಗಳ ಬಳಕೆ, ಏಕಾಗ್ರತೆ, ಸಾಧನೆಯ ಹಾದಿಗೆ ಶ್ರಮದ ಸಾರ್ಥಕತೆ, ಏಳಿ ಎದ್ದೇಳಿ ಗುರಿ ಮುಟ್ಟುವವರೆಗೂ ನಿಲ್ಲದಿರಿ, ಇಂದಿನ ಯುವ ಸಮೂಹಕ್ಕೆ ಆದರ್ಶವಾಗಿದೆ. ಬ್ರಿಟಿಷರ ಆಡಳಿತದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ದಬ್ಬಾಳಿಕೆ ಅತೀ ಹೆಚ್ಚಾಗಿದ್ದ ಸಮಯದಲ್ಲಿ ಜಾತಿ, ಧರ್ಮಗಳ ಒಳಪಂಗಡಗಳ ಗೊಂದಲದ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಸಂಚರಿಸಿ ಸ್ವದೇಶಿ ಸಂಸ್ಕೃತಿಯನ್ನು ರಾಷ್ಟ್ರಾದ್ಯಂತ ಸಾರುತ್ತ ನಾವೆಲ್ಲರೂ ಭಾರತೀಯರೆಂದರು. ಇಂದಿಗೆ ನಮ್ಮ ಭಾರತ ದೇಶಕ್ಕೆ ಲಕ್ಷಾಂತರ ವಿದೇಶಿಗರು ಪ್ರವಾಸಕ್ಕೆ, ಸಂಶೋಧನೆಗೆ ಬರುತ್ತಾರೆಂದರೆ ಅದಕ್ಕೆ ಆಧುನಿಕ ಭಾರತದ ರಾಯಭಾರಿಯಾದ ಸ್ವಾಮಿ ವಿವೇಕಾನಂದರು 1893ರಲ್ಲಿ ಅಮೇರಿಕಾದ ಚಿಕಾಗೋನಲ್ಲಿ ನೀಡಿದ ಭಾಷಣವೇ ಕಾರಣ. ಆಗ ಇಡೀ ವಿಶ್ವವೇ ಭಾರತದತ್ತ ಕಣ್ಣಾಯಿಸಿತು. ಇಂದಿನ ನಮ್ಮ ಯುವ ಸಮೂಹಕ್ಕೆ ಸ್ವಾಮಿ ವಿವೇಕಾನಂದರು ಆದರ್ಶ ವ್ಯಕ್ತಿಯೆಂದರು.

ಮಾಜಿ ನಗರಪಾಲಿಕೆ ಸದಸ್ಯ ಎಂ. ಚಿಕ್ಕವೆಂಕಟು, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕರಾದ ಸಿ.ಡಿ.ಕುಮಾರ್, ರಾಘವ್ ಎಂ.ಗೌಡ, ಬಿ.ಕುಮಾರ್, ಯುವ ಮುಖಂಡರಾದ ಅಜಯ್ ಶಾಸ್ತ್ರಿ, ಸುರೇಂದ್ರ, ಕೇಬಲ್ ಕಿಟ್ಟಿ, ಚಾಮರಾಜ ಆಶ್ರಯ ಸಮಿತಿ ಮಾಜಿ ಸದಸ್ಯ ಮಂಜುನಾಥಪುರ ಎಂ.ಮಹೇಶ್ ಭಾಗವಹಿಸಿದ್ದರು.

# ಸಾಂಪ್ರದಾಯಿಕ ಅಡುಗೆ ಪಾತ್ರೆ, ಉಡುಪುಗಳ ಪ್ರದರ್ಶನ, ಮಾರಾಟ



ಮೈಸೂರು, ಜ.13(ಎಂಕೆ)– ಮೈಸೂರಿನ ನಜರ್‌ಬಾದ್‌ನಲ್ಲಿರುವ ವಿಂಡ್ ಚೈಮ್ಸ್‌ನಲ್ಲಿ ಸಂಕ್ರಾಂತಿ ಹಬ್ಬದ ಅಂಗವಾಗಿ ಎರಡು ದಿನಗಳ ಹಳೇ ಕಾಲದ ಸಾಂಪ್ರದಾಯಿಕ ಅಡುಗೆ ಪಾತ್ರೆಗಳು ಹಾಗೂ ಉಡುಪುಗಳು, ಡಿಸೈನರ್ ಸ್ಯಾರಿಸ್, ವಿದೇಶಿ ಉಡುಪುಗಳ ಪ್ರದರ್ಶನ ಮತ್ತು ಮಾರಾಟ 'ಫೆಸ್ಟಿವಿವಾ' ಮೇಳಕ್ಕೆ ಚಾಲನೆ ನೀಡಲಾಯಿತು. ಮಹಿಳಾ ಉದ್ಯಮಿಗಳಾದ ಅದಿತಿ ಸುಭಾಷ್ ಮತ್ತು ವಿದ್ಯಾ ಗಣೇಶ್ ಪ್ರಸಾದ್ ದೀಪ ಬೆಳಗಿಸುವ ಮೂಲಕ ಮೇಳ ಉದ್ಘಾಟಿಸಿದರು. ಬೆಂಗಳೂರಿನ ಜಿಶ್ತಾ ಸಾಂಪ್ರದಾಯಿಕ ಪಾತ್ರೆಗಳಲ್ಲಿ ಅಡುಗೆಯನ್ನು ಪ್ರದರ್ಶಿಸಿದರು. ಎಲ್ ಟು ಆರ್ ಆರ್ಗನೈಸರ್‌ನ ಸುಚಿತಾ ಸಂಜಯ್, ಶುಭಾ ಸಂಜಯ್ ಅರಸ್, ಮೀರಾ ರಾಧಾ ಮತ್ತಿತರರಿದ್ದರು.

# ಫೇಸ್‌ಬುಕ್‌ನಲ್ಲಿ ಪರಿಚಯವಾದ ವ್ಯಕ್ತಿಯಿಂದ ಬೆಂಗಳೂರು ವಕೀಲರ ಸಂಘದ ಉಪಾಧ್ಯಕ್ಷರ ಚಿನ್ನಾಭರಣ ಕಳವು

ಮೈಸೂರು,ಜ.13–ಫೇಸ್‌ಬುಕ್‌ನಲ್ಲಿ ಪರಿಚಯವಾದ ವ್ಯಕ್ತಿಯೋರ್ವ ಬೆಂಗಳೂರು ವಕೀಲರ ಸಂಘದ ಉಪಾಧ್ಯಕ್ಷರ ಚಿನ್ನಾಭರಣ ಕಳವು ಮಾಡಿರುವ ಘಟನೆ ನಡೆದಿದೆ.

ಕ್ರೈಂ ಬಾಕ್ಸ್


ಬೆಂಗಳೂರಿನ ಚಂದ್ರಾ ಲೇಔಟ್ ನಿವಾಸಿಯಾಗಿರುವ ಬೆಂಗಳೂರು ವಕೀಲರ ಸಂಘದ ಉಪಾಧ್ಯಕ್ಷ ಸಿ. ಗಜೇಂದ್ರ(50) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಫೇಸ್‌ಬುಕ್‌ನಲ್ಲಿ ಇವರಿಗೆ ಪರಿಚಯವಾಗಿದ್ದ ಮುರಳಿ ಎಂಬ ವ್ಯಕ್ತಿಯು ತಾನು ಮೈಸೂರಿನವನಾಗಿದ್ದು, ಚೀಟಿ ವ್ಯವಹಾರ ನಡೆಸುತ್ತಿದ್ದೇನೆ ಎಂದು ಹೇಳಿಕೊಂಡಿದ್ದನಂತೆ. ನಂತರ ಅವರ ಫೋನ್ ನಂಬರ್ ಪಡೆದು ಆಗಿಂದಾಗ್ಗೆ ಕರೆ ಮಾಡುವುದು ಹಾಗೂ ಮೆಸೇಜ್ ಮಾಡುವುದರ ಮೂಲಕ ಸ್ನೇಹ ಸಂಪಾದಿಸಿದ್ದಾನೆ. ಗಜೇಂದ್ರ ಅವರು ಜ. 10ರಂದು ರಾತ್ರಿ ಮೈಸೂರಿನ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಗ್ರ್ಯಾಂಡ್ ಮರ್ಕ್ಯೂರಿ ಹೋಟೆಲ್‌ನ 104ನೇ ಸಂಖ್ಯೆಯ ಕೊಠಡಿಯಲ್ಲಿ ವಾಸ್ತವ್ಯ ಹೂಡಿದ್ದರು. ಈ ವೇಳೆ ಅವರು ಕೊಠಡಿಗೆ ಮುರಳಿಯನ್ನು ಕರೆಸಿಕೊಂಡು, ಇಬ್ಬರೂ ಕುಶಲೋಪರಿ ಮಾತನಾಡಿ, ಮದ್ಯಪಾನ ಮಾಡಿದ್ದಾರೆ. ಅಂದು ರಾತ್ರಿ ಗಜೇಂದ್ರ ಅವರು ಮುರಳಿಯನ್ನು ತಮ್ಮ ಕೊಠಡಿಯಲ್ಲೇ ಮಲಗಿಸಿಕೊಂಡಿದ್ದು, ಜ.11ರಂದು ಬೆಳಗ್ಗೆ 7 ಗಂಟೆ ಸುಮಾರಿಗೆ ಎದ್ದು ನೋಡಿದಾಗ ತಮ್ಮ ರೂಂನಲ್ಲಿದ್ದ ಮುರಳಿ 146 ಗ್ರಾಂ ತೂಕದ ಚಿನ್ನಾಭರಣ ಹಾಗೂ 1 ಜೊತೆ ಬಟ್ಟೆ ಇದ್ದ ಸೂಟ್‌ಕೇಸ್ ಕಳವು ಮಾಡಿಕೊಂಡು ಹೋಗಿರುವುದು ಗೊತ್ತಾಗಿದೆ. ಈ ಸಂಬಂಧ ಮಂಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಲಾಭದ ಆಮಿಷ: 3.54 ಲಕ್ಷ ಕಳೆದುಕೊಂಡ ವಿದ್ಯಾರ್ಥಿ

ಮೈಸೂರು,ಜ.13–ಹಣ ಹೂಡಿಕೆ ಮಾಡಿದರೆ ಎರಡರಷ್ಟು ಲಾಭ ಬರುತ್ತದೆ ಎಂದು ಆಮಿಷವೊಡ್ಡಿ ವಿದ್ಯಾರ್ಥಿಗೆ ಆನ್‌ಲೈನ್ ಮೂಲಕ 3.54 ಲಕ್ಷ ರೂ. ವಂಚಿಸಲಾಗಿದೆ. ಮೈಸೂರಿನ ಕುವೆಂಪುನಗರ ಜೆಟಿಕೆ ಲೇಔಟ್ ನಿವಾಸಿಯಾಗಿರುವ ವಿದ್ಯಾರ್ಥಿ ಎಸ್.ಕರಣ್ (21) ವಂಚನೆಗೊಳಗಾದವನಾಗಿದ್ದು, ಈತನಿಗೆ ವಂಚಕರು ಟೆಲಿಗ್ರಾಂ ಲಿಂಕ್ ಕಳುಹಿಸಿ, ಹಣ ಹೂಡಿಕೆ ಮಾಡಿದರೆ ಡಬಲ್ ಮಾಡಿಕೊಡುವುದಾಗಿ ಆಮಿಷವೊಡ್ಡಿದ್ದಾರೆ. ಇದನ್ನು ನಂಬಿದ ಈತ ಹಂತ ಹಂತವಾಗಿ 3.54 ಲಕ್ಷ ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾನೆ. ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಿಧನ

## ನಾಗರತ್ನ



ಮೈಸೂರು, ಜ. 13– ಮೈಸೂರಿನ ಶ್ರೀರಾಂಪುರ ಎರಡನೇ ಹಂತ, ಎಸ್‌ಬಿಎಂ ಕಾಲೋನಿ ನಿವಾಸಿ ದಿವಂಗತ ಅನಂತಮೂರ್ತಿ (ಮೂರ್ತಿ ಸೌಂಡ್ ಸರ್ವೀಸ್) ಅವರ ಪತ್ನಿ ಹಾಗೂ ಸರಸ್ವತಿಪುರಂನಲ್ಲಿರುವ ಸಪ್ತಸ್ವರ ಕಾಂಪ್ಲೆಕ್ಸ್ ಮಾಲೀಕರಾದ ನಾಗರತ್ನ (79) ಶನಿವಾರ (ಜ.6) ಕಾಮಾಕ್ಷಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಮೃತರು ಓರ್ವ ಪುತ್ರಿ, ಓರ್ವ ಪುತ್ರ, ಅಳಿಯ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಪಾರ್ಥಿವ ಶರೀರವನ್ನು ಮೈಸೂರು ಮೆಡಿಕಲ್ ಕಾಲೇಜಿಗೆ ದಾನ ಮಾಡಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ರಾಜೇಂದ್ರ ಪ್ರಸಾದ್



ಮೈಸೂರಿನ ಬೋಗಾದಿಯ ಟೆಲಿಕಾಂ ಬಡಾವಣೆಯ ನಿವಾಸಿ ರಾಜೇಂದ್ರ ಪ್ರಸಾದ್ (67) ಶುಕ್ರವಾರ ನಿಧನರಾದರು. ಇವರು ಎಲ್‌ಐಸಿ ಶಾರದಾದೇವಿನಗರ ಶಾಖೆಯಲ್ಲಿ ವಿಮಾ ಪ್ರತಿನಿಧಿಯಾಗಿದ್ದರು. ಕಳೆದ ಎರಡು ತಿಂಗಳ ಹಿಂದೆ ರಸ್ತೆ ಅಪಘಾತದಲ್ಲಿ ತಲೆಗೆ ತೀವ್ರ ಪೆಟ್ಟು ಬಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು. ಇವರ ಅಂತ್ಯಕ್ರಿಯೆ ಶುಕ್ರವಾರ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**14.1.2024 ಭಾನುವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024ರಿಂದ 23.01.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಧನಿಷ್ಠ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ**

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ ಮಕರ ದೀಪೋತ್ಸವ ಸೇವಾ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಚರ್ಮರೋಗಿಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10ರಿಂದ.

■ **ಅಗಸ್ತ್ಯ ಸಿದ್ಧ ಸಾಹಿತ್ಯ ಸಂಶೋಧನಾ ಕೇಂದ್ರ :** ಅಗಸ್ತ್ಯ ಸಿದ್ಧ ವೈದ್ಯ ಪದ್ಧತಿ ಗ್ರಂಥ ಲೋಕಾರ್ಪಣೆ ಸಮಾರಂಭ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ಹಿರಿಯ ನ್ಯಾಯವಾದಿ ಓ ಶ್ಯಾಂಭಟ್, ಡಾ. ಅರುಳ್ ಅಮುದನ್, ಡಾ. ಸೆಲ್ವಂ ಷಣ್ಮುಗಂ, ಡಾ. ಎನ್.ಎಸ್. ರಾಮಚಂದ್ರ, ಡಾ. ರಾಧಾಕೃಷ್ಣರಾವ್, ಡಾ. ಎ.ಎಸ್. ಚಂದ್ರಶೇಖರ್, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆ ಆವರಣ, ಬೆಳಗ್ಗೆ 10ಕ್ಕೆ.

■ **ಬಸವ ಸಮಿತಿ :** ಶರಣ ಸಂಗಮ–289, ಶ್ರೀ ಇಮ್ಮಡಿ ಮುರುಗೀಸ್ವಾಮಿಗಳಿಂದ ವಚನ ಸಾಹಿತ್ಯ ಮತ್ತು ಆಧುನಿಕ ಸಾಹಿತ್ಯದಲ್ಲಿ ವ್ಯಕ್ತಿತ್ವ ವಿಕಸನ ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಬಸವಮಾರ್ಗ ವ್ಯಸನಮುಕ್ತ ಕೇಂದ್ರ:** ಉಚಿತ ಕುಡಿತ ಬಿಡಿಸುವ ಶಿಬಿರದ ಸಮಾರೋಪ ಸಮಾರಂಭ, ಉಪಸ್ಥಿತರು: ಶಾಸಕ ಕೆ.ಹರೀಶ್‌ಗೌಡ, ಡಾ.ಬಿ.ಎನ್.ರವೀಶ್, ಬ್ರಹ್ಮಕುಮಾರಿ ಈಶ್ವರಿ ವಿದ್ಯಾಲಯದ ರಾಜಯೋಗ ಉಪನ್ಯಾಸಕಿ ಬಿ.ಕೆ. ಸಂಧ್ಯಾ, ಸ್ಥಳ: ಬಸವ ಮಾರ್ಗ, ಹೆಬ್ಬಾಳು ರಿಂಗ್ ರಸ್ತೆ, ಬೆಳಗ್ಗೆ 11ಕ್ಕೆ.

■ **ಕರಾವಳಿ ಯಕ್ಷಗಾನ ಕೇಂದ್ರ:** ವಾರ್ಷಿಕೋತ್ಸವ, ಮಧ್ಯಾಹ್ನ 3 ಗಂಟೆಗೆ ತೆಂಕುತಿಟ್ಟು ವಿದ್ಯಾರ್ಥಿಗಳಿಂದ 'ನರಕಾಸುರ ಮೋಕ್ಷ' ಯಕ್ಷಗಾನ ಪ್ರದರ್ಶನ, ಹಿಮ್ಮೇಳದಲ್ಲಿ: ಲಕ್ಷ್ಮೀನಾರಾಯಣ ಭಟ್, ಬಟ್ಯಮೂಲೆ–ಭಾಗವತರು, ಪೃಥ್ವಿ ಬಡಕ್ಕಿಲ–ಮದ್ದಳೆ, ಅರ್ಜುನ್ ಕೊರ್ಡೇಲ್–ಚಂಡೆ, ಅಭಿಷೇಕ್ ಭಟ್ ಚಣಿಲ–ಚಕ್ರತಾಳ, ನಿರ್ದೇಶನ: ಅಭಿಷೇಕ್ ಚಣಿಲ, ಈಶ್ವರಚಂದ್ರ ಭಟ್, ಸಂಜೆ 4.30ಕ್ಕೆ ಸಭಾ ಕಾರ್ಯಕ್ರಮ, ಉದ್ಘಾಟನೆ: ಗಣ್ಯರಿಂದ, ಸಭಾಧ್ಯಕ್ಷತೆ: ಕೇಂದ್ರದ ಅಧ್ಯಕ್ಷ ಶ್ರೀಧರ ಐತಾಳ, ಮುಖ್ಯ ಅಭ್ಯಾಗತರು: ಡಾ.ಸಂಜಯ್, ಡಾ.ನಾರಾಯಣ ಹೆಗಡೆ, ಸಂಜೆ 5.30ರಿಂದ ಬಡಗುತಿಟ್ಟು ವಿದ್ಯಾರ್ಥಿಗಳಿಂದ ಗಾಂಡೀವ ನಿಂದನೆ ಯಕ್ಷಗಾನ ಪ್ರದರ್ಶನ, ಹಿಮ್ಮೇಳದಲ್ಲಿ: ಪ್ರಸನ್ನ ಹೆಗಡೆ–ಭಾಗವತರು, ಅನಂತಪದ್ಮನಭ ಪಾಠಕ್–ಮದ್ದಳೆ, ಕಾರ್ತಿಕ್ ಧಾರೇಶ್ವರ–ಚಂಡೆ, ಸ್ಥಳ: ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಕುವೆಂಪುನಗರ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕಲಾ ಸಂದೇಶ ಪ್ರತಿಷ್ಠಾನ :** 20ನೇ ವರ್ಷದ ಸಂಭ್ರಮದ ಅಂಗವಾಗಿ ಸಂಜೆ 6 ರಿಂದ ಗುರು ವಿದುಷಿ ಆಶಾ ಅಡಿಗ ಆಚಾರ್ಯ ಮತ್ತು ಕು. ಅದಿತಿ ಆಚಾರ್ಯ ಅವರಿಂದ ಭರತನಾಟ್ಯ ನೃತ್ಯರೂಪಕ : ತ್ರಿವೇದಿ, ವಿದ್ವಾನ್ ಶರತ್ ಟಿ.ಎಸ್.–ನಟುವಾಂಗ, ವಿದುಷಿ ವಸುಧಾ ಬಾಲಕೃಷ್ಣ–ಗಾಯನ, ವಿದ್ವಾನ್ ಎಸ್.ವಿ. ಬಾಲಕೃಷ್ಣ–ಮೃದಂಗ, ವಿದ್ವಾನ್ ಗೋಪಾಲ್ ವೆಂಕಟರಮಣ–ವೀಣೆ, ವಿದ್ವಾನ್ ನಿತೀಶ್ ಅಮ್ಮಣ್ಣಾಯ–ಕೊಳಲು, ವಿದ್ವಾನ್ ಲಕ್ಷ್ಮೀನಾರಾಯಣ್ ಜಿ. (ಶಿವು)–ರಿದಂಪ್ಯಾಡ್, ಸಂಜೆ 7 ರಿಂದ ಭರತನಾಟ್ಯ ನೃತ್ಯರೂಪಕ: ದ್ವಾದಶ ಜ್ಯೋತಿರ್ಲಿಂಗ, ಕಲಾವಿದರು ಅನೂಷಾ ವರುಣ್, ಹರ್ಷಿಣಿ ಪ್ರಜ್ವಲ್, ಹರಿಕೃಷ್ಣನ್, ಡಾ.ಸಿಂಧು ಪ್ರಶಾಂತ್, ಶಿಲ್ಪ ಕಾಂತರಾಜು, ಎಂ.ಟಿ.ವಸುಂಧರಾ, ಆರ್.ಶ್ರುತಿ, ಪೂರ್ವಿಕಾ ಚಂದನಂ, ಪರಿಕಲ್ಪನೆ: ವಿದುಷಿ ಡಾ.ಜ್ಯೋತಿಶಂಕರ್, ನೃತ್ಯ ಸಂಯೋಜನೆ: ಅನೂಷಾ ವರುಣ್, ಶ್ರೀಮತಿ ಹರ್ಷಿಣಿ ಪ್ರಜ್ವಲ್, ಕೆ.ಸಂದೇಶ್ ಭಾರ್ಗವ್–ನಟುವಾಂಗ, ವಿದ್ವಾನ್ ಶ್ರೀಹರ್ಷ–ಗಾಯನ, ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಗೋಪಾಲ್ ವೆಂಕಟರಮಣ–ವೀಣೆ, ವಿದ್ವಾನ್ ನಿತೀಶ್ ಅಮ್ಮಣ್ಣಾಯ–ಕೊಳಲು, ವಿದ್ವಾನ್ ವಿನಯ್‌ಕುಮಾರ್ ರಂಗಧೋಳ್–ರಿದಂಪ್ಯಾಡ್, ಸ್ಥಳ: ಗಾನಭಾರತೀಯ ಶ್ರೀಮತಿ ರಮಾಬಾಯಿ ಗೋವಿಂದರಾವ್ ರಂಗಮಂದಿರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ನಾದವಿದ್ಯಾಲಯ ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡ್ಯಾನ್ಸ್ :** ಗುರು ವಿದುಷಿ ಶ್ರೀಮತಿ ಮಿತ್ರಾ ನವೀನ್ ಅವರ ಶಿಷ್ಯೆ ಸುನೀತಾ ರತೀಶ್ ಅವರ ಭರತನಾಟ್ಯ ರಂಗಪ್ರವೇಶ, ಅತಿಥಿಗಳು : ರಾಜಮಾತೆ ಪ್ರಮೋದಾದೇವಿ ಒಡೆಯರ್, ಶಾಸಕರಾದ ಜಿ.ಟಿ. ದೇವೇಗೌಡ, ಕೆ. ಹರೀಶ್‌ಗೌಡ, ಆರ್ಯ ಈಡಿಗರ ಸಂಘ ಮೈಸೂರು–ಚಾಮರಾಜನಗರ ಜಿಲ್ಲೆ ಅಧ್ಯಕ್ಷ ಡಾ. ಎಂ.ಕೆ. ಪೋತರಾಜ್, ಮೈಸೂರು ವೈದ್ಯಕೀಯ ಕಾಲೇಜು ಡೀನ್ ಮತ್ತು ನಿರ್ದೇಶಕರಾದ ಶ್ರೀಮತಿ ಡಾ.ಕೆ.ಆರ್. ದಾಕ್ಷಾಯಿಣಿ, ನೂಪುರ ಕಲಾವಿದರು ಟ್ರಸ್ಟ್ ನಿರ್ದೇಶಕ ಪ್ರೊ. ಕೆ. ರಾಮಮೂರ್ತಿರಾವ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5ಕ್ಕೆ.

■ **ರಂಗಾಯಣ :** ರಂಗಾಯಣದ ಸಂಸ್ಥಾಪನಾ ದಿನದ ಅಂಗವಾಗಿ ರಂಗ ಸಂಗೀತ ಕಾರ್ಯಕ್ರಮ, ಸ್ಥಳ: ಬಿ.ವಿ. ಕಾರಂತ ರಂಗ ಚಾವಡಿ, ಸಂಜೆ 5.30ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ (ಮೈಸೂರು) :** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15ರಿಂದ.

■ **ರಂಗಾಯಣ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ:** ಮೈಸೂರು ಸಂಕ್ರಾಂತಿ ರಂಗಹಬ್ಬ, ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರದ ಕಲಾವಿದರಿಂದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಿರಚಿತ ಕಾಕನಕೋಟೆ ನಾಟಕ ಪ್ರದರ್ಶನ, ನಿರ್ದೇಶನ: ಎಸ್.ರಾಮನಾಥ, ಸ್ಥಳ: ವನರಂಗ, ರಂಗಾಯಣ, ಸಂಜೆ 6.30ಕ್ಕೆ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಹೆಚ್.ಎ.ಪುಟ್ಟಸ್ವಾಮಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸೈಬರ್ ಮಿತ್ರ–ಸೈಬರ್ ಸುರಕ್ಷಿ ವಾರದ ಮಾತು, ಪ್ರಸ್ತುತಿ–ಸತೀಶ್ ವಿ.ಪ್ರಾಯೋಜಕರು cyber mitra.in ಮೈಸೂರು, 6.40 ಪದಸಂಸ್ಕೃತಿ, ಪ್ರಸ್ತುತಿ–ಟಿ.ಎಸ್.ಗೋಪಾಲ್, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ ಮಂಡ್ಯ ಜಿಲ್ಲೆಯಲ್ಲಿ ಆಯುಷ್ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿರುವ ವಿವಿಧ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು ಕುರಿತು ಮಂಡ್ಯ ಜಿಲ್ಲೆಯ ಆಯುಷ್ ಅಧಿಕಾರಿ ಡಾ.ಬಿ.ಎಸ್.ಸೀತಾಲಕ್ಷ್ಮಿ ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ–ಕಥೆ ಕೇಳು ಪುಟ್ಟಾ–ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ–ಸಂಕ್ರಾಂತಿ ಕುರಿತ ಕಾರ್ಯಕ್ರಮ–ನಡೆಸಿಕೊಡುತ್ತಾರೆ, ಸ್ವರ ತರಂಗ ಸಂಸ್ಥೆಯ ಮಕ್ಕಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.30 ದೇವರನಾಮ–ಎ.ಆರ್.ರಾಗಿಣಿ, 12.45 ಜನಪದ ಸಂಗೀತ, 1.20 ಭಾವಗೀತೆ–ಅಜಯ್ ಜಿ.ಪ್ರಸಾದ್, 4.00 ಯಕ್ಷಗಾನ ತಾಳಮದ್ದಲೆ–ಕನಕ–ಜಾನಕಿ–ಭಾಗ 1, ಭಾಗವತರು–ಅನಂತ ಹೆಗಡೆ ದಂತಳಿಗೆ ಮದ್ದಲೆ–ಅನಂತ ಪದ್ಮನಾಭ ಫಾಟಕ್, ಪರಿಕಲ್ಪನೆ–ದಿವಾಕರ ಹೆಗಡೆ, 6.50 ಕೃಷಿರಂಗ–ನಾಯಿಗಳ ಸಾಕಾಣಿಕೆ ಕುರಿತು ಡಾ.ಬಿ.ಎನ್.ಷಡಕ್ಷರ ಮೂರ್ತಿ ಅವರೊಂದಿಗೆ ಸಂದರ್ಶನ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ರೋನು ಮಜುಂದಾರ್–ವೇಣುವಾದನ

# ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮೀಜಿ ವಿಚಾರಧಾರೆಗಳು ಪಸರಿಸಲಿ

## ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶಯ



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶನಿವಾರ ಯೋಗ ಶಿಕ್ಷಕ ಎನ್.ಅನಂತ ಸಂಪಾದಿತ ಮಲ್ಲಾಡಿಹಳ್ಳಿಯ ಮಹಾಯೋಗಿ ಕೃತಿಯನ್ನು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಲೋಕಾರ್ಪಣೆ ಮಾಡಿದರು.

ಮೈಸೂರು, ಜ.13(ಬಿಎಲ್‌ಯು)– ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮೀಜಿಯವರ ವಿಚಾರಧಾರೆಗಳು ಪೀಳಿಗೆಯಿಂದ ಪೀಳಿಗೆಗೆ ಪಸರಿಸಲಿ ಎಂದು ಮೈಸೂರಿನ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹೇಳಿದರು.

ನಗರದ ಗಣಪತಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಇಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಹಿಮಾಲಯ ಪ್ರತಿಷ್ಠಾನ ಸಂಯುಕ್ತವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯೋಗ ಶಿಕ್ಷಕ ಎನ್.ಅನಂತ ಸಂಪಾದಿತ ಕೃತಿ ಮಲ್ಲಾಡಿಹಳ್ಳಿಯ ಮಹಾಯೋಗಿ ಲೋಕಾರ್ಪಣೆ ಮಾಡಿ ಮಾತನಾಡಿದ ಶ್ರೀಗಳು, ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮೀಜಿ ಸರಳರಲ್ಲಿ ಸರಳರಾಗಿ ಉದಾತ್ತ ಚಿಂತನೆ ಹೊಂದಿದ್ದ ಮಹಾ ಯೋಗಿ ಎಂದು ಅಭಿಪ್ರಾಯಪಟ್ಟರು.

ಶ್ರೀ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮೀಜಿ ನಿಸ್ವಾರ್ಥಿಯಾಗಿದ್ದರು. ತಮಗಾಗಿ ಏನನ್ನು ಅಪೇಕ್ಷಿಸದೆ ಸಮಾಜದ ಶ್ರೇಯೋಭಿವೃದ್ಧಿಗಾಗಿ ತಮ್ಮನ್ನು ಅರ್ಪಿಸಿಕೊಂಡರು ಎಂದು ಶ್ರೀಗಳು ಹೇಳಿದರು.

ಈ ಕೃತಿ ಕರ್ತೃ ಅನಂತ ಅವರು ಕೃಷ್ಣಮಾಚಾರ್ಯ ಹಾಗೂ ಬಿಕೆಎಸ್ ಅಯ್ಯಂಗಾರ್ ಸೇರಿದಂತೆ ಹಲವು ಕೃತಿಗಳನ್ನು ಸಮಾಜಕ್ಕೆ ನೀಡಿದ್ದಾರೆ. ಯೋಗ ಸಾಹಿತಿಯಾಗಿ ಇನ್ನು ಹಲವು ಕೃತಿಗಳನ್ನು ಹೀಗೆ ಹೊರ ತರಲಿ ಎಂದು ಅವಧೂತ ದತ್ತ ಪೀಠದ ಉತ್ತರ ಪೀಠಾಧಿಪತಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಆಶಿಸಿದರು.

ಕೃತಿ ಕರ್ತೃ ಎನ್.ಅನಂತ, ಸಂಸ್ಕೃತ ವಿದುಷಿ ಡಾ.ಕೆ.ಲೀಲಾ ಪ್ರಕಾಶ್, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಕಾಶ್ ಬಾಬು ನಿರೂಪಣೆ ಮಾಡಿದರು, ಲತಾ ಮೋಹನ್ ವಂದಿಸಿದರು.

# ರಾಜ್ಯಸಭೆಗೆ ಅವಕಾಶ ಮಾಡಿಕೊಡಿ


## ಅಮಿತ್ ಶಾ ಬಳಿ ವಿ.ಸೋಮಣ್ಣ ಮನವಿ



**ನವದೆಹಲಿ:** ಮಾಜಿ ಸಚಿವ, ಬಿಜೆಪಿ ನಾಯಕ ವಿ.ಸೋಮಣ್ಣ ಶನಿವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿದ್ದಾರೆ. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಸಭೆಗೆ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದ್ದೇನೆ. ಲೋಕಸಭಾ ಚುನಾವಣೆಯಲ್ಲಿ ಯಾವುದಾದರೂ 3 ಕ್ಷೇತ್ರಗಳ ಕೆಲಸ ಕೊಡಿ, ಗೆಲ್ಲಿಸಿಕೊಂಡು ಬರುವುದಾಗಿ ಹೇಳಿದ್ದೇನೆ. ಸಭೆ ಫಲಪ್ರದವಾದ ವಿಶ್ವಾಸವಿದೆ ಎಂದರು.

ಸೋಮಣ್ಣ ಚಾಮರಾಜನಗರ ಮತ್ತು ವರುಣ ವಿಧಾನಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ವಿರುದ್ಧ ಸೋತಾಗಿನಿಂದ ಅತೃಪ್ತರಾಗಿದ್ದಾರೆ. ಈ ಹಿಂದೆ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದರು. ಇತ್ತೀಚೆಗೆ ತುಮಕೂರಿನಲ್ಲಿ ಶಕ್ತಿ ಪ್ರದರ್ಶನ ಸಭೆ ನಡೆಸಿ, ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ಉತ್ಸುಕರಾಗಿದ್ದಾರೆ ಎಂಬ ಊಹಾಪೋಹ ಹರಿದಾಡಿತ್ತು ಆದರೆ, ರಾಜ್ಯಸಭೆಯಲ್ಲಿ ಅವಕಾಶ ಕಲ್ಪಿಸುವಂತೆ ಕೋರಿರುವುದಾಗಿ ಸೋಮಣ್ಣ ತಿಳಿಸಿದ್ದಾರೆ. ನನ್ನ ಪರಿಸ್ಥಿತಿ ಬಗ್ಗೆ ಶಾ ತುಂಬಾ ಸಹಾನುಭೂತಿ ವ್ಯಕ್ತಪಡಿಸಿದರು. ನನ್ನನ್ನು ಮನೆಯಲ್ಲಿ ಕೂರಿಸುವ ಪ್ರಶ್ನೆಯೇ ಇಲ್ಲ ಎಂದು ಶಾ ಹೇಳಿದರು. ಅವರೊಂದಿಗಿನ ಸಕಾರಾತ್ಮಕ ಭೇಟಿ ನಂತರ ತೃಪ್ತಿಯಾಗಿದೆ. ನಾನು ಎಲ್ಲಾ ವಿವರಗಳನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ. ಆದರೆ ಕೆಲವು ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಭರವಸೆ ನೀಡಲಾಗಿದೆ ಎಂದರು.

# 40 ವರ್ಷಗಳಿಂದ ನಾನು ರಾಜಕಾರಣ ಮಾಡುತ್ತಿದ್ದೇನೆ: ಬ್ಲಾಕ್‌ಮೇಲ್‌ಗೆ ಹೆದರಲ್ಲ



ಹಾಸನ, ಜ.13– ಕಳೆದ 40 ವರ್ಷಗಳಿಂದ ರಾಜಕಾರಣ ಮಾಡುತ್ತಿದ್ದೇನೆ. ಬ್ಲಾಕ್‌ಮೇಲ್‌ಗೆ ನಾನು ಹೆದರುವುದಿಲ್ಲ ಎಂದು ವಕೀಲ ಹಾಗೂ ಬಿಜೆಪಿ ಮುಖಂಡ ದೇವರಾಜೇಗೌಡಗೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ತಿರುಗೇಟು ನೀಡಿದ್ದಾರೆ.

ನಗರದಲ್ಲಿ ಮಾತನಾಡಿದ ಅವರು, ಕೆಲವರು ರಾಜಕೀಯವಾಗಿ ನನ್ನನ್ನು ಮುಗಿಸಲು ಸಂಚು ಮಾಡಿದ್ದಾರೆ. ಆರೋಪ ಹಾಗೂ ಅಪಪ್ರಚಾರಕ್ಕೆ ಕಾನೂನು ರೀತಿ ಉತ್ತರ ಕೊಡುವೆ. ಬೇರೆಯವರ ಬಳಿ ಬ್ಲಾಕ್‌ಮೇಲ್ ಮಾಡಿ ಯಶಸ್ವಿ ಆಗಿರಬಹುದು. ಅಂಥದೆಲ್ಲಾ ನನ್ನ ಬಳಿ ಆಗಲ್ಲ ಎಂದು ದೇವರಾಜೇಗೌಡ ವಿರುದ್ಧ ಕಿಡಿಕಾರಿದ್ದಾರೆ ನನ್ನ ವಿರುದ್ಧ ಮಾಡಿರುವ ಆರೋಪಗಳ ಬಗ್ಗೆ ತನಿಖೆಗೆ ಸಿದ್ಧನಿದ್ದೇನೆ. ನಾವು ಭ್ರಷ್ಟಾಚಾರ ಮಾಡಿದ್ದರೆ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಿ. ಅದೇನೋ ತೋರಿಸುವೆ ಅಂದಿದ್ದಾರಲ್ಲ ಅದನ್ನು ಅವರು ತೋರಿಸಲಿ ಎಂದರು. ಸೂರಜ್ ವಿರುದ್ಧ ಕೇಸ್ ಹಾಕಿದ್ದರು. ಏನಾಯ್ತು. ನಾನು ಅನ್ಯಾಯ ಮಾಡಿದ್ದರೆ ಮಾಧ್ಯಮದವರು ತೋರಿಸಲಿ. ಸಮಾಜದಲ್ಲಿ ಮಹತ್ವ ಇಲ್ಲದವರಿಗೆ ಬೆಲೆ ಕೊಡಬೇಡಿ. 9 ತಿಂಗಳಿಂದ ಎಲ್ಲಿಗೆ ಹೋಗಿದ್ದರು, ಚುನಾವಣೆ ಹೊತ್ತಲ್ಲಿ ಏಕೆ ಎಂದು ಪ್ರಶ್ನಿಸಿದ್ದಾರೆ. ಎಲ್ಲದಕ್ಕೂ ಕಾನೂನು ರೀತಿ ಉತ್ತರ ಕೊಡುವೆ. ದೇಶಕ್ಕೆ ಮೋದಿ ಬೇಕು ಎಂದು ದೇವೇಗೌಡರು, ಕುಮಾರಸ್ವಾಮಿ ಹೇಳಿದ್ದಕ್ಕೆ ಬದ್ಧ ಎಂದಿದ್ದಾರೆ.

# ನಾಳೆ ಮಕರ ಸಂಕ್ರಾಂತಿ; ಎಲ್ಲೆಡೆ ಖರೀದಿ ಸಡಗರ





ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ಶನಿವಾರ ಮೈಸೂರಲ್ಲಿ ಕಬ್ಬಿನ ವ್ಯಾಪಾರ ವಹಿವಾಟು ಜೋರಾಗಿತ್ತು. ಬಲ ಚಿತ್ರದಲ್ಲಿ ಧಾನ್ಯರಾಶಿಗೆ ಪೂಜೆ ಸಲ್ಲಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಜ.13(ಎಸ್‌ಬಿಡಿ)– ಮೈಸೂರಿನಲ್ಲಿ ಸುಗ್ಗಿ ಹಬ್ಬ 'ಮಕರ ಸಂಕ್ರಾಂತಿ'ಯ ಸಡಗರ ಕಳೆಗಟ್ಟಿದ್ದು, ಶನಿವಾರವೇ ಅಗತ್ಯ ವಸ್ತುಗಳ ಖರೀದಿ ಜೋರಾಗಿತ್ತು.

ಅಧಿಕ ವರ್ಷದ ಹಿನ್ನೆಲೆಯಲ್ಲಿ ಈ ಬಾರಿ ಒಂದು ದಿನ ಅಧಿಕವಾಗಿ ಜ.15ಕ್ಕೆ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಗುತ್ತಿದ್ದು, ಎರಡು ದಿನ ಮೊದಲೇ ಮಾರುಕಟ್ಟೆಗಳಲ್ಲಿ ಭಾರಿ ದಟ್ಟಣೆ ನಿರ್ಮಾಣವಾಗಿತ್ತು. ಎಳ್ಳು-ಬೆಲ್ಲ, ಕಬ್ಬಿನ ಜಲ್ಲೆ, ಹೂವು–ಹಣ್ಣು ಖರೀದಿಗೆ ಮುಗಿಬಿದ್ದಿದ್ದರು. ಅದರಲ್ಲೂ ದೇವರಾಜ ಮಾರುಕಟ್ಟೆಯಲ್ಲಂತೂ ಜನವೋ ಜನ. ಪರಿಣಾಮ ಸಯ್ಯಾಜಿರಾವ್ ರಸ್ತೆ, ಧನ್ವಂತ್ರಿ ರಸ್ತೆ, ವಿನೋಬಾ ರಸ್ತೆ, ದೇವರಾಜ ಅರಸು ರಸ್ತೆಗಳಲ್ಲಿ ಸಂಜೆ ವೇಳೆಗೆ ವಾಹನ ದಟ್ಟಣೆಯೂ ಹೆಚ್ಚಾಗಿತ್ತು. ಅಗ್ರಹಾರ ಸೇರಿದಂತೆ ಪ್ರಮುಖ ವೃತ್ತ, ಜಂಕ್ಷನ್‌ಗಳು ಹಾಗೂ ಬಡಾವಣೆಗಳ ಪ್ರಮುಖ ಜಂಕ್ಷನ್‌ಗಳಲ್ಲೂ ಸಂಕ್ರಾಂತಿ ವ್ಯಾಪಾರ ಜೋರಾಗಿದೆ.

ಸಂಕ್ರಾಂತಿಯಲ್ಲಿ ಎಳ್ಳು–ಬೆಲ್ಲವನ್ನು ಮನೆ ಮನೆಗೆ ಹಂಚುವುದು ಪ್ರಮುಖ ಸಂಪ್ರದಾಯ. ಎಳ್ಳು–ಬೆಲ್ಲವನ್ನಷ್ಟೇ ಅಲ್ಲದೆ ಅದರೊಂದಿಗೆ ಎಳ್ಳು, ನೆಲಗಡಲೆ, ಸಕ್ಕರೆ ಅಚ್ಚು, ಕೊಬ್ಬರಿಯನ್ನು ಬೆರೆಸಿ, ಅದರೊಂದಿಗೆ ಕಬ್ಬಿನ ಜಲ್ಲೆ ತುಂಡು ಸೇರಿಸಿ ಹಂಚುವ ಪದ್ಧತಿ ಇದೆ. ಹಾಗಾಗಿ ಈ ಎಲ್ಲಾ ವಸ್ತುಗಳಿಗೆ ಸಂಕ್ರಾಂತಿಯಲ್ಲಿ ಭಾರಿ ಬೇಡಿಕೆ ಸೃಷ್ಟಿಯಾಗುತ್ತದೆ. ಇನ್ನು ಬಹುತೇಕರು ಹಬ್ಬದೂಟಕ್ಕೆ ಕೂಟು(ವಿಶೇಷ ಸಾಂಬಾರ್) ತಯಾರಿಸುವುದರಿಂದ ವಿಶೇಷವಾಗಿ ಹಲಸಿನಕಾಯಿ, ಅಗಸೆಕಾಯಿ, ಅವರೆಕಾಯಿ, ಗೆಣಸು, ಸೊಪ್ಪು ಕಡಲೆ ಇನ್ನಿತರ ತರಕಾರಿಗಳಿಗೂ ಬೇಡಿಕೆ ಹೆಚ್ಚಾಗಿದೆ. ಪೂಜೆ ಪುನಸ್ಕಾರಕ್ಕೆ ಹೆಚ್ಚು ಹೂವು ಬಳಸುವುದರಿಂದ ಅದರ ಬೆಲೆಯನ್ನೂ ಸ್ವಲ್ಪ ಏರಿಕೆ ಮಾಡಲಾಗಿದೆ.

**ತರಹೇವಾರಿ ಬೆಲೆ:** ಕಬ್ಬಿನ ಜಲ್ಲೆಗೆ ಗಾತ್ರ–ಎತ್ತರದ ಆಧಾರದಲ್ಲಿ ಬೆಲೆ ನಿಗದಿಪಡಿಸಿ ಮಾರಾಟ ಮಾಡಲಾಗುತ್ತಿದೆ. ಒಂದು ಕಬ್ಬಿನ ಜಲ್ಲೆ 30–60 ರೂ.ವರೆಗೂ ಬಿಕರಿಯಾಗುತ್ತಿದೆ. ಮೊದಲು ಹೆಚ್ಚು ಬೆಲೆ ಹೇಳಿ ಚೌಕಾಸಿ ನಂತರ ಕಡಿಮೆ ಮಾಡುವ ವ್ಯಾಪಾರಿಗಳೂ ಇದ್ದಾರೆ. ಎಳ್ಳು, ಕಡಲೆಕಾಳು, ಕೊಬ್ಬರಿ, ಬೆಲ್ಲವನ್ನು ಒಣಗಿಸಿ, ನಿಗದಿತ ಪ್ರಮಾಣದಲ್ಲಿ ಬೆರೆಸುವಷ್ಟು ಸಮಯ, ಸಂಯಮವುಳ್ಳವರ ಸಂಖ್ಯೆ ತೀರಾ ಕಡಿಮೆ. ಬಹುತೇಕ ಮಂದಿ ಈ ಎಲ್ಲಾ ವಸ್ತುಗಳ ಮಿಶ್ರಣವುಳ್ಳ ಸಿದ್ಧ ಎಳ್ಳು–ಬೆಲ್ಲವನ್ನು ಖರೀದಿಸುತ್ತಿದ್ದಾರೆ. ಬೇಡಿಕೆ ಹೆಚ್ಚಿರುವುದರಿಂದ ಸಿದ್ಧ ಎಳ್ಳು–ಬೆಲ್ಲಕ್ಕೆ 120–150 ರೂ. ಬೆಲೆ ಇದೆ. ಅರ್ಧ ಕೆಜಿ ಹಾಗೂ 250 ಗ್ರಾಂ ಪೊಟ್ಟಣದಲ್ಲೂ ಮಾರಲಾಗುತ್ತಿದೆ. ದೇವರಾಜ ಮಾರುಕಟ್ಟೆಯಲ್ಲಿ ಕೆಲ ವ್ಯಾಪಾರಿಗಳು ಸೇವಂತಿ ಹೂವನ್ನು ಕೈಮಾರು 60 ರೂ. ಹಾಗೂ ಮೀಟರ್‌ಗೆ 50 ರೂ.ಗೆ ಮಾರಾಟ ಮಾಡುತ್ತಿದ್ದರು. ಕೆಜಿ ಅವರೆಕಾಯಿಗೆ 60–80 ರೂ. ಇತ್ತು. ಇನ್ನು ಹಲಸಿನಕಾಯಿಯಂತೂ ಭಾರಿ ದುಬಾರಿಯಾಗಿದ್ದು ಕೆಜಿ 120 ರೂ.ನಂತೆ ಮಾರುತ್ತಿದ್ದಾರೆ. ತೆಂಗಿನಕಾಯಿ ಗಾತ್ರದ ಹಲಸಿನಕಾಯಿಗೆ 60–70 ರೂ. ತೆರಬೇಕಿದೆ. ಒಂದು ಹಿಡಿಯಷ್ಟು ಸೊಪ್ಪು ಕಡಲೆಗೆ 20 ರೂ., ಕೆಜಿ ಗೆಣಸನ್ನು 30–40 ರೂ.ಗೆ ಮಾರಾಟ ಮಾಡ ಲಾಗುತ್ತಿದೆ.

### ಎಳ್ಳು–ಬೆಲ್ಲ; ಕಬ್ಬಿನ ಜಲ್ಲೆ; ಹೂವು–ಹಣ್ಣು ಖರೀದಿ ಜೋರು



**ಗ್ರಾಮೀಣರಲ್ಲಿ ಹೆಚ್ಚು ಸಂಭ್ರಮ:** ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಪಥ ಬದಲಿಸುವ ಸಂದರ್ಭವನ್ನು ಮಕರ ಸಂಕ್ರಮಣ ಅರ್ಥಾತ್ ಮಕರ ಸಂಕ್ರಾಂತಿ ಹಬ್ಬವಾಗಿ ಆಚರಿಸಲಾಗುತ್ತದೆ. ಇದು ರೈತನ ಪರಿಶ್ರಮಕ್ಕೆ ಫಲ ಸಿಗುವ ಸುಗ್ಗಿಯ ಕಾಲ. ಒಕ್ಕಣೆ ಮಾಡಿ, ಧಾನ್ಯದ ರಾಶಿಗೆ ಪೂಜೆ ಸಲ್ಲಿಸಿ ತನ್ನ ಮನೆಯ ಕಣಜ ತುಂಬಿಸುವುದು ಹಬ್ಬದ ಒಂದು ಭಾಗ. ಕಾಲ ಉರುಳಿದಂತೆ ಸಂಪ್ರದಾಯಗಳು ಮರೆಯಾಗುತ್ತಿದ್ದರೂ ಸಂಕ್ರಾಂತಿ ವೇಳೆಗೆ ಭೂಮಿತಾಯಿ ರೈತನಿಗೆ ಫಲ ನೀಡುವುದನ್ನು ತಪ್ಪಿಸಿಲ್ಲ. ಇನ್ನು ಸಂಕ್ರಾಂತಿಯಲ್ಲಿ ಮನೆಯ ರಾಸುಗಳನ್ನು ಶುಚಿಗೊಳಿಸಿ, ಬಣ್ಣದಿಂದ ಸಿಂಗರಿಸಿ, ಕಿಚ್ಚಾಯಿಸುವ ಸಂಪ್ರದಾಯ ಈಗಲೂ ಇದೆ. ಮೈಸೂರು ನಗರ ಸೇರಿದಂತೆ ಸಮೀಪದ ಸಿದ್ದಲಿಂಗಪುರ, ರಮ್ಮನಹಳ್ಳಿ, ಹಂಚ್ಯಾ ಸೇರಿದಂತೆ ಹಲವು ಕಡೆ ರಾಸುಗಳ ಕಿಚ್ಚಾಯಿಸಲು ತಯಾರಿ ಮಾಡಿಕೊಳ್ಳಲಾಗಿದೆ. ಒಟ್ಟಾರೆ ಎಲ್ಲೆಡೆ ವರ್ಷದ ಮೊದಲ ಹಬ್ಬ ಸಂಕ್ರಾಂತಿ ಸಂಭ್ರಮ ಪಸರಿಸಿದೆ

# ಹಿಂದುಳಿದ ವರ್ಗಗಳ ವಿವಿಧೋದ್ದೇಶ ಸಹಕಾರ ಸಂಘದ ಚುನಾವಣಾ ಫಲಿತಾಂಶ



ಮೈಸೂರಿನ ಹಿಂದುಳಿದ ವರ್ಗಗಳ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರ ಚುನಾವಣೆ ಇಂದು ನಡೆದಿದ್ದು, ಫಲಿತಾಂಶ ಹೊರಬಿದ್ದಿದೆ. ಈ ಚುನಾವಣೆಯಲ್ಲಿ ಆರ್.ಅನಿಲ್‌ಕುಮಾರ್, ಹೆಚ್.ವಿ.ಗೋವಿಂದರಾಜು, ವೈ.ದರ್ಶನ್‌ಕುಮಾರ್, ಟಿ.ನಾಗರಾಜ್, ಕೆ.ಆರ್.ಮಲ್ಲೇಶ್, ಕೆ.ಎನ್.ರಾಜು, ಶಿವಕುಮಾರ್, ಎಂ.ಡಿ.ಶ್ರೀನಿವಾಸ್, ವಿ.ಸತ್ಯನಾರಾಯಣ, ಎನ್.ಸ್ವಾಮಿ ಅವರುಗಳು ಜಯಶೀಲರಾದರು. ವಿಜೇತ ಅಭ್ಯರ್ಥಿಗಳನ್ನು ಮಾಜಿ ಮೇಯರ್ ಅನಂತು, ವಕೀಲ ವರದರಾಜು, ಮುಖಂಡರಾದ ನಾಗಭೂಷಣ್ ಮತ್ತಿತರರು ಅಭಿನಂದಿಸಿದರು.

# ಫೆಬ್ರವರಿಯಲ್ಲಿ ಚಾಮರಾಜ ಕ್ಷೇತ್ರದ ಕನ್ನಡ ಸಾಹಿತ್ಯ ಸಮ್ಮೇಳನ

## ಜಿಲ್ಲಾ ಕಸಾಪ ಸಭೆಯಲ್ಲಿ ನಿರ್ಧಾರ



ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಸಲು ಉದ್ದೇಶಿಸಿರುವ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ನಗರಾಧ್ಯಕ್ಷ ಕೆ.ಎಸ್.ಶಿವರಾಂ, ಕಸಾಪ ಮಾಜಿ ಜಿಲ್ಲಾಧ್ಯಕ್ಷ ಎಂ.ಚಂದ್ರಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು,ಜ.13(ಎಸ್‌ಪಿಎನ್)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 'ಕನ್ನಡ ಸಾಹಿತ್ಯ ಸಮ್ಮೇಳನವನ್ನು' ಫೆಬ್ರವರಿಯಲ್ಲಿ ನಡೆಸಲು ಜಿಲ್ಲಾ ಕಸಾಪ ಭವನದಲ್ಲಿ ಶನಿವಾರ ನಡೆದ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ನಗರಾಧ್ಯಕ್ಷ ಕೆ.ಎಸ್.ಶಿವರಾಂ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.

ಈ ವೇಳೆ ಮಾತನಾಡಿದ ನಗರಾಧ್ಯಕ್ಷ ಕೆ.ಎಸ್.ಶಿವರಾಂ, ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವುದರೊಂದಿಗೆ ನಗರ ಪ್ರದೇಶದಲ್ಲಿನ ಜನರಿಗೆ ಕನ್ನಡ ಭಾಷೆ ಉಳಿವಿನ ಬಗ್ಗೆ ಜಾಗೃತಿ ಮೂಡಿಸಲು ಈ ಸಮ್ಮೇಳನ ಉತ್ತಮ ವೇದಿಕೆಯಾಗಲಿದೆ. ಅಲ್ಲದೆ, ಜಾಗೃತಿ ಮೂಡಿಸುವ ಸಲುವಾಗಿ ಇದೇ ಕಾರಣಕ್ಕೆ ಕಳೆದ ವರ್ಷ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಸಾಹಿತ್ಯ ಸಮ್ಮೇಳನ ಯಶಸ್ವಿಯಾಯಿತು ಎಂದು ಮಾಹಿತಿ ನೀಡಿದರು.

ಅಲ್ಲದೆ, ಬೆಂಗಳೂರಿನ 28 ವಿಧಾನ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮಾತ್ರ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆ ಮಾಡಲಾಗುತ್ತಿದೆ. ಇದೇ ಮಾದರಿಯಲ್ಲಿ ಮೈಸೂರು ನಗರದ ವಿಧಾನಸಭಾ ಕ್ಷೇತ್ರಗಳಲ್ಲೂ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಈ ಸಮ್ಮೇಳನಕ್ಕೆ ಕ್ಷೇತ್ರದ ಸ್ಥಳೀಯ ಸಾಹಿತಿಗಳು, ಕಲಾವಿದರು ಮತ್ತು ವಿಚಾರವಾದಿಗಳನ್ನು ಆಹ್ವಾನಿಸಲಾಗುತ್ತಿದ್ದು, ಕ್ಷೇತ್ರದ ಸಾಧಕರನ್ನು ಗುರುತಿಸಿ ಸನ್ಮಾನಿಸುವ ಆಲೋಚನೆ ಇದೆ. ಇದೇ ವೇದಿಕೆಯಲ್ಲಿ ವಿಶೇಷವಾಗಿ ಜಾನಪದ ಕಲಾಮೇಳವನ್ನು ಆಯೋಜಿಸಲಾಗುವುದು. ಅಲ್ಲದೆ, ಈ ಸಮ್ಮೇಳನವನ್ನು ಕಲಾಮಂದಿರ ಇಲ್ಲವೇ ಚಾಮರಾಜ ಕ್ಷೇತ್ರದ ಇತರೆ ಜಾಗದಲ್ಲಿ ಆಯೋಜಿಸುವಂತೆ ಸಭೆಯಲ್ಲಿದ್ದ ಕೆಲ ಸಾಹಿತ್ಯ ಪ್ರೇಮಿಗಳು ಸಲಹೆ ನೀಡಿದರು.

**ಸಭೆಯಲ್ಲಿ ಪಾಲ್ಗೊಂಡಿದ್ದ ಸಾಹಿತ್ಯ ಪ್ರೇಮಿಗಳು, ಕಸಾಪ ಸದಸ್ಯರು, ಚಾಮರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಎಲ್ಲಿ ಸಮ್ಮೇಳನ ನಡೆಸಬೇಕು. ಅದರ ಸ್ವರೂಪ ಹೇಗಿರಬೇಕು ಎಂಬುದರ ಬಗ್ಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.**


ಸಮ್ಮೇಳನದ ಪ್ರಧಾನ ಸಂಚಾಲಕ ಎಂ.ಚಂದ್ರಶೇಖರ್ ಮಾತನಾಡಿ, ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅವರು ಜಿಲ್ಲಾ ಮತ್ತು ತಾಲೂಕು ಸಮ್ಮೇಳನವನ್ನು ಆಯೋಜಿಸಿ, ಉತ್ತಮ ಸಂಘಟಕರಾಗಿದ್ದಾರೆ. ಇದೀಗ ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜನೆ ಮಾಡುತ್ತಿರುವುದು ಉತ್ತಮ ಬೆಳವಣಿಗೆ. ಅಲ್ಲದೆ, ನ್ಯಾ.ಮಹಿಷಿ, ಮಹಾಜನ್, ಪ್ರೊ.ಬರಗೂರು ರಾಮಚಂದ್ರಪ್ಪ ಸೇರಿದಂತೆ ಇತರರು ಕನ್ನಡಿಗರ ಸಮಸ್ಯೆ ಕುರಿತು ಸರ್ಕಾರಕ್ಕೆ ನೀಡಿರುವ ವರದಿಗಳ ಅನುಷ್ಠಾನದ ಬಗ್ಗೆ ಈ ಸಮ್ಮೇಳನದಲ್ಲಿ ಚರ್ಚಿಸಲಾಗುವುದು ಎಂದರು.

ಸಭೆಯಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್(ಸಿಪಿಕೆ) ಡಾ.ವೈ.ಡಿ. ರಾಜಣ್ಣ, ನಿವೃತ್ತ ಡಿಡಿಪಿಐ ಸ್ವಾಮಿ, ರವಿ ಮಂಚೇಗೌಡನಕೊಪ್ಪಲು, ರತ್ನ ಹಾಲಪ್ಪಗೌಡ, ಪ್ರೇಮಾ ಮಾದಪ್ಪ, ಎಂ. ಪೂರ್ಣಿಮಾ, ಬಿ.ಎಸ್.ಗೀತಾ ಗಣೇಶ್, ಡಿ.ಎಚ್.ಸ್ವಾಮಿ, ಜಗನ್ನಾಥ್, ಎಸ್.ಪಿ. ನಟರಾಜ, ಎಸ್.ಪಿ.ತಮ್ಮಯ್ಯ, ಜಿ.ಪ್ರಕಾಶ್, ಪುಣ್ಯಕೋಟಿ ಹನುಮಂತೇಶ, ಯಶೋಧರಾ ರಾಮಕೃಷ್ಣ, ವಸಂತಕುಮಾರಯ್ಯ, ವಿ.ಆನಂದ, ವೆಂಕಟೇಶ, ಬಾಲಚಂದ್ರ, ಕೃಷ್ಣ, ಡಾ.ಬಿ.ನಿರ್ಮಲ, ನಿವೃತ್ತ ಶಿಕ್ಷಕ ಕೆ.ಕೆಂಪಣ್ಣ, ಪಿ.ಕುಮಾರ್, ಡಾ.ಅಮ್ಮಸಂದ್ರ ಸುರೇಶ್, ಡಾ.ಚೇಲೂರು ಚಂದ್ರಶೇಖರ್, ಮೂಗೂರು ನಂಜುಂಡಸ್ವಾಮಿ, ಡಾ.ವಿ.ಪುಷ್ಪ ಅಯ್ಯಂಗಾರ್, ಡಾ.ಹೆಚ್. ಎಸ್.ಪ್ರಕಾಶ್, ಎಸ್.ಯೋಗೀಶ ಉಪ್ಪಾರ, ಡಾ.ಜೆ.ಸೋಮಣ್ಣ, ಎನ್.ಎಸ್.ಪುಟ್ಟೀರಪ್ಪ, ಎ.ವೈದೇಹಿ, ಮಂಜುನಾಥ, ಎಂ.ಬಿ.ಕೊಟ್ರೇಶ್ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

## 'ಸರಳ ಭಗವದ್ಗೀತೆ' ಇಂಗ್ಲಿಷ್ ಕೃತಿ ಸೇರಿ ಮೂರು ಕೃತಿಗಳ ಬಿಡುಗಡೆ

# ಸಾರ್ಥಕ ಜೀವನ ನಡೆಸದಿದ್ದರೆ ಬದುಕು ವ್ಯರ್ಥ

## ಆರ್ಷ ವಿದ್ಯಾ ಪೀಠದ ಸ್ವಾಮಿ ಚಿದ್ರೂಪಾನಂದ ಸರಸ್ವತಿ



ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಶನಿವಾರ ಸರಳ ಭಗವದ್ಗೀತೆ ಸೇರಿದಂತೆ ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರು,ಜ.13(ಪಿಎಂ)– ಸಾರ್ಥಕ ಜೀವನ ನಡೆಸದಿದ್ದರೆ ಬದುಕು ವ್ಯರ್ಥವಾಗಲಿದೆ ಎಂದು ಆರ್ಷ ವಿದ್ಯಾ ಪೀಠದ ಸ್ವಾಮಿ ಚಿದ್ರೂಪಾನಂದ ಸರಸ್ವತಿ ಹೇಳಿದರು.

ಮೈಸೂರಿನ ರೋಟರಿ ಸಭಾಂಗಣದಲ್ಲಿ ವಿಜಯ್ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ನರ್ಮದಾ ಎನ್.ಪ್ರಭು ಅವರ 'ಸರಳ ಭಗವದ್ಗೀತೆ (ಇಂಗ್ಲಿಷ್ ಅನುವಾದಿತ ಕೃತಿ)', ಡಾ.ವಿ. ರಂಗನಾಥ್ ಮತ್ತು ಎಸ್.ವೆಂಕಟೇಶನ್ ಅವರ 'ಸಾಧಕ–ಸಾರ್ಥಕ' (ಕನ್ನಡ) ಹಾಗೂ ಇದರ ಇಂಗ್ಲಿಷ್ ಅನುವಾದಿತ 'ಸ್ಟ್ರೆಡಿಂಗ್ ಲೈಟ್' (ಬಿ.ಆರ್.ಪೈಯವರ ಯಶೋಗಾಥೆ) ಪುಸ್ತಕಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಜೀವನದಲ್ಲಿ ಸಾಧ್ಯ, ಸಾಧನೆ ಮತ್ತು ಸಾರ್ಥಕತೆ ಶಬ್ದಗಳನ್ನು ನೆನಪಿಡಬೇಕು. ಸಾಧನೆಗಾಗಿ ಸನ್ಮಾರ್ಗವನ್ನು ಅರಿಯಬೇಕು. ಗುರಿ ಎಂಬುದು ಬದುಕಿನಲ್ಲಿ ಮುಖ್ಯವಾಗಬೇಕು. ಇದು ಇಲ್ಲವಾದರೆ ಸಾಧನೆ ಎಂಬುದು ಅಸಾಧ್ಯವಾಗಲಿದೆ. ಬಿ.ಆರ್. ಪೈಯವರು ಸಾರ್ಥಕ ಸಾಧಕರಾಗಿದ್ದಾರೆ ಎಂದು ತಿಳಿಸಿದರು.

ಸರಳ ಭಗವದ್ಗೀತೆ ಕರ್ತೃ ನರ್ಮದಾ ಎನ್.ಪ್ರಭು ಮಾತನಾಡಿ, ಪ್ರತಿಯೊಬ್ಬ ಹಿಂದೂ ರಾಮಾಯಣ ಮತ್ತು ಮಹಾಭಾರತ ಓದಬೇಕು. ಇದರಿಂದ ನಮಗೆ ದಿವ್ಯ ದೃಷ್ಟಿ ದೊರೆಯಲಿದೆ. ಈ ಎರಡು ಮಹಾಕಾವ್ಯಗಳು ಸನಾತನ ಧರ್ಮದ ಕಣ್ಣುಗಳು. ಶ್ರೀರಾಮ ಸಕಲ ಸದ್ಗುಣವಂತ. ಅವನು ನಡೆದಿದ್ದೇ ನೀತಿ, ಅವನ ಜೀವನವೇ ಧರ್ಮ. ಅಯೋಧ್ಯೆಯಲ್ಲಿ ಭವ್ಯವಾದ ಶ್ರೀರಾಮಮಂದಿರ ಉದ್ಘಾಟನೆಯಾಗುತ್ತಿದ್ದು, ದೇಶದ ಜನತೆಯನ್ನು ಶ್ರೀರಾಮನೇ ಕಾಪಾಡುತ್ತಾನೆ ಎಂದು ತಿಳಿಸಿದರು.

ನಮ್ಮ ಸುತ್ತಮುತ್ತ ಅಪಾರ ಪುಸ್ತಕಗಳಿವೆ. ಆದರೆ ಭಗವದ್ಗೀತೆ ಒಂದು ಕಡೆ ಮತ್ತು ಉಳಿದ ಎಲ್ಲಾ ಪುಸ್ತಕಗಳು ಮತ್ತೊಂದು ಕಡೆ ಇಟ್ಟರೆ ಭಗವದ್ಗೀತೆ ತೂಕವೇ ಹೆಚ್ಚು. ಉಳಿದ ಎಲ್ಲಾ ಪುಸ್ತಕಗಳನ್ನು ನಮ್ಮಂತಹವರು ಅಥವಾ ಋಷಿಗಳು ಬರೆದಿದ್ದರೆ ಭಗವದ್ಗೀತೆ ಮಾತ್ರ ದೇವರು ಹೇಳಿದ ಗೀತೆ ಅಥವಾ ದೇವರ ಮಾತಾಗಿದೆ. ನಮ್ಮ ಜೀವನದಲ್ಲಿ ಸಂಪಾದಿಸಿದ್ದರಲ್ಲಿ ಸ್ವಲ್ಪ ಭಾಗವನ್ನು ಯೋಗ್ಯರಿಗೆ ದಾನ ಮಾಡಿ ಎಂದು ಕೃಷ್ಣ ಸಾರ್ಥಕ ಸಂದೇಶ ನೀಡಿದ್ದಾನೆ. ಭಗವದ್ಗೀತೆ ಓದಿದರೆ ಜೀವನದ ಮೌಲ್ಯಗಳು ಅರಿವಾಗಲಿದ್ದು, ಇದರಿಂದ ಸುಖ, ಶಾಂತಿ, ನೆಮ್ಮದಿ ದೊರೆಯಲಿದೆ ಎಂದರು.

'ಸಾಧಕ–ಸಾರ್ಥಕ' ಕೃತಿ ಕರ್ತೃಗಳಲ್ಲಿ ಒಬ್ಬರಾದ 'ಮೈಸೂರು ಮಿತ್ರ' ಅಂಕಣಕಾರ ಡಾ.ವಿ.ರಂಗನಾಥ್ ಮಾತನಾಡಿ, ಬಿ.ಆರ್. ಪೈಯವರು 84 ವರ್ಷಗಳನ್ನು ಪೂರೈಸಿದ್ದಾರೆ. ಇವರು ತುಂಬು ಕುಟುಂಬದಲ್ಲಿ ಹುಟ್ಟಿ ಬೆಳೆದವರು. ಅವರ ತಂದೆ ವ್ಯಾಪಾರಸ್ಥರಾಗಿದ್ದರು. ಬಡತನ ಇಲ್ಲವಾದರೂ ಸಂಕಷ್ಟಗಳ ನಡುವೆ ಬಿ.ಆರ್.ಪೈ ಬದುಕು ಕಟ್ಟಿಕೊಂಡರು. ಒಂದೊಂದು ದಿನವೂ ಶ್ರಮ ವಹಿಸಿ ಮೇಲೆ ಬಂದರು ಎಂದರು.

ಸಂಕಷ್ಟಗಳನ್ನೇ ಸದುಪಯೋಗ ಮಾಡಿಕೊಂಡು ಮುನ್ನಡೆದ ಬಿ.ಆರ್.ಪೈ ಅವರು ತಮ್ಮ 39ನೇ ವಯಸ್ಸಿನಲ್ಲಿ ಇದ್ದ ಉದ್ಯೋಗ ಬಿಟ್ಟು ಸ್ವಂತ ಉದ್ಯಮ ಆರಂಭಿಸಿ, ಯಶಸ್ವಿಯಾದರು. ಉದ್ಯಮಿಯಾದರೂ ಅವರದು ಸರಳ ಜೀವನ. ತಮ್ಮ ಕಾರ್ಖಾನೆಯ ಕಾರ್ಮಿಕರನ್ನು ತಮ್ಮ ಮನೆಯವರಂತೆ ಕಂಡವರು. ಅವರ ಸಾಧನೆಗಳನ್ನು ಪುಸ್ತಕದಲ್ಲಿ ದಾಖಲಿಸಿದ್ದು, ಅವರಂತೆ ಸಾರ್ಥಕ ಜೀವನ ನಡೆಸಲು ಈ ಪುಸ್ತಕ ಓದುಗರಿಗೆ ಪ್ರೇರಣೆಯಾಗಲಿದೆ ಎಂದು ಹೇಳಿದರು.


ಫೌಂಡೇಷನ್ ಅಧ್ಯಕ್ಷರೂ ಆದ ಉದ್ಯಮಿ ಡಾ.ಬ್ರಹ್ಮಾವರ ರಘುನಾಥ ಪೈ (ಬಿ.ಆರ್.ಪೈ), ಲೇಖಕ ಎಸ್.ವೆಂಕಟೇಶನ್ ಮತ್ತಿತರರು ಹಾಜರಿದ್ದರು.

# ಮೈಸೂರು ಸಂಕ್ರಾಂತಿ ರಂಗಹಬ್ಬಕ್ಕೆ ಚಾಲನೆ

## ಹೊಸ ಪ್ರಯೋಗಗಳಿಗೆ ಮೈಸೂರು ರಂಗಭೂಮಿ ತೆರೆದುಕೊಂಡಿದೆ: ನಿರ್ದೇಶಕ ಬಿ.ಸುರೇಶ್ ಪ್ರಶಂಸೆ



ಮೈಸೂರು ರಂಗಾಯಣದಲ್ಲಿ ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಸಹಯೋಗದೊಂದಿಗೆ ಆಯೋಜಿಸಿರುವ ಐದು ದಿನಗಳ 'ಮೈಸೂರು ಸಂಕ್ರಾಂತಿ ರಂಗಹಬ್ಬ'ಕ್ಕೆ ಶನಿವಾರ ರಂಗಭೂಮಿ ಹಾಗೂ ಹಿರಿತೆರೆ ನಿರ್ದೇಶಕ ಬಿ.ಸುರೇಶ್ ಚಾಲನೆ ನೀಡಿದರು. ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ ಮತ್ತಿತರರು ಉಪಸ್ಥಿತರಿದ್ದರು.



'ಸೂಳೆ ಸನ್ಯಾಸಿ' ನಾಟಕದ ದೃಶ್ಯ

ಮೈಸೂರು,ಜ.13(ಎಂಕೆ)–ಮೈಸೂರು ರಂಗಾಯಣದಲ್ಲಿ ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಸಹಯೋಗದೊಂದಿಗೆ ಆಯೋಜಿಸಿರುವ ಐದು ದಿನಗಳ 'ಮೈಸೂರು ಸಂಕ್ರಾಂತಿ ರಂಗಹಬ್ಬ'ಕ್ಕೆ ಶನಿವಾರ ಚಾಲನೆ ದೊರೆಯಿತು. ರಂಗಾಯಣ ಭೂಮಿಗೀತ ವೇದಿಕೆಯಲ್ಲಿ ರಂಗಭೂಮಿ ಹಾಗೂ ಹಿರಿತೆರೆ ನಿರ್ದೇಶಕ ಬಿ.ಸುರೇಶ್ ದೀಪ ಬೆಳಗುವ ಮೂಲಕ ರಂಗಹಬ್ಬಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಹವ್ಯಾಸಿ ರಂಗಕರ್ಮಿಗಳನ್ನು ಒಂದುಗೂಡಿಸಿದ್ದೇ ಸಂಭ್ರಮ. ರಂಗಾಯಣದ ವೃತ್ತಿಪರತೆ ಜೊತೆಗೆ ಹವ್ಯಾಸಿ ಸೇರಿದಾಗ ಅಪರೂಪದ ಕೆಲಸಗಳಾಗುತ್ತವೆ. ಅದರ ಪ್ರತಿಫಲವಾಗಿ ಸಂಕ್ರಾಂತಿ ರಂಗಹಬ್ಬ ರೂಪ ತಾಳಿದೆ ಎಂದು ಶ್ಲಾಘಿಸಿದರು.

ಮೈಸೂರು ರಂಗಭೂಮಿಯ ಹೊಸ ಹೊಸ ಪ್ರಯೋಗಗಳಿಗೆ ತೆರೆದುಕೊಂಡಿದೆ. ಅದಕ್ಕೆ ಅನುಗುಣವಾಗಿ ಮೈಸೂರಿನ ಕಲಾಪ್ರೇಕ್ಷಕರ ಪ್ರೋತ್ಸಾಹ ನೀಡುತ್ತಿದ್ದಾರೆ. ಇದೊಂದು ಚೇತೋಹಾರಿ ಚಟುವಟಿಕೆಯಾಗಿದೆ. ರಂಗಭೂಮಿ ಮತ್ತಷ್ಟು ಸದೃಢಗೊಳ್ಳಲು ಹವ್ಯಾಸಿಗಳಿಗೆ ವೃತ್ತಿಪರ ರಂಗಾಯಣ ಜೊತೆಗೂಡುವುದರಿಂದ ಹೊಸ ಹಾಗೂ ಅಪರೂಪದ ಪ್ರಯೋಗಗಳು ಸಾಧ್ಯವಾಗುತ್ತವೆ ಎಂದು ಅಭಿಪ್ರಾಯಪಟ್ಟರು.

> ಕೇಡಿನ ಕಾಲದಲ್ಲಿ ಕೇಡನ್ನು ಕುರಿತೇ ನಾಟಕ ಮಾಡಬೇಕು. ಕೇಡನ್ನು ಕುರಿತೇ ಕವನ ಬರೆಯಬೇಕು ಎಂಬುವಂತೆ ದೇಶ ಎಂದರೆ ಜನ ಎಂಬುದನ್ನು ಮರೆತು, ದೇವಸ್ಥಾನ ಎನ್ನುವ ಈ ಕಾಲದಲ್ಲಿ ನಾವು ರಂಗಭೂಮಿಯ ಮೂಲಕ ದೇಶ ಎಂದರೆ ಜನ ಎನ್ನುವುದನ್ನು ಮತ್ತೆ ನೆನಪಿಸಬೇಕಾದ ಅನಿವಾರ್ಯತೆ ಇದೆ.
> **–ಬಿ.ಸುರೇಶ್, ರಂಗಭೂಮಿ, ಹಿರಿತೆರೆ ನಿರ್ದೇಶಕ**

**ನಾಟಕ ಪ್ರದರ್ಶನ:** 'ಸಂಕ್ರಾಂತಿ ರಂಗಹಬ್ಬ'ದ ಮೊದಲ ದಿನ ಕೆ.ವಿ.ಸುಬ್ಬಣ್ಣ ರಚನೆ, ಮಂಜುನಾಥ್ ಬಡಿಗೇರ್ ನಿರ್ದೇಶನದಲ್ಲಿ 'ಸೂಳೆ ಸನ್ಯಾಸಿ' ನಾಟಕವನ್ನು ಮೈಸೂರಿನ ಅಭಿಯಂತರರ ತಂಡದ ಕಲಾವಿದರು ಅಚ್ಚುಕಟ್ಟಾಗಿ ಪ್ರದರ್ಶನ ನೀಡಿದರು. ಆತ್ಮಗಳು ಅದಲು–ಬದಲಾದಾಗ ಆಗುವ ಸನ್ನಿವೇಶಗಳ ಹೂರಣವನ್ನೊಳಗೊಂಡ 'ಸೂಳೆ ಸನ್ಯಾಸಿ' ನಾಟಕ ಭರ್ತಿಯಾಗಿದ್ದ ಭೂಮಿಗೀತ ವೇದಿಕೆಯಲ್ಲಿ ಹೊಸ ಸಂಚಲನ ಸೃಷ್ಟಿಸಿತು. ಹಾಸ್ಯ, ವಿರಹದ ಮೂಲಕ ಗಂಭೀರ ಸ್ಥಿತಿಯತ್ತಾ ಸಾಗುವ ನಾಟಕದ ದೃಶ್ಯಾವಳಿಗಳಿಗೆ ಮನಸೋತ ರಂಗಾಸಕ್ತರು ಶಿಳ್ಳೆ–ಚಪ್ಪಾಳೆಯೊಂದಿಗೆ ಕಲಾವಿದರನ್ನು ಅಭಿನಂದಿಸಿದರು.

**ಇಂದು ಕಾಕನಕೋಟೆ:** ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಿರಚಿತ 'ಕಾಕನಕೋಟೆ' ನಾಟಕ ನಾಳೆ(ಜ.14) ಸಂಜೆ 6.30ಕ್ಕೆ ಪ್ರದರ್ಶನಗೊಳ್ಳಲಿದೆ. ಎಸ್.ರಾಮನಾಥ ನಿರ್ದೇಶನದಲ್ಲಿ ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ವನರಂಗದಲ್ಲಿ ಪ್ರಸ್ತುತ ಪಡಿಸಲಿದ್ದಾರೆ. ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ಹೆಚ್.ಎಸ್.ಸುರೇಶ್ ಬಾಬು, ಕಾರ್ಯದರ್ಶಿ ಡಾ.ಕುಮಾರಸ್ವಾಮಿ, ಮೈಸೂರು ಸಂಕ್ರಾಂತಿ ರಂಗಹಬ್ಬ ಸಂಚಾಲಕ ಎಂ.ಪಿ.ಹರಿದತ್ತ ಉಪಸ್ಥಿತರಿದ್ದರು.

## ನಕ್ಕರೆ ಅದೇ ಸ್ವರ್ಗ

ಕವಿ : "ನಾನು ಕವನ ಓದುತ್ತಿದ್ದಾಗ ಎಲ್ಲರೂ ಎದ್ದು ಹೋದರೂ ನೀನ್ಯಾಕೆ ಕುಳಿತುಕೊಂಡಿರುವೆ?"
ಗುಂಡ : "ನಿಮ್ಮ ನಂತರ ಕವನ ಓದುವ ಸರದಿ ನನ್ನದು!"

ಮೈಸೂರು ಮಿತ್ರ
ಭಾನುವಾರ, 14 ಜನವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

**ಅಮೃತವಾಹಿನಿ..........**
ಸಂದರ್ಭ ಬಂದಾಗ ಮಕ್ಕಳ ಮಾತನ್ನೂ ಸಹ ಜ್ಞಾನಿಯಾದವನು ಉಪಯೋಗಿಸಿಕೊಳ್ಳಬೇಕು. –ನುಡಿಮುತ್ತು

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ವ್ಯಾಪಾರಕ್ಕೆ ನಿಮಿಷ / ಬೇಸಾಯಕ್ಕೆ ವರುಷ

## ನಿಮ್ಮ ಪತ್ರಗಳು

### ಮೈಸೂರಿಗೆ ಸ್ವಚ್ಛ ನಗರಿ ಎಂಬ ಹೆಗ್ಗಳಿಕೆ ಇಲ್ಲ

ಮಾನ್ಯರೇ,

ಸಾಂಸ್ಕೃತಿಕ ನಗರಿ ಮೈಸೂರು ಈ ಹಿಂದೆ ದೇಶದ ಸ್ವಚ್ಛ ನಗರಿ ಹೆಗ್ಗಳಿಕೆಗೆ ಪಾತ್ರವಾಗಿತ್ತು, ಆ ಹೆಮ್ಮೆಯನ್ನು ನಾವೆಲ್ಲರೂ ಸಂಭ್ರಮಿಸಿದ್ದೆವು. ಆದರೆ ಅದೇ ಸ್ಥಾನವನ್ನು ಉಳಿಸಿಕೊಳ್ಳಲು, ಕಾಪಾಡಿಕೊಂಡು ಬರಲು ಈ ಬಾರಿ ಸಾಧ್ಯವಾಗಿಲ್ಲ. ಕಾರಣಗಳು ಹಲವಾರು. ಆದರೆ ಅದರಲ್ಲಿ ನಾಗರಿಕರ ಪಾತ್ರ ದೊಡ್ಡದು ಎಂಬುದು ನನ್ನ ಅನಿಸಿಕೆ.

ಪೌರಕಾರ್ಮಿಕರು ಕಸವನ್ನು ಒಯ್ಯಲು ಮನೆ ಮನೆ ಬಾಗಿಲಿಗೆ ನಿತ್ಯವೂ ಬರುತ್ತಾರೆ, ಅದೆಷ್ಟೋ ಜನ ಹಸಿಕಸ ಒಣಕಸ ಬೇರ್ಪಡಿಸದೇ ಕೊಡುತ್ತಾರೆ. ಆ ಕೆಲಸವನ್ನು ಪೌರಕಾರ್ಮಿಕರೇ ನಿರ್ವಹಿಸುತ್ತಾರೆ. ಅದೆಷ್ಟೋ ಮಂದಿ ಕಾಯುವ ತಾಳ್ಮೆಯೂ ಇಲ್ಲದೇ ಸಿಕ್ಕ ಸಿಕ್ಕಲ್ಲಿ ಕಸವನ್ನು ಪ್ಲಾಸ್ಟಿಕ್ ಕವರಿನಲ್ಲಿ ತುಂಬಿ ಬೀದಿ ಬದಿಯಲ್ಲಿ, ಖಾಲಿ ಸೈಟ್‌ಗಳಲ್ಲಿ ಬಿಸಾಡಿ ಹೋಗುತ್ತಾರೆ. ಇಂಥವರಿಗೆ ಸ್ವಚ್ಛತೆಯ ಅರಿವು ಮೂಡಿಸುವುದೆಂತು?

ಇನ್ನು ಹಸು–ಕರುಗಳನ್ನು ಮುಲಾಜಿಲ್ಲದೆ ಬೀದಿಗೆ ಬಿಡುತ್ತಾರೆ. ಆ ಮೂಕ ಪ್ರಾಣಿಗಳು ದಾರಿಯಲ್ಲಿ ಅಡ್ಡಾಡುತ್ತ, ಮನೆಗಳ ಮುಂದೆ ಇಡುವ ಮಿಕ್ಕ ಆಹಾರ ಪದಾರ್ಥಗಳನ್ನು ಸೇವಿಸುತ್ತಾ, ಸಗಣಿ ಹಾಕಿ ಮುಂದೆ ಸಾಗುತ್ತವೆ. ಬೀದಿಗೆ ಜಾನುವಾರುಗಳನ್ನ ಬಿಡದಂತೆ ಪಾಲಿಕೆ ನಿಯಮ ಜಾರಿಗೊಳಿಸಬೇಕು, ಪಾಲಿಸದಿದ್ದಲ್ಲಿ, ಮಾಲೀಕರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು.

ಬೀದಿನಾಯಿಗಳ ಹಾವಳಿ ಕೇಳುವಂತೆಯೇ ಇಲ್ಲ, ಪ್ರಾಣಿಪ್ರಿಯರು ಎಂದು ಕರೆದುಕೊಳ್ಳುವವರು, ನಾಯಿಗಳಿಗೆ ಬಿಸ್ಕೆಟ್, ತಿಂಡಿ, ಹಾಲು ಕೊಟ್ಟು ತ್ಯಾಜ್ಯಗಳನ್ನು ಅಲ್ಲೇ ಬಿಸಾಕಿ ಹೋಗುತ್ತಾರೆ (ಇವುಗಳನ್ನು ಮಾಡುವವರು ಹೆಚ್ಚಾಗಿ ವಿದ್ಯಾವಂತರೆ!!!).ಇದು ಅತ್ಯಂತ ಬೇಸರದ ಸಂಗತಿ.

ನಗರದ ಹೃದಯಭಾಗದ ಬಡಾವಣೆಗಳಲ್ಲಿ ಇತ್ತೀಚೆಗೆ ಪೇಯಿಂಗ್ ಗೆಸ್ಟ್ ಕಟ್ಟಡಗಳು ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿವೆ. ಇವುಗಳಿಗೆ ಯಾವುದೇ ನೀತಿ ನಿಯಮಗಳಿಲ್ಲ. ಇಲ್ಲಿನ ತ್ಯಾಜ್ಯಗಳು ವಿಲೇವಾರಿ ಕುರಿತು ಗಮನ ಹರಿಸಬೇಕಿದೆ.

ಸ್ವಚ್ಛ ನಗರಿ ಎಂದು ಬಿರುದಾಂಕಿತಗೊಂಡಿದ್ದ ಮೈಸೂರು ಇಂದು 27ನೇ ಸ್ಥಾನಕ್ಕೆ ಕೆಳಗಿಳಿದಿರುವುದು ನಿಜಕ್ಕೂ ವಿಷಾದದ ಸಂಗತಿ. ಇದರಲ್ಲಿ ನಾಗರಿಕರ ಜವಾಬ್ದಾರಿ ಹೊಣೆ ಅತ್ಯಗತ್ಯ. ತಮ್ಮ ಮನೆಯ ಕಸವನ್ನು ತಾವೇ ವಿಲೇವಾರಿ ಮಾಡಿದರೆ, ಮತ್ತೊಮ್ಮೆ ಮೈಸೂರು ನಗರಿ ಸ್ವಚ್ಛ ನಗರಿ ಕಿರೀಟಪ್ರಾಯ ವಾಗಬಹುದು ಎಂಬ ಸದಾಶಯ.

– ಪುಷ್ಪಲತಾ ಫಣಿರಾಜ್, ಅಗ್ರಹಾರ ಮೈಸೂರು.


### ಪ್ರೇಕ್ಷಕರ ಮನದಲ್ಲಿ ಬೇರೂರುವಂತೆ ಮಾಡಿದ ಹಾಡು ಹಳೆಯದಾದರೇನು ಭಾವ ನವನವೀನ !!

ಮಾನ್ಯರೇ,

ಇತ್ತೀಚೆಗೆ ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಶಾಂತಲ ಟಾಕೀಸ್‌ನ ಮಾಜಿ ವ್ಯವಸ್ಥಾಪಕ ಎಂ.ಜಿ.ದೇವರಾಜ್ ಹಾಗೂ ಅವರ ಮಗ, ಭಾಮೀಸ್ ಫೌಂಡೇಶನ್‌ನ ಮಾಲೀಕರಾದ ಡಾ.ರಾಘವೇಂದ್ರ ಪ್ರಸಾದ್ ಅವರ ಆಶೀರ್ವಾದದೊಂದಿಗೆ 'ಹಾಡು ಹಳೆಯದಾದರೇನು ಭಾವ ನವನವೀನ' ಎಂಬ ಹಳೆಯ ಕನ್ನಡ ಹಾಗೂ ಚಲನಚಿತ್ರಗೀತೆಗಳ ಭಾವಪೂರ್ಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮೈಸೂರಿನಲ್ಲಿ ಅಂದಿನ ಕಾಲದಲ್ಲಿ ಒಂದೂ ಬ್ಲಾಕ್ ಟಿಕೆಟ್ ಮಾರಾಟವಾಗಲ್ಲ ಎಂಬ ಕೀರ್ತಿ ಶಾಂತಲಾ ಚಿತ್ರಮಂದಿರಕ್ಕೆ ಸಲ್ಲುತ್ತದೆ. ಅದಕ್ಕೆ ಪೂರಕ ಕಾರಣ ಅಲ್ಲಿ ವ್ಯವಸ್ಥಾಪಕರಾಗಿದ್ದ ದೇವರಾಜ್. ಇದು ಕರೋಕೆ ಕಾರ್ಯಕ್ರಮವಾದರೂ ಬಹಳ ಅಚ್ಚುಕಟ್ಟಾಗಿತ್ತು. ಎಸ್‌ಜೆಸಿಇ ನಿವೃತ್ತ ಪ್ರಾಧ್ಯಾಪಕರಾದ ಡಾ.ಕೆ.ಎಸ್.ಮಂಜುನಾಥ್ ಹಾಗೂ ಡಾ.ಎ.ಡಿ.ಶ್ರೀನಿವಾಸನ್, ಹಂಸಿನಿ ಕುಮಾರ್ ಇವರೆಲ್ಲರೂ ಬಹಳ ಸೊಗಸಾಗಿ ಗೀತೆಗಳನ್ನು ಪ್ರಸ್ತುತಪಡಿಸಿದರು.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

### ಬರೀ ಚಾವಣಿ, ಕೂರಲು ಸೀಟ್ ಇಲ್ಲ



ಮಾನ್ಯರೆ,

ಇದು ಕುಕ್ಕರಹಳ್ಳಿ ಟೋಲ್‌ಗೇಟ್‌ನಿಂದ ಕುವೆಂಪು ಪುತ್ಥಳಿ ಕಡೆಗೆ ಸಾಗುವಾಗ ಎಡ ಬದಿಗೆ ಇರುವ ಬಸ್ ಸ್ಟಾಪ್. ಕೂರಲು ಯಾವ ಅನುಕೂಲವೂ ಇಲ್ಲ. ಇದು ಕೆ.ಎಸ್.ಗದ್ದಿಗೆ ಸಾಗುವ ಮಾರ್ಗ. ಈ ಭಾಗಕ್ಕೆ ಕಾರ್ಯ ನಿಮಿತ್ತ ಬರುವ ಗ್ರಾಮೀಣ ಜನತೆ, ಮಾನಸ ಗಂಗೋತ್ರಿಗೆ ಬರುವ ವಿದ್ಯಾರ್ಥಿಗಳು, ಸಾರ್ವಜನಿಕರು ಬಸ್‌ಗಾಗಿ ಗಂಟೆಗಟ್ಟಲೇ ಕಾಯುವ ಪರಿಸ್ಥಿತಿ ಇರುತ್ತದೆ. ನಿಂತೇ ಕಾಯಬೇಕು. ನಮ್ಮ ನಗರ ಪಾಲಿಕೆಗೆ ಆ ತೆರಿಗೆ, ಈ ತೆರಿಗೆ ಅಂತ ವಸೂಲಿ ಮಾಡುವುದಷ್ಟೇ ಕೆಲಸವೇ. ಕೋಟಿಗಟ್ಟಲೆ ಹಣ ಉಪಯೋಗವಿಲ್ಲದ ಕಾಮಗಾರಿಗಳಿಗೆ ವ್ಯಯ ಮಾಡುತ್ತದೆ. ಕೂಡಲೇ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು, ಜನಪ್ರತಿನಿಧಿಗಳು ಇತ್ತ ಗಮನಹರಿಸಬೇಕಾಗಿ ಮನವಿ.

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ, ಮೈಸೂರು.

### ಪಾಲಿಕೆಯಲ್ಲಿ ಶಿಸ್ತುಬದ್ಧವಾಗಿ ಕೆಲಸ ನಡೆಯುತ್ತಿಲ್ಲ



ಮಾನ್ಯರೆ,

ಮೈಸೂರು ನಗರ ಸ್ವಚ್ಛತಾ ಸ್ಪರ್ಧೆಯಲ್ಲಿ 7ನೇ ಸ್ಥಾನದಿಂದ ಕೆಳಗಿಳಿಯಲು ಪಾಲಿಕೆಯ ಸ್ವಚ್ಛತಾ ಸಿಬ್ಬಂದಿ ಸಮರ್ಥವಾಗಿ ಕಾರ್ಯ ನಿರ್ವಹಿಸದಿರುವುದೇ ಆಗಿದೆ.

ಚಾಮರಾಜಪುರಂ ವಿಷ್ಣುವರ್ಧನ ರಸ್ತೆ ಹಾಗೂ ದೇವಪಾರ್ಥಿವ ರಸ್ತೆಯ ನಡುವಿನ ರಸ್ತೆಯನ್ನು ಸುಮಾರು ಆರೇಳು ತಿಂಗಳಿನಿಂದ ಗುಡಿಸಲು ಬಂದಿಲ್ಲ! ಸಂಬಂಧಿಸಿದ ಮೇಲ್ವಿಚಾರಕರಿಗೂ ಅವರ ಮೇಲಿನವರಿಗೂ ಹೇಳಿದರೂ ಏನೂ ಪ್ರಯೋಜನವಾಗಿಲ್ಲ. ಐದಾರು ಅಡಿಗಳಷ್ಟು ಉದ್ದವಿರುವ ನಮ್ಮ ಮನೆ ಮುಂದಿನ ಕಿರು ರಸ್ತೆಯನ್ನೇ ಚೊಕ್ಕಟಗೊಳಿಸದ ಪಾಲಿಕೆ ಇನ್ನೇನು ಕೆಲಸ ಮಾಡೀತು ಹೇಳಿ? ಪಾಲಿಕೆಯ ಆರೋಗ್ಯಾಧಿಕಾರಿಗಳು ತಮ್ಮ ಸಹಾಯಕ ಸಿಬ್ಬಂದಿಯೊಡನೆ ನಮ್ಮ ರಸ್ತೆಗೆ ಬಂದು ನೋಡಲಿ ಹಾಗೂ ವಿಚಾರಿಸಲಿ. ಈ ರಸ್ತೆಯನ್ನು ಗುಡಿಸಲು ಯಾರೂ ಏಕೆ ಬರುತ್ತಿಲ್ಲ ಎಂದು. ಸಾರ್ವಜನಿಕರು ದೂರುತ್ತಿದ್ದರೂ ಕಸಗುಡಿಸದ ಸಿಬ್ಬಂದಿಗೆ ಸೂಕ್ತ ತಾಕೀತು ಮಾಡುವ ಕೆಲಸವನ್ನು ಆರೋಗ್ಯಾಧಿಕಾರಿಗಳು ಮಾಡುತ್ತಾರೆಯೇ?

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು

# ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆ ಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ಮೈಸೂರಿನ ಅಭಿವೃದ್ಧಿಗೆ ಶ್ರಮಿಸಿದ ಹಲವಾರು ಮಹನೀಯರು ಎಲೆಮರೆಯ ಕಾಯಿಗಳಂತೆ ಉಳಿದುಹೋಗಿದ್ದಾರೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

## 4. ವಿದ್ವತ್ಪೂರ್ಣ ವಿ.ಸುಬ್ರಹ್ಮಣ್ಯ ಅಯ್ಯರ್





photo: copyright Paul Brunton Philosophic Foundation
V. Subramanya Iyer (center) with Paul Brunton on the right and Swami Siddheswarananda on the left.



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ: 8762788685

ಕಳೆದ ಎರಡು ಶತಮಾನಗಳ ಅವಧಿಯಲ್ಲಿ ಮೈಸೂರು ಹಲವಾರು ಪ್ರಮುಖ ವ್ಯಕ್ತಿಗಳನ್ನು ಕಂಡಿದೆ. ಮಹಾರಾಜರ ಪ್ರಜೆಗಳಾಗಿ ಅವರು ಸಲ್ಲಿಸಿದ ಸೇವೆ ಮೈಸೂರಿಗೆ ಕೀರ್ತಿ ತಂದು ಅದನ್ನು 'ಮಾದರಿ ಸಂಸ್ಥಾನ'ವನ್ನಾಗಿ ಮಾಡಿತ್ತು. ಈ ಮಹನೀಯರ ಗಣನೀಯ ಸೇವೆಯನ್ನು ಮುಕ್ತಕಂಠದಿಂದ ಪ್ರಶಂಸಿಸಲಾಗಿತ್ತು. ಮಹಾರಾಜರೂ ಅಷ್ಟೇ. ಅವರ ಬುದ್ಧಿವಂತಿಕೆ, ಜಾಣ್ಮೆಯನ್ನು ಮನಗಂಡು ಅವರಿಗೆ ಸೂಕ್ತ ಸ್ಥಾನಮಾನ ನೀಡಿ ಅವರ ಸೇವೆಯನ್ನು ಸಂಪೂರ್ಣವಾಗಿ ತಮ್ಮ ರಾಜ್ಯದ ಅಭಿವೃದ್ಧಿಗೆ ಬಳಸಿಕೊಂಡರು. ಇಂತಹವರ ನೆರವಿನಿಂದ ಅವರು ಸೃಷ್ಟಿಸಿದ ರಾಮರಾಜ್ಯ ದೇಶ–ವಿದೇಶಗಳಿಂದ ನಿಷ್ಣಾತ ವ್ಯಕ್ತಿಗಳನ್ನೂ, ವಿದ್ವಾಂಸರನ್ನೂ ಆಕರ್ಷಿಸಿತ್ತು.

ಇಂತಹ ಪ್ರತಿಷ್ಠಿತರ ಸಾಲಿಗೆ ಸೇರುತ್ತಾರೆ ವಿ. ಸುಬ್ರಹ್ಮಣ್ಯ ಅಯ್ಯರ್. ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳಲ್ಲಿ ಒಬ್ಬರಾಗಿದ್ದರೂ ಅವರು ಸನ್ಯಾಸಿಗಳಿಗೆ, ಮಹಾರಾಜರಿಗೆ ಗುರುಗಳು, ಮಾರ್ಗದರ್ಶಿಗಳಾಗಿದ್ದರು ಎಂದರೆ ಆಶ್ಚರ್ಯವಾಗುತ್ತದೆ. ಅವರೆಲ್ಲಾ ತಮ್ಮ ವಿದ್ವತ್ಪೂರ್ಣ ಗುರುವಿನ ಬಗ್ಗೆ ಅಪಾರ ಗೌರವಾದರಗಳನ್ನು ಹೊಂದಿದ್ದರು. ವಿದೇಶದಿಂದ ಬಂದ ವಿದ್ವಾಂಸರೂ ಕೂಡ ಅವರ ಮಾರ್ಗದರ್ಶನ ಪಡೆದುಕೊಳ್ಳುತ್ತಿದ್ದರು.

ಸುಬ್ರಹ್ಮಣ್ಯ ಅಯ್ಯರ್ 1869ರಲ್ಲಿ ಅಂದಿನ ಮದ್ರಾಸ್ ರಾಜ್ಯದ ಸೇಲಂನಲ್ಲಿ ಜನಿಸಿದರು. ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಓದು ಮುಗಿಸಿದ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರಗಳಲ್ಲಿ ಹೆಚ್ಚಿನ ವ್ಯಾಸಂಗ ಮಾಡಿದರು. ನಂತರ ಆಗ್ರಾ ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನ ಬೋಧಿಸಲು ಆರಂಭಿಸಿದರು.

ಮೈಸೂರಿನ ಮಹಾರಾಜರು ಒಮ್ಮೆ ಉತ್ತರ ಭಾರತ ಪ್ರವಾಸಕ್ಕೆ ತೆರಳಿದ್ದಾಗ ಆಗ್ರಾ ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನವನ್ನು ಬೋಧಿಸುತ್ತಿದ್ದ ಸುಬ್ರಹ್ಮಣ್ಯ ಅಯ್ಯರ್ ಅವರ ಭೇಟಿಯಾಯಿತು. ಅವರ ವಿದ್ವತ್ ಕಂಡು ಅವರನ್ನು ಮೈಸೂರಿಗೆ ಮತ್ತೆ ಹಿಂತಿರುಗುವಂತೆ ಮಹಾರಾಜರು ಆಹ್ವಾನಿಸಿದರು. ಅವರ ಆಧ್ಯಾತ್ಮಿಕ ಜ್ಞಾನದ ಬಗ್ಗೆ ಗೌರವ ಮೂಡಿ ಮೈಸೂರಿಗೆ ಬಂದು ಸನ್ಯಾಸವನ್ನು ತೆಗೆದುಕೊಂಡು ಶೃಂಗೇರಿ ಮಠದ ಶಾಖೆಯಾದ ಕೂಡ್ಲಿ ಮಠಕ್ಕೆ ಸೇರಬೇಕೆಂದು ಸಲಹೆ ಮಾಡಿದರು. ಆದರೆ ಸುಬ್ರಹ್ಮಣ್ಯ ಅಯ್ಯರ್ ಅದಕ್ಕೆ ಸಮ್ಮತಿಸಲಿಲ್ಲ. ಅದಕ್ಕೆ ಕಾರಣವೂ ಇತ್ತು.

ಮುಂಚಿನಿಂದ ಅಧ್ಯಾತ್ಮಿಕದ ಕಡೆ ಒಲವಿದ್ದ ಅಯ್ಯರ್ ಅವರು ಚಿಕ್ಕಂದಿನಲ್ಲಿ ಸನ್ಯಾಸವನ್ನು ತೆಗೆದುಕೊಳ್ಳಬೇಕೆಂದು ಮನಸ್ಸು ಮಾಡಿದ್ದರು. ಆದರೆ ಅವರ ಗುರುಗಳು ಅದಕ್ಕೆ ಅವಕಾಶ ಕೊಡದೆ ನಿರ್ಧಾರ ಬದಲಾಯಿಸುವಂತೆ ಮಾಡಿದ್ದರು. ಎಲ್ಲವನ್ನೂ ಪರಿತ್ಯಾಗ ಮಾಡಿದ ಸನ್ಯಾಸಿಗಿಂತ ಕ್ರಿಯಾಶೀಲರಾಗಿರುವುದೇ ತಮಗೆ ಸರಿ ಎಂದು ಅಯ್ಯರ್ ನಿರ್ಧಾರ ಮಾಡಿ ಕ್ರಮೇಣ ಗೃಹಸ್ಥ ಜೀವನಕ್ಕೆ ಹೊಂದಿಕೊಂಡು ಜೀವನ ನಡೆಸುತ್ತಿದ್ದರು.

1895ರಲ್ಲಿ ಮೈಸೂರಿಗೆ ಹಿಂತಿರುಗಿದ ಅಯ್ಯರ್ ಶಿಕ್ಷಕರಾಗಿ ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಹಾಗೆ ಸೇವೆ ಸಲ್ಲಿಸುತ್ತಿದ್ದಾಗ ಶೃಂಗೇರಿ ಮಠದ ಪ್ರಸಿದ್ಧ ಜಗದ್ಗುರು ಶ್ರೀಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತಿ ಸ್ವಾಮಿಗಳ ಕೃಪಾಶ್ರಯಕ್ಕೆ ಒಳಗಾಗಿ ಅವರ ಶಿಷ್ಯರಾದರು. ಜಗದ್ಗುರುಗಳು ಅವರನ್ನು ಶಂಕರ ಸಂಪ್ರದಾಯದ ವೇದಾಂತಕ್ಕೆ ದೀಕ್ಷೆ ಕೊಟ್ಟರು.

1919ರಲ್ಲಿ ಸುಬ್ರಹ್ಮಣ್ಯ ಅಯ್ಯರ್ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿ ನೇಮಿಸಲಾಯಿತು. ಒಂದು ವರ್ಷದ ನಂತರ ಅವರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಖಾಸಾ ಅಧ್ಯಾಪಕರಾಗಿ ರಾಜ ಗುರುಗಳಾದರು. ಅಯ್ಯರ್ ಅವರು ಈ ಸ್ಥಾನದಲ್ಲಿ ನಾಲ್ವಡಿ ಅವರ ಅಂತ್ಯದವರೆಗೆ ಸುಮಾರು 25 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಇದು ಅವರಿಗಿದ್ದ ವಿದ್ವತ್ತಿಗೆ ನಿದರ್ಶನವೆನ್ನಬಹುದು. ಮಹಾರಾಜರಿಗೆ ಅಯ್ಯರ್ ಅವರ ಬಗ್ಗೆ ಇದ್ದ ಆದರ ಮತ್ತು ಅಭಿಮಾನದ ದ್ಯೋತಕವಷ್ಟೇ ಅಲ್ಲದೆ ಅಯ್ಯರ್ ಅವರಿಗೆ ವಿಜ್ಞಾನ ಅಧ್ಯಯನದ ಹಿನ್ನೆಲೆಯಲ್ಲಿ ಭಾರತೀಯ ಶಾಸ್ತ್ರದರ್ಶನದಲ್ಲಿ ಇದ್ದ ಪ್ರತಿಭೆಯನ್ನೂ ಸೂಚಿಸುತ್ತದೆ. ಮಹಾರಾಜರ ಆಧ್ಯಾತ್ಮಿಕ ಗುರುಗಳಾಗಿ ಸುಬ್ರಹ್ಮಣ್ಯ ಅಯ್ಯರ್ ಅವರು ಮಹಾರಾಜರೊಂದಿಗೆ ಆತ್ಮೀಯ ಬಾಂಧವ್ಯ ಬೆಳೆಸಿಕೊಂಡರು. ಈ ಬಾಂಧವ್ಯ ಕೇವಲ ಒಬ್ಬರದ್ದಾಗಿರಲಿಲ್ಲ, ಪರಸ್ಪರ ಇಬ್ಬರಲ್ಲೂ ಬೆಳೆದಿತ್ತು. ಅಯ್ಯರ್ ಅವರು ಮಹಾರಾಜರು ತಮಗೆ ಹುದ್ದೆಯೊಂದನ್ನು ನೀಡಿದ್ದಕ್ಕೆ ಕೃತಜ್ಞತೆ ಹೊಂದಿದ್ದರೆ, ಮಹಾರಾಜರು ತಮ್ಮ ಅಧ್ಯಾತ್ಮಿಕ ಮಾರ್ಗದರ್ಶನಕ್ಕೆ ಹಾಗೂ ಬೌದ್ಧಿಕ ಮತ್ತು ನೈತಿಕ ಬೆಳವಣಿಗೆಗೆ ಅಯ್ಯರ್ ಅವರಿಗೆ ಋಣಿಯಾಗಿದ್ದರು.

ಶೃಂಗೇರಿ ಜಗದ್ಗುರುಗಳು ಸುಬ್ರಹ್ಮಣ್ಯ ಅಯ್ಯರ್ ಅವರನ್ನಲ್ಲದೆ ವೈ. ಸುಬ್ಬರಾವ್ ಅವರಿಗೂ ಅದ್ವೈತ ವೇದಾಂತಕ್ಕೆ ದೀಕ್ಷೆ ನೀಡಿದ್ದರು. ಸುಬ್ಬರಾವ್ ಅವರಿಗಿಂತ ಹಿರಿಯವರಾಗಿದ್ದ ಅಯ್ಯರ್ ಅವರು ಸುಬ್ಬರಾವ್ ಅವರಿಗೆ ವೇದಾಂತದ ಕಟ್ಟುಪಾಡುಗಳನ್ನು ತಿಳಿಸಿಕೊಟ್ಟಿದ್ದರು. ಸುಬ್ಬರಾವ್ ಅವರು ನಂತರ ಶೃಂಗೇರಿ ಮಠದ ಶ್ರೀಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳಾಗಿ ಕೀರ್ತಿ ಹೊಂದಿದರು.

ಅಯ್ಯರ್ ಅವರು ಅದ್ವೈತ ವೇದಾಂತದ ಬಗ್ಗೆ ಮಾರ್ಗದರ್ಶನ ನೀಡಿದ ಮತ್ತೊಬ್ಬ ಗಮನಾರ್ಹ ವ್ಯಕ್ತಿ ಪಾಲ್ ಬ್ರಂಟನ್. 1898ರಲ್ಲಿ ಜನಿಸಿದ ಪಾಲ್ ಬ್ರಂಟನ್ ವಿದೇಶಗಳಲ್ಲಿ ಸಾಕಷ್ಟು ಪ್ರವಾಸ ಮಾಡಿದವರಾಗಿದ್ದು, 1935–1952ರ ಅವಧಿಯಲ್ಲಿ 13 ಪುಸ್ತಕಗಳನ್ನು ಬರೆದಿದ್ದಾರೆ. ಪಾಶ್ಚಿಮಾತ್ಯ ದೇಶಕ್ಕೆ ಯೋಗ ಮತ್ತು ಧ್ಯಾನವನ್ನು ಪರಿಚಯಿಸಿದವರೆಂದು ಸಾಮಾನ್ಯವಾಗಿ ಅವರನ್ನು ಗುರುತಿಸಲಾಗುತ್ತದೆ. ಅವರು ತಮ್ಮ ದೇಶವಾದ ಸ್ವಿಟ್ಜರ್ಲೆಂಡಿನಲ್ಲಿ 1981ರಲ್ಲಿ ನಿಧನರಾದರು.

ಪಾಲ್ ಬ್ರಂಟನ್ ತಾವು ಬರೆದ ಪುಸ್ತಕಗಳ ಪೈಕಿ "ಇಂಡಿಯನ್ ಫಿಲಾಸಫಿ ಅಂಡ್ ಮಾಡ್ರನ್ ಕಲ್ಚರ್" ಗ್ರಂಥವನ್ನು ಸುಬ್ರಹ್ಮಣ್ಯ ಅಯ್ಯರ್ ಅವರಿಗೂ ಮತ್ತು "ದಿ ಕ್ವೆಸ್ಟ್ ಆಫ್ ದಿ ಓವರ್‌ಸೆಲ್ಫ್" ಗ್ರಂಥವನ್ನು ಮಹಾರಾಜರಿಗೂ ಅರ್ಪಿಸಿದ್ದಾರೆ. ಇನ್ನೊಂದು ಗ್ರಂಥವನ್ನು ಅರುಣಾಚಲದ ಶ್ರೀ ರಮಣ ಮಹರ್ಷಿಗಳಿಗೆ ಸಮರ್ಪಿಸಿದ್ದಾರೆ.

ಪಾಲ್ ಬ್ರಂಟನ್ ಮಹಾರಾಜರ ಆಹ್ವಾನದ ಮೇರೆಗೆ ಮೈಸೂರಿಗೆ ಬಂದಿದ್ದರು. ಬ್ರಂಟನ್ ಅವರ ಗ್ರಂಥಗಳನ್ನು ಓದಿಕೊಂಡಿದ್ದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಭೇಟಿ ಮಾಡಲು ಬಯಸಿ ಅರಮನೆಗೆ ಆಹ್ವಾನಿಸಿದರು. 1937ರಲ್ಲಿ ಬ್ರಂಟನ್ ಮೈಸೂರಿನಲ್ಲಿದ್ದಾಗ ರಾಮಕೃಷ್ಣ ಆಶ್ರಮದಲ್ಲಿ ಸುಬ್ರಹ್ಮಣ್ಯ ಅಯ್ಯರ್ ಅವರು ಅಲ್ಲಿನ ಆಶ್ರಮದ ಸನ್ಯಾಸಿಗಳಿಗೆ ನಡೆಸುತ್ತಿದ್ದ ವೇದಾಂತ ಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದರು.

ಅಯ್ಯರ್ ಅವರ ಪುಸ್ತಕಗಳನ್ನು ಓದಿಕೊಂಡಿದ್ದ ಬ್ರಂಟನ್ ಈ ಪಂಡಿತರ ಮಾರ್ಗದರ್ಶನ ಪಡೆಯುತ್ತಿದ್ದ ಕಾರಣ ಅವರಿಬ್ಬರ ನಡುವೆ ಗುರು–ಶಿಷ್ಯ ಬಾಂಧವ್ಯ ಬೆಳೆಯಿತು. 1937ರ ಜುಲೈ ತಿಂಗಳಲ್ಲಿ ಮೈಸೂರು ರಾಮಕೃಷ್ಣ ಆಶ್ರಮದ ವಿದ್ಯಾರ್ಥಿ ಮತ್ತು ಸ್ನೇಹಿತ, ಸ್ವಾಮಿ ಸಿದ್ಧೇಶ್ವರಾನಂದ ಹಾಗೂ ತಮ್ಮ ಗುರು ಸುಬ್ರಹ್ಮಣ್ಯ ಅಯ್ಯರ್ ಅವರ ಜೊತೆ ವಿದೇಶೀ ಪ್ರಯಾಣ ಕೈಗೊಂಡರು. ಮೂವರೂ ಪ್ಯಾರಿಸ್ಸಿಗೆ ತೆರಳಿ ಸೊರ್ಬೋನ್‌ನಲ್ಲಿ ಪ್ಯಾರಿಸ್ ವಿಶ್ವವಿದ್ಯಾನಿಲಯ ಆಗಸ್ಟ್ ಒಂದರಿಂದ ಏರ್ಪಡಿಸಿದ್ದ 9ನೇ ಅಂತರರಾಷ್ಟ್ರೀಯ ತತ್ವಶಾಸ್ತ್ರ ಕಾಂಗ್ರೆಸ್‌ನಲ್ಲಿ ಭಾಗವಹಿಸಿದರು. ಸುಬ್ರಹ್ಮಣ್ಯ ಅಯ್ಯರ್ ಈ ಸಮ್ಮೇಳನದಲ್ಲಿ ಭಾರತದ ಏಕೈಕ ಪ್ರತಿನಿಧಿಯಾಗಿದ್ದರು.

ಇವೆಲ್ಲದರ ಫಲವಾಗಿ 1930ರಲ್ಲಿ ಮಹಾರಾಜರ ಪ್ರೋತ್ಸಾಹದಿಂದ ವೇದಾಂತ ಅಧ್ಯಯನದ ತಂಡವೊಂದು ಸೃಷ್ಟಿಯಾಗಿ ಅದು 1932ರಲ್ಲಿ ಮೈಸೂರಿನಲ್ಲಿ ರಾಮಕೃಷ್ಣ ಆಶ್ರಮದ ಜನ್ಮಕ್ಕೆ ಕಾರಣವಾಯಿತು. ಅಯ್ಯರ್ ಅವರು ವೇದಾಂತ ಧರ್ಮಗ್ರಂಥಗಳ ಬಗ್ಗೆ ತರಗತಿಗಳನ್ನು ನಡೆಸಿ ಆಶ್ರಮದ ಸ್ವಾಮಿಗಳಿಗೆ ಅವುಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿಯೇ ಬ್ರಿಟನ್ನಿನ ತತ್ವಜ್ಞಾನಿ ಪಾಲ್ ಬ್ರಂಟನ್, ಅಯ್ಯರ್ ಅವರ ಪಾಂಡಿತ್ಯದ ಪ್ರಯೋಜನ ಪಡೆಯುತ್ತಿದ್ದ ಸ್ವಾಮಿ ಸಿದ್ದೇಶ್ವರಾನಂದ ಅವರ ಸ್ನೇಹ ಗಳಿಸಿದ್ದು. ಸ್ವಾಮಿ ಸಿದ್ದೇಶ್ವರಾನಂದ ಅವರು ನಂತರ ಮೈಸೂರು ರಾಮಕೃಷ್ಣ ಆಶ್ರಮದ ಪ್ರಥಮ ಅಧ್ಯಕ್ಷರಾದರು. ಬೇರೆ ಆಶ್ರಮದ ಸ್ವಾಮಿಗಳು ಕೂಡ ಮೈಸೂರಿಗೆ ಬಂದು ಸುಬ್ರಹ್ಮಣ್ಯ ಅಯ್ಯರ್ ಅವರ ಜೊತೆ ವೇದಾಂತದ ಮೇಲೆ ಚರ್ಚಿಸಿ ಅವರ ಪಾಂಡಿತ್ಯದ ಪ್ರಯೋಜನ ಪಡೆಯುತ್ತಿದ್ದರು. ಆಶ್ರಮದ ಕೆಲ ಪ್ರಕಟಣೆಗಳಲ್ಲಿ ಸುಬ್ರಹ್ಮಣ್ಯ ಅಯ್ಯರ್ ಅವರ ಉಪನಿಷತ್ತುಗಳ ಪ್ರಾವೀಣ್ಯತೆಯನ್ನು ನಾವು ಕಾಣಬಹುದು.

1938ರಲ್ಲಿ ಭಾರತ ಸರ್ಕಾರ ಕಲ್ಕತ್ತಾ ವಿಶ್ವವಿದ್ಯಾನಿಲಯದ 25ನೇ ವಾರ್ಷಿಕೋತ್ಸವಕ್ಕೆ ಪ್ರಸಿದ್ಧ ಮನೋರೋಗ ತಜ್ಞ ಸಿ. ಜೆ. ಜಂಗ್ ಅವರನ್ನು ಆಹ್ವಾನಿಸಿತ್ತು. ಬ್ರಂಟನ್ ಅವರ ಮೂಲಕ ಅಯ್ಯರ್ ಅವರ ಪಾಂಡಿತ್ಯದ ಬಗ್ಗೆ ತಿಳಿದುಕೊಂಡಿದ್ದ ಸ್ವಿಟ್ಸರ್ಲೆಂಡಿನ ಈ ಮನೋರೋಗ ತಜ್ಞ, ಸುಬ್ರಹ್ಮಣ್ಯ ಅಯ್ಯರ್ ಅವರನ್ನು ಭೇಟಿ ಮಾಡಿ ದೀರ್ಘ ಚರ್ಚೆ ನಡೆಸಿದರು. ಭಾರತದ ರಾಷ್ಟ್ರಪತಿಯಾದ ಡಾ. ಎಸ್. ರಾಧಾಕೃಷ್ಣನ್ ಕೂಡ ಸ್ವಲ್ಪ ಕಾಲ ಅಯ್ಯರ್ ಅವರ ಶಿಷ್ಯರಾಗಿದ್ದರು.

1949ರ ಕ್ರಿಸ್ಮಸ್ ದಿನ ರಾಜಸೇವಾಸಕ್ತ ವಿ. ಸುಬ್ರಹ್ಮಣ್ಯ ಅಯ್ಯರ್ ಅವರು ನಿಧನರಾದರು. ಆಗ ಅವರಿಗೆ 80 ವರ್ಷ ವಯಸ್ಸಾಗಿತ್ತು. ಆಕಾರದಲ್ಲಿ ಕುಳ್ಳೇ ಎನ್ನಬಹುದಾದ ಅಯ್ಯರ್ ಬಿಳಿ ಪೇಟ, ಕನ್ನಡಕ ಧರಿಸಿ ಶಾಂತ ಸ್ವಭಾವದ ವ್ಯಕ್ತಿಯಾಗಿದ್ದರು. ಅವರ ಕಂಕುಳಲ್ಲಿ ಸಾಮಾನ್ಯವಾಗಿ ಕೆಲ ಗ್ರಂಥಗಳು ಸದಾ ಇದ್ದೇ ಇರುತ್ತಿದ್ದವು. ವೇದಾಂತದಲ್ಲಿ ಅದ್ವಿತೀಯ ಪ್ರತಿಭೆ ಹಾಗೂ ಭಾರತೀಯ ತತ್ವಶಾಸ್ತ್ರದಲ್ಲಿ ವಿಶಿಷ್ಟ ಅರಿವು ಹೊಂದಿದ್ದ ಜ್ಞಾನಿಯೊಬ್ಬರನ್ನು ಮೈಸೂರು ಅಂದು ಕಳೆದುಕೊಂಡಿತು.

ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಸ್ವಾಮಿ ಸಿದ್ದೇಶ್ವರಾನಂದ ಅವರು ಈ ರೀತಿ ಬರೆಯುತ್ತಾರೆ: "ಸುಬ್ರಹ್ಮಣ್ಯ ಅಯ್ಯರ್ ಅವರು ಅತ್ಯಂತ ನಿಗೂಢ ಸತ್ಯಗಳ ಬಗ್ಗೆ ಶ್ರೇಷ್ಠ ಬೌದ್ಧಿಕ ವಿವೇಚನೆ ಹೊಂದಿದ್ದು, ಅವರು ಇನ್ನೊಂದು ಬಾರಿ ಮಾತ್ರ ಹುಟ್ಟಿ ಬರುತ್ತಾರೆಂದು ನಾನು ನಂಬುತ್ತೇನೆ. ಪುಸ್ತಕಗಳಲ್ಲಿ ಬರೆಯದ ಕೇವಲ ವೈಯಕ್ತಿಕವಾಗಿ ತಿಳಿಸಿಕೊಟ್ಟ ಶಂಕರ ಸಿದ್ಧಾಂತದ ಸಂಪ್ರದಾಯ ಬದ್ಧ ನಿಗೂಢ ತತ್ವಗಳತ್ತ ಅವರನ್ನು ಉಪಕ್ರಮಿಸಲಾಗಿತ್ತು" ಅಂತಹ ಅಪರೂಪ ಪಾಂಡಿತ್ಯದ ಪಂಡಿತರೊಬ್ಬನನ್ನು ಮೈಸೂರು ಅಂದು ಕಳೆದುಕೊಂಡು ಬಡವಾಗಿತ್ತು.

# ಯುವ ಜನರ ಪೋಷಿಸಿ–ಪ್ರೋತ್ಸಾಹಿಸಿದರೆ ಉಜ್ವಲ ಭಾರತ ನಿರ್ಮಾಣ

ಮೈಸೂರು, ಜ.13(ಎಸ್‌ಬಿಡಿ)– ಸ್ವಾಮಿ ವಿವೇಕಾನಂದರ ವಾಣಿ ಸರ್ವಧರ್ಮಗಳ ಒಳಿತಿನ ಅಮೃತದಲ್ಲಿ ಅದ್ದಿ ತೆಗೆದ ನುಡಿ ಮಾಲೆಯಾಗಿವೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಬಣ್ಣಿಸಿದರು.

### ಸ್ವಾಮಿ ವಿವೇಕಾನಂದರ ಅಚಲ ವಿಶ್ವಾಸ ಸ್ಮರಣೆ



ಮೈಸೂರಿನ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶನಿವಾರ ವಿವಿಧ ಕ್ಷೇತ್ರದ ಸಾಧಕರನ್ನು ಪ್ರಶಸ್ತಿ ನೀಡಿ, ಅಭಿನಂದಿಸಲಾಯಿತು.

ಮೈಸೂರಿನ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ಸಹಯೋಗದಲ್ಲಿ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾ ಮಂಟಪದಲ್ಲಿ ಏರ್ಪಡಿಸಿದ್ದ ಸ್ವಾಮಿ ವಿವೇಕಾನಂದ ಜಯಂತಿ, ಜ್ಞಾನ ಯೋಗಿ ಶ್ರೀ ಸಿದ್ದೇಶ್ವರ ಸ್ವಾಮಿಗಳಿಗೆ ನುಡಿ ನಮನ, ವಿವೇಕ ಯುವ ಸಿರಿ ಪ್ರಶಸ್ತಿ' ಮತ್ತು 'ಜ್ಞಾನ ಯೋಗಿ ಪ್ರಶಸ್ತಿ' ಪ್ರದಾನ ಸಮಾರಂಭವನ್ನು ಉದ್ಘಾಟಿಸಿ, ಮಾತನಾಡಿದರು.

ಸರ್ವ ಜೀವ ರಾಶಿಗಳಿಗೂ ಒಳಿತನ್ನೇ ಬಯಸಬೇಕೆಂದು ಮನುಷ್ಯ ಮನಸ್ಸುಗಳನ್ನು, ಅದರಲ್ಲೂ ಯುವ ಮನಸ್ಸುಗಳನ್ನು ಬಡಿದೆಚ್ಚರಿಸಿ ಜಾಗೃತಿಗೊಳಿಸಿದ ಸ್ವಾಮಿ ವಿವೇಕಾನಂದರು, ಅಲ್ಪಾಯುಷ್ಯದಲ್ಲೇ ಅಗಾಧವಾದ ಸಾಧನೆ ಮಾಡಿ ವಿವೇಕ ಪ್ರಭೆಯಾಗಿ ದೇಶಕ್ಕೆ ಮುಂಬೆಳಕು ನೀಡಿದರು. ಅವರ ವಾಣಿಗಳು ಸರ್ವಧರ್ಮಗಳ ಒಳಿತಿನ ಅಮೃತದಲ್ಲಿ ಅದ್ದಿ ತೆಗೆದ ನುಡಿ ಮಾಲೆಯಾಗಿವೆ. 1893ರ ಸೆಪ್ಟೆಂಬರ್ 11ರಂದು ಅಮೆರಿಕದ ಶಿಕಾಗೊದಲ್ಲಿ ನಡೆದ ಸರ್ವ ಧರ್ಮ ಸಮ್ಮೇಳನದಲ್ಲಿ ಮೊಳಗಿಸಿದ 'ಅಮೆರಿಕಾದ ಸಹೋದರಿ, ಸಹೋದರರೇ...' ಉದ್ಘೋಷ ಇಂದಿಗೂ ಅಲ್ಲಿ ಮಾರ್ದನಿಸುತ್ತಲೇ ಇದೆ ಎಂದರು.

ಯುವ ಶಕ್ತಿಯ ಬಗ್ಗೆ ಅಪಾರ ನಂಬಿಕೆ ಇದ್ದ ವಿವೇಕಾನಂದರು, ಯುವಜನರನ್ನು ಅನಗತ್ಯವಾಗಿ ಟೀಕಿಸದೆ ಅವರನ್ನು ಪ್ರೋತ್ಸಾಹಿಸಿ ಉತ್ತೇಜಿಸಿದರೆ ಭವಿಷ್ಯದಲ್ಲಿ ಅವರೇ ದೇಶ ಕಟ್ಟುವವರಾಗುತ್ತಾರೆಂದು ಹೇಳುತ್ತಿದ್ದರು. ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗುವುದರ ಜೊತೆಗೆ ನಿರ್ಭೀತ ನಡೆ ಬೆಳೆಸಿಕೊಂಡರೆ ನೀವು ಏನನ್ನಾದರೂ ಸಾಧಿಸಬಲ್ಲಿರಿ ಎಂದು ಯುವಜನರನ್ನು ಹುರಿದುಂಬಿಸಿದರು. 'ಏಳಿ, ಎದ್ದೇಳಿ, ಎಚ್ಚರಗೊಳ್ಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂಬ ಅವರ ಕರೆ ಇಂದಿಗೂ ಅನುರಣಿಸುತ್ತಿದೆ. ದೇಶ ನಿಷ್ಠೆಯ, ದೇಶಭಕ್ತ ವಿವೇಕಾನಂದರು ಧರ್ಮವು ಕೇವಲ ಸಿದ್ಧಾಂತವಾಗಿರಲಿಲ್ಲ. ದಾನವರನ್ನು ಮಾನವರನ್ನಾಗಿಸುವ ಸನ್ಮಾರ್ಗ ಎಂದು ನಂಬಿದ್ದರು ಎಂದರು.

ರಾಷ್ಟ್ರೀಯ ಸಂತ, ಆಧ್ಯಾತ್ಮಿಕ ಚೇತನ, ವೀರ ಸನ್ಯಾಸಿ ವಿವೇಕಾನಂದರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ವಿವೇಕ ನಡೆಯಲ್ಲೇ ನಡೆದು ಆಧ್ಯಾತ್ಮಿಕ ಶಿಖರವಾಗಿದ್ದ ಜ್ಞಾನ ಯೋಗಿ ಶ್ರೀ ಸಿದ್ದೇಶ್ವರ ಸ್ವಾಮಿಗಳು ಸಹ ವಿವೇಕ ಜ್ಞಾನಿ ಆದವರು. ಹಾಗಾಗಿ ಇಂತಹ ಮಹಾಮಹಿಮರ ಹೆಸರಿನಲ್ಲಿ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಧಾನ ಭಾಷಣ ಮಾಡಿದ ಸಾಹಿತಿ ಡಾ.ಜಯಪ್ಪ ಹೊನ್ನಾಳಿ, ಸ್ವಾಮಿ ವಿವೇಕಾನಂದರು ಹಾಗೂ ಸಿದ್ದೇಶ್ವರ ಸ್ವಾಮಿಗಳ ಆಧ್ಯಾತ್ಮ ಚಿಂತನೆ ಹಾಗೂ ಸಾಧನೆಯನ್ನು ಬಣ್ಣಿಸಿದರು. ಇದೇ ವೇಳೆ ಧಾರ್ಮಿಕ ಕ್ಷೇತ್ರದ ಸೇವೆಗೆ ಶ್ರೀವಿಷ್ಣು ಸಾಲಿಗ್ರಾಮಸ್ವಾಮಿ ಹಾಗೂ ಪತ್ರಿಕಾ ವಿತರಕ ಸಿ.ಡಿ.ಹರೀಶ್‌ಗೆ 'ಜ್ಞಾನಯೋಗಿ' ಪ್ರಶಸ್ತಿ ಹಾಗೂ ಸಮಾಜ ಸೇವೆಯಲ್ಲಿರುವ ಡಾ.ಚಕ್ರಪಾಣಿ, ನಾಗಮಣಿ, ಮಲ್ಲೇಶ್ ಹಾಗೂ ಸಂದೀಪ್‌ಗೆ 'ವಿವೇಕ ಯುವ ಸಿರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್, ಚಿತ್ರನಟ ಸುಪ್ರೀತ್, ಆರೋಗ್ಯತಜ್ಞೆ ಡಾ.ನಂದಿನಿ ಮೂರ್ತಿ, ಸಮಾಜ ಸೇವಕಿ ವಿದ್ಯಾ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಶ್ರೀ ಬಸವ ರಾಜೇಂದ್ರಸ್ವಾಮಿ, ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ಅಧ್ಯಕ್ಷೆ ನಾಗಶ್ರೀ ಸುಚೇಂದ್ರ ಮತ್ತಿತರರು ಉಪಸ್ಥಿತರಿದ್ದರು.

### ಸಾವನ್ನಪ್ಪಿದ್ದ ಅಜ್ಜ ಆಂಬುಲೆನ್ಸ್ ರಸ್ತೆ ಗುಂಡಿಗೆ ಬಿದ್ದ ಬಳಿಕ ಜೀವಂತ!

ನವದೆಹಲಿ, ಜ.13– ಮುಳುಗುತ್ತಿದ್ದವನಿಗೆ ಹುಲ್ಲುಕಡ್ಡಿ ಆಸರೆ ಎಂಬ ಗಾದೆ ಮಾತೊಂದಿದೆ. ಆದರೆ ಹರ್ಯಾಣದಲ್ಲೊಂದು ಅಚ್ಚರಿಯ ಘಟನೆಯೊಂದು ನಡೆದಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ 80 ವರ್ಷದ ಅಜ್ಜ ಸಾವನ್ನಪ್ಪಿರುವುದಾಗಿ ವೈದ್ಯರು ತಿಳಿಸಿದ ನಂತರ, ಕುಟುಂಬ ಸದಸ್ಯರು ಶವವನ್ನು ಆಂಬುಲೆನ್ಸ್‌ನಲ್ಲಿ ಪಂಜಾಬ್‌ನ ಕರ್ನಲ್‌ಗೆ ತೆಗೆದುಕೊಂಡು ಹೋಗುತ್ತಿದ್ದ ವೇಳೆ ಆಂಬುಲೆನ್ಸ್ ರಸ್ತೆಯಲ್ಲಿನ ದೊಡ್ಡ ಗುಂಡಿಗೆ ಹಾರಿತ್ತು. ತಕ್ಷಣವೇ ಆಂಬುಲೆನ್ಸ್‌ನೊಳಗಿದ್ದ ಅಜ್ಜ ಉಸಿರಾಡಲು ಆರಂಭಿಸಿದ್ದರು!

ಈ ವ್ಯಕ್ತಿಯನ್ನು ದರ್ಶನ್ ಸಿಂಗ್ ಬ್ರಯಾರ್ ಎಂದು ಗುರುತಿಸಲಾಗಿದೆ. ಆಂಬುಲೆನ್ಸ್ ಗುಂಡಿಗೆ ಬಿದ್ದ ನಂತರ ಉಸಿರಾಟಲು ಆರಂಭಿಸಿದ ಅಜ್ಜನನ್ನು ಕರ್ನಲ್ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ ಎಂದು ವರದಿ ತಿಳಿಸಿದೆ. ಪಂಜಾಬ್‌ನ ಕರ್ನಲ್‌ನಲ್ಲಿರುವ ಸಿಂಗ್ ಮನೆಯಲ್ಲಿ ಕುಟುಂಬದವರು ಅಂತ್ಯಸಂಸ್ಕಾರ ನಡೆಸಲು ಸಿದ್ಧತೆ ನಡೆಸುತ್ತಿದ್ದರು. ಏತನ್ಮಧ್ಯೆ ಆಂಬುಲೆನ್ಸ್ ರಸ್ತೆ ಗುಂಡಿಗೆ ಬಿದ್ದ ನಂತರ ಅಜ್ಜ ಕೈ ಅಲುಗಾಡಿಸುತ್ತಿರುವುದನ್ನು ಗಮನಿಸಿದ ಮೊಮ್ಮಗ ನಾಡಿ ಮಿಡಿತ ಪರೀಕ್ಷಿಸಿದ್ದ. ಆಗ ನಾಡಿ ಮತ್ತು ಹೃದಯ ಬಡಿತ ಕೇಳಿಸಿದ್ದು, ಕೂಡಲೇ ಸಮೀಪದ ಆಸ್ಪತ್ರೆಗೆ ಕರೆದೊಯ್ಯುವಂತೆ ಆಂಬುಲೆನ್ಸ್ ಚಾಲಕನಿಗೆ ಮೊಮ್ಮಗ ಹೇಳಿರುವುದಾಗಿ ವರದಿ ಹೇಳಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

# ಇಂದು 'ಅಗಸ್ತ್ಯ ಸಿದ್ಧ ವೈದ್ಯ ಪದ್ಧತಿ' ಗ್ರಂಥ ಬಿಡುಗಡೆ



ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕೃತಿ ಲೇಖಕ ಪಿ.ಎಸ್. ನರಸಿಂಹಸ್ವಾಮಿ ಮಾತನಾಡಿದರು. ಚಿತ್ರದಲ್ಲಿ ಖ್ಯಾತ ವಕೀಲ ಓ.ಶ್ಯಾಂ ಭಟ್, ಡಾ.ಚಂದ್ರಶೇಖರ್, ಶ್ರೀನಿವಾಸ್ ಅವರನ್ನು ಕಾಣಬಹುದು.

ಮೈಸೂರು,ಜ.13(ಜಿಎ)–ಮೈಸೂರಿನ ಅಗಸ್ತ್ಯ ಸಾಹಿತ್ಯ ಸಂಶೋಧನ ಕೇಂದ್ರದ ವತಿಯಿಂದ 'ಅಗಸ್ತ್ಯ ಸಿದ್ಧ ವೈದ್ಯ ಪದ್ಧತಿ' ಗ್ರಂಥ ಬಿಡುಗಡೆ ಸಮಾರಂಭವನ್ನು ನಾಳೆ(ಜ.14) ಬೆಳಗ್ಗೆ 10ಕ್ಕೆ ನಂಜುಮಳಿಗೆಯ ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಿದ್ಧ ವೈದ್ಯರೂ ಹಾಗೂ ಕೃತಿ ಲೇಖಕರೂ ಆದ ಪಿ.ಎಸ್. ನರಸಿಂಹಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಶಾಸಕ ಶ್ರೀವತ್ಸ, ಖ್ಯಾತ ವಕೀಲರಾದ ಓ.ಶ್ಯಾಂ ಭಟ್, ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್‌ನ ಡಾ.ಅರುಳ್ ಅಮುದನ್, ಅಮೇರಿಕಾದ ಮೋರ್ ಹೌಸ್ ಸ್ಕೂಲ್ ಆಫ್ ಮೆಡಿಸಿನ್‌ನ ಅಧ್ಯಕ್ಷ ಡಾ.ಸೆಲ್ವ ಷಣ್ಮುಗಂ, ಮೈಸೂರು ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಕೆ.ಎಸ್.ರಾಧಾಕೃಷ್ಣರಾವ್, ಹಿರಿಯ ಆಯುರ್ವೇದ ತಜ್ಞರಾದ ಡಾ.ಎನ್.ಎಸ್. ರಾಮಚಂದ್ರ, ಡಾ.ಚಂದ್ರಶೇಖರ್ ಮುಖ್ಯ ಅತಿಥಿಗಳಾಗಿರುವರು.

ಸುಮಾರು 30 ವರ್ಷಗಳಿಂದ ಸಿದ್ಧ ವೈದ್ಯ ಪದ್ಧತಿ ಕುರಿತಂತೆ ಸಂಶೋಧನೆಯಲ್ಲಿ ತೊಡಗಿ ಗ್ರಂಥವನ್ನು ರಚಿಸಿದ್ದು, ಸಿದ್ಧ ವೈದ್ಯ ಪದ್ಧತಿ ಕುರಿತಂತೆ ತಮಿಳಿನಲ್ಲಿ ಹೆಚ್ಚು ಸಾಹಿತ್ಯವಿದೆ. ಆದರೆ ಆಯುರ್ವೇದ ಕುರಿತಂತೆ ಸಂಸ್ಕೃತ ಹಾಗೂ ಇಂಗ್ಲಿಷ್‌ನಲ್ಲಿ ಅಪಾರ ಸಾಹಿತ್ಯವಿದೆ. ಈ ಕಾರಣದಿಂದಾಗಿ ಸಿದ್ಧ ವೈದ್ಯ ಪದ್ಧತಿ ಆಯುರ್ವೇದದಷ್ಟು ಪ್ರಚಾರ ಪಡೆಯಲಿಲ್ಲ ಎಂದು ತಿಳಿಸಿದರು.

ಈ ಹಿನ್ನೆಲೆಯಲ್ಲಿ ಸ್ವತಃ ತಮಿಳು ಹಾಗೂ ಮಲೆಯಾಳಂ ಕಲಿತು ತಮಿಳುನಾಡು ಹಾಗೂ ಕೇರಳಗಳಲ್ಲಿ ಕಾಡುಮೇಡು ಅಲೆದು ಸಿದ್ಧ ವೈದ್ಯ ಪದ್ಧತಿ ಆಚರಿಸುತ್ತಿರುವವರನ್ನು ಭೇಟಿ ಮಾಡಿ ಈ ಗ್ರಂಥ ರಚಿಸಲಾಗಿದೆ. ಜೊತೆಗೆ, ಕನ್ನಡದಲ್ಲಿಯೂ ಈ ಮೊದಲೇ ಈ ಪದ್ಧತಿ ಕುರಿತು ಒಂದು ಗ್ರಂಥ ರಚಿಸಿದ್ದು, ಈಗಿನ ಪುಸ್ತಕ 417 ಪುಟದ್ದಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಖ್ಯಾತ ವಕೀಲ ಓ.ಶ್ಯಾಂ ಭಟ್, ಡಾ.ಚಂದ್ರಶೇಖರ್, ಶ್ರೀನಿವಾಸ್ ಉಪಸ್ಥಿತರಿದ್ದರು.

# ನಾಳೆ ಸಾಧಕರಿಗೆ ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿ ಪ್ರದಾನ

ಮೈಸೂರು,ಜ.13–ಭೂಮಿಗಿರಿ ನಾರಾಯಣಪ್ಪ ಪ್ರತಿಷ್ಠಾನದ ವತಿಯಿಂದ ಜ.15 ಸೋಮವಾರ ಸಂಜೆ 4:30ಕ್ಕೆ ಮೈಸೂರಿನ ವಿಜಯನಗರದ ಒಂದನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ 9ನೇ ವರ್ಷದ ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿ ಪ್ರದಾನ, 2024ರ ಕ್ಯಾಲೆಂಡರ್ ಬಿಡುಗಡೆ, 'ಗಾನ–ನಂದನ' ಉದ್ಘಾಟನೆ ಹಾಗೂ ಸಂಗೀತ ಸಂಜೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

2024ನೇ ಸಾಲಿನ ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿಯನ್ನು ಮೂವರಿಗೆ ನೀಡಲಾಗುತ್ತಿದ್ದು, ಮೈಸೂರಿನ ಕನ್ನಡಪ್ರಭ ಕಾರ್ಯನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನಕುಮಾರ್, ಶಿಕ್ಷಣ ಕ್ಷೇತ್ರದಲ್ಲಿ ಮನೆಮಾತಾಗಿರುವ ಎಂ.ಐ.ಟಿ ಕಾಲೇಜಿನ ಪ್ರಾಂಶುಪಾಲ ಡಾ.ವೈ.ಟಿ.ಕೃಷ್ಣೇಗೌಡ ಹಾಗೂ ಪ್ರಸಿದ್ಧ ಲೇಖಕಿ ಬಿ.ಕೆ.ಮೀನಾಕ್ಷಿ ಅವರಿಗೆ ಪ್ರದಾನ ಮಾಡಲಾಗುತ್ತಿದೆ.

ಇದೇ ವೇಳೆ 2024ರ ಕ್ಯಾಲೆಂಡರ್ ಬಿಡುಗಡೆ ಹಾಗೂ ಗಾನನಂದನ ಉದ್ಘಾಟನೆ ನಂತರ ಎನ್.ಬೆಟ್ಟೇಗೌಡರ ಸಾರಥ್ಯದಲ್ಲಿ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಈ ಸಂಗೀತ ಸಂಜೆಯಲ್ಲಿ ಡಾ.ವೈ.ಡಿ.ರಾಜಣ್ಣ, ಡಾ.ಬಿ.ಎನ್.ರವೀಶ್, ಡಾ.ಎ.ಎಸ್ ಪೂರ್ಣಿಮಾ, ಲತಾ ಮನೋಹರ್, ಸಿ.ಎಸ್.ವಾಣಿ ಸುಶ್ರಾವ್ಯ ಗೀತೆಗಳನ್ನು ಹಾಡಲಿದ್ದಾರೆ. ಶಾಸಕ ಕೆ ಹರೀಶ್‌ಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, 'ಗಾನ–ನಂದನ' ಲಾಂಛನವನ್ನು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಬಿಡುಗಡೆಗೊಳಿಸುವರು. ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿಯನ್ನು ಡಾ.ಲಯನ್ ನಾಗರಾಜ ವಿ ಭೈರಿ ಪ್ರದಾನ ಮಾಡುವರು. 2024ರ ಕ್ಯಾಲೆಂಡರ್ ಅನ್ನು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಬಿಡುಗಡೆಗೊಳಿಸುವರು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸ್ಕೃತಿ, ಚಿಂತಕರಾದ ಡಾ.ರಘುರಾಂ ವಾಜಪೇಯಿ, ಪ್ರಧಾನ ಕಾರ್ಯದರ್ಶಿ ಎಂಎನ್.ಚಂದ್ರಶೇಖರ್ ಇನ್ನಿತರರು ಉಪಸ್ಥಿತರಿರುವರು.

## ಬೆಂಗಳೂರು ರೇಸ್ ಕೋರ್ಸ್ ಬುಕ್ಕಿಂಗ್ ಕೌಂಟರ್ ಮೇಲೆ ಸಿಸಿಬಿ ದಾಳಿ; 3.47 ಕೋಟಿ ವಶ!



**ಬೆಂಗಳೂರು:** ರೇಸ್ ಕೋರ್ಸ್‌ನ ಕುದುರೆ ರೇಸ್ ಬುಕ್ಕಿಂಗ್ ಕೌಂಟರ್ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದು 3.47 ಕೋಟಿ ವಶಪಡಿಸಿಕೊಳ್ಳಲಾಗಿದೆ. ಬುಕ್ಕಿಂಗ್ ಕೌಂಟರ್ ನಿಗದಿತ ದರಗಳಿಗಿಂತ ಹೆಚ್ಚಿನ ಬೆಲೆಗೆ ಟಿಕೆಟ್ ಮಾರಾಟ ಹಾಗೂ ಜಿಎಸ್‌ಟಿ ಕಟ್ಟದೇ ವಂಚನೆ ಮಾಡಿದ ಆರೋಪಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದರು. ಕಳೆದ ರಾತ್ರಿ ಬುಕ್ಕಿಂಗ್ ಕೌಂಟರ್‌ಗಳನ್ನು ಲಾಕ್ ಮಾಡಿ ಕೌಂಟರ್‌ನಲ್ಲಿನ ಸಿಬ್ಬಂದಿ ಹೊರ ಹೋಗದಂತೆ ತಡೆದು ಪರಿಶೀಲಿಸಿದ್ದು ಮಧ್ಯರಾತ್ರಿ 1 ಗಂಟೆ ಸುಮಾರಿಗೆ ದಾಳಿ ಅಂತ್ಯಗೊಳಿಸಿದ್ದಾರೆ. ಈ ವೇಳೆ 60 ಜನರನ್ನು ವಶಕ್ಕೆ ಪಡೆದು ಅವರ ವಿರುದ್ಧ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

## '90ರ ನಂತರದ ಕರ್ನಾಟಕ' ರಾಜ್ಯ ಮಟ್ಟದ ವಿಚಾರ ಕಮ್ಮಟ

# ಸ್ವಾತಂತ್ರ್ಯ ಬಂದು 75 ವರ್ಷವಾದರೂ ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಹಿಂದುಳಿದಿದ್ದೇವೆ

### ಹಣಕಾಸು ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ವಿಷಾದ



ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ '90ರ ನಂತರದ ಕರ್ನಾಟಕ' ರಾಜ್ಯ ಮಟ್ಟದ ವಿಚಾರ ಕಮ್ಮಟವನ್ನು ಹಣಕಾಸು ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಸಂವಿಧಾನ ಪೀಠಿಕೆ ಓದುವ ಮೂಲಕ ಉದ್ಘಾಟಿಸಿದರು.

ಮೈಸೂರು, ಜ.13(ಎಂಟಿವೈ)– ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಇಂದಿಗೂ ಹಸಿವು, ನಿರುದ್ಯೋಗ, ಅನಾರೋಗ್ಯ ಸೇರಿದಂತೆ ಇನ್ನಿತರ ಕ್ಷೇತ್ರಗಳಲ್ಲಿ ಹಿಂದುಳಿದಿದ್ದೇವೆ ಎಂದು ಹಣಕಾಸು ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ವಿಷಾದಿಸಿದ್ದಾರೆ.

ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶ್ರವಣ ಸಂಸ್ಕೃತಿ ಟ್ರಸ್ಟ್ ಹಾಗೂ ಬಯಲು ಬಳಗದ ವತಿಯಿಂದ ಶನಿವಾರ ಆಯೋಜಿಸಿದ್ದ '90ರ ನಂತರದ ಕರ್ನಾಟಕ' ರಾಜ್ಯಮಟ್ಟದ ವಿಚಾರ ಕಮ್ಮಟವನ್ನು ಸಂವಿಧಾನ ಪೀಠಿಕೆ ಓದುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಮಹತ್ವ ನೀಡದಿರುವುದೇ ಇಂದು ಈ ಕ್ಷೇತ್ರದ ಹಿನ್ನಡೆಗೆ ಕಾರಣವಾಗಿದೆ. ಸಂವಿಧಾನದಲ್ಲಿ 1950ರ ನಂತರ ದೇಶದಲ್ಲಿ 10 ವರ್ಷದ ಅವಧಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುತ್ತೇವೆ ಎಂದಿದ್ದೇವೆ. ಆದರೆ, ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲಿಲ್ಲ. ಇದರಿಂದ ಅನಕ್ಷರಸ್ಥರ ಪ್ರಮಾಣ ಹೆಚ್ಚಾಗಿದೆ ಎಂದರು.


ನಮ್ಮಲ್ಲಿ ಸರ್ವ ಶಿಕ್ಷಣ ಅಭಿಯಾನ 2000ರಲ್ಲಿ ಆರಂಭಿಸಲಾಯಿತು. 2006ರ ಸಮೀಕ್ಷೆ ನಡೆಸಿದಾಗ ಶಾಲೆ ಬಿಟ್ಟವರ ಸಂಖ್ಯೆ ಶೇ.50ರಷ್ಟು ಇರುವುದು ಕಂಡುಬಂದಿತ್ತು. ಕೆಲವು ರಾಜ್ಯಗಳಲ್ಲಿ ಶೇ.80ರಷ್ಟು ಶಾಲೆ ಬಿಟ್ಟವರ ಸಂಖ್ಯೆ ಇದ್ದದ್ದು ಕಂಡು ಬಂದಿತು. ಒಟ್ಟಾರೆ ಶಿಕ್ಷಣದ ಸರಾಸರಿ ಶೇ.50–60ರಷ್ಟೇ ಇತ್ತು. ನಾವು ನಾಲ್ಕು ದಶಕಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಏನು ಮಾಡಿದ್ದೇವೆ ಎಂದು ವಿಮರ್ಶೆ ಮಾಡಬೇಕಾಗಿದೆ. ಐಐಟಿ ನಿರ್ಮಾಣ, ಐಐಹೆಚ್ ಕಟ್ಟಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಆದರೆ, ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ನೀಡಲಿಲ್ಲ ಎಂದು ವಿಷಾದಿಸಿದರು.

ನಮ್ಮ ದೇಶದಲ್ಲಿ ಆರೋಗ್ಯ ರಕ್ಷಣೆಗಾಗಿ ಶೇ.75ರಷ್ಟು ಮಂದಿ ಸ್ವಂತ ಹಣವನ್ನು ವಿನಿಯೋಗಿಸುತ್ತಿದ್ದಾರೆ. ಯಾವುದೇ ವಿಕಸಿತ ದೇಶಗಳಲ್ಲಿ ಆರೋಗ್ಯ ರಕ್ಷಣೆಗೆ ಸ್ವಂತ ಹಣ ವೆಚ್ಚ ಮಾಡುವುದಿಲ್ಲ. ವಿದೇಶಗಳಲ್ಲಿ ಆರೋಗ್ಯ ಕಾಪಾಡಲು ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಅಥವಾ ವಿಮೆಯಿಂದ ಹಣ ವಿನಿಯೋಗ ಮಾಡುವ ವ್ಯವಸ್ಥೆಯಿದೆ. ನಮ್ಮಲ್ಲಿ ವಿಮೆಯೂ ಇಲ್ಲ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯೂ ಇಲ್ಲ. ಹಾಗಾಗಿ ಅನಾರೋಗ್ಯಪೀಡಿತರು ಹಾಗೂ ಅಪೌಷ್ಟಿಕತೆ ಸಮಸ್ಯೆ ಎದುರಿಸುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಯಾರಾದರೂ ಅನಾರೋಗ್ಯ ಕ್ಕೀಡಾದರೆ, ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾದರೆ ತುರ್ತಾಗಿ 5 ಲಕ್ಷ ರೂ. ಹೊಂದಿಸಲು ಆಗುವುದಿಲ್ಲ. ವಿದೇಶಗಳಲ್ಲಿ ನಿರೀಕ್ಷಿತ ಖರ್ಚು ಭರಿಸಲು ವಿಮೆಯಂತಹ ವ್ಯವಸ್ಥೆ ಮಾಡಿಕೊಂಡಿವೆ. ಆದರೆ, ನಮ್ಮಲ್ಲಿ ಅಂತಹ ವ್ಯವಸ್ಥೆ ಮಾಡಿಕೊಂಡಿಲ್ಲ. ಇದರಿಂದ ಯುನಿವರ್ಸಲ್ ಹೆಲ್ತ್ ಕೇರ್‌ನಲ್ಲಿ ಹಾಗೂ ಯುನಿವರ್ಸಲ್ ಎಜುಕೇಷನ್‌ನಲ್ಲಿ ಸಾಧನೆ ಮಾಡಲು ಸಾಧ್ಯವಾಗಿಲ್ಲ ಎಂದು ವಿಷಾದಿಸಿದರು.

ಕಾರ್ಯಕ್ರಮದಲ್ಲಿ ಕಮ್ಮಟದ ನಿರ್ದೇಶಕ ಬಂಜಗೆರೆ ಜಯಪ್ರಕಾಶ್, ಹಿರಿಯ ರಂಗಕರ್ಮಿ ಕೋಟಿಗಾನಹಳ್ಳಿ ರಾಮಯ್ಯ, ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ನಿರ್ದೇಶಕಿ ಲಕ್ಷ್ಮೀಪ್ರಿಯಾ, ರವಿಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ನಮ್ಮ ದೇಶದಲ್ಲಿ ಹಸಿವಿನ ಸಮಸ್ಯೆಯನ್ನು ಯಾರೂ ನಂಬುತ್ತಿಲ್ಲ. ಇದರಿಂದ ಹಸಿವಿನ ಪ್ರಮಾಣ ಹೆಚ್ಚಾಗುತ್ತಲೇ ಇದೆ. ವಾಟ್ಸಪ್‌ಗಳಲ್ಲಿ ಬರುವ ಸುಳ್ಳುಗಳನ್ನೇ ನಂಬುವ ಸ್ಥಿತಿ ನಿರ್ಮಾಣವಾಗಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಕ್ರಿಟಿಕಲ್ ಥಿಂಕಿಂಗ್ ಎನ್ನುವುದೇ ಇಲ್ಲ. ಕೇವಲ ಕಂಠಪಾಠದಂತಹ ಶಿಕ್ಷಣ ವ್ಯವಸ್ಥೆ ನಮ್ಮಲ್ಲಿದೆ. ಮಕ್ಕಳಿಗೆ ಪ್ರೋಟೀನ್‌ಯುಕ್ತ ಆಹಾರ ನೀಡದೇ, ಕೇವಲ ಅನ್ನ, ಸಾಂಬರ್ ನೀಡಲಾಗುತ್ತಿದೆ. ಗರ್ಭದ ದಿನಗಳನ್ನು ಒಳಗೊಂಡಂತೆ ಮಕ್ಕಳಿಗೆ ಪ್ರೋಟೀನ್ ಕೊಡಲು ವಿಫಲರಾಗುತ್ತಿದ್ದೇವೆ. ವಿಕಸಿತ ಭಾರತ ಎನ್ನುತ್ತೇವೆ. ಆದರೆ ಹಲವು ವೈಫಲ್ಯಗಳು ನಮ್ಮ ಮುಂದೆ ಕಾಣುತ್ತಿವೆ.
>
> –ಎಲ್.ಕೆ.ಅತೀಕ್

# ಭಾರಿ ಕಮಿಷನ್ ಆಸೆ ತೋರಿಸಿ 7 ಮಂದಿಗೆ ಆನ್‌ಲೈನ್‌ನಲ್ಲಿ ಲಕ್ಷಾಂತರ ರೂ. ವಂಚನೆ



ಮೈಸೂರು, ಜ. 13– ಟಾಸ್ಕ್‌ಗಳನ್ನು ಪೂರೈಸಿದರೆ ದೊಡ್ಡ ಮೊತ್ತದ ಕಮಿಷನ್ ದೊರೆಯುತ್ತದೆ ಎಂಬ ಆಮಿಷವೊಡ್ಡಿ ಮೈಸೂರಿನ 7 ಮಂದಿಗೆ ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚಿಸಲಾಗಿದೆ.

**ಇಂಜಿನಿಯರ್‌ಗೆ 4.05 ಲಕ್ಷ ನಾಮ!:** ಮೈಸೂರಿನ ರಾಮಕೃಷ್ಣನಗರ 'ಕೆ' ಬ್ಲಾಕ್ ನಿವಾಸಿಯಾಗಿರುವ ಇಂಜಿನಿಯರ್ ಮೇಘನಾ ಎಸ್. ವಸಿಷ್ಠ(25) ಅವರಿಗೆ ವಾಟ್ಸಾಪ್ ಮೂಲಕ ಕೆಲಸದ ಬಗ್ಗೆ ಮೆಸೇಜ್ ಬಂದಿದೆ. ಅದಕ್ಕೆ ಅವರು ಸ್ಪಂದಿಸಿದಾಗ ಯುಟ್ಯೂಬ್ ಚಾನೆಲ್‌ಗಳನ್ನು ಲೈಕ್ ಮತ್ತು ಸಬ್‌ಸ್ಕ್ರೈಬ್ ಮಾಡುವ ಟಾಸ್ಕ್ ನೀಡಲಾಗಿದೆ. ಮೊದಲ ಟಾಸ್ಕ್ ಪೂರೈಸಿದಾಗ ಅವರ ಖಾತೆಗೆ 3 ಸಾವಿರ ರೂ. ಜಮೆ ಮಾಡಿದ ವಂಚಕರು, ನಂತರ 3 ಹಂತದ ಪ್ರೀಪೇಯ್ಡ್ ಟಾಸ್ಕ್‌ಗಳನ್ನು ಪೂರೈಸಿದರೆ ದೊಡ್ಡ ಮೊತ್ತದ ಕಮಿಷನ್ ದೊರೆಯುತ್ತದೆ ಎಂದು ತಿಳಿಸಿದ ಮೇರೆಗೆ ಅವರು, 3 ಹಂತಗಳಲ್ಲಿ ಒಟ್ಟು 4.05 ಲಕ್ಷ ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ.

**ಮಹೇಶ್ ಯಾದವ್‌ಗೆ 33.40 ಲಕ್ಷ ವಂಚನೆ:** ರಾಮಕೃಷ್ಣನಗರ 'ಇ' ಅಂಡ್ 'ಎಫ್' ಬ್ಲಾಕ್ ನಿವಾಸಿ ಎನ್.ಮಹೇಶ್ ಯಾದವ್(38) ಅವರಿಗೆ ವಾಟ್ಸಾಪ್ ಮೂಲಕ ವರ್ಕ್ ಫ್ರಮ್ ಹೋಂನಲ್ಲಿ ವೆಬ್‌ಸೈಟ್‌ಗೆ 5 ಸ್ಟಾರ್‌ಗಳನ್ನು ನೀಡುವ ಟಾಸ್ಕ್ ನೀಡಿದ್ದು, ಮೊದಲ ಬಾರಿಗೆ 150 ರೂ.ಗಳನ್ನು ಅವರ ಖಾತೆಗೆ ಜಮೆ ಮಾಡಲಾಗಿದೆ. ಅವರು ಎರಡು ಸಾವಿರ ರೂ. ಹೂಡಿಕೆ ಮಾಡಿ ಟಾಸ್ಕ್ ಪೂರೈಸಿದಾಗ ಕಮಿಷನ್ ಸೇರಿ ಅವರ ಖಾತೆಗೆ 2800 ರೂ. ಜಮೆ ಮಾಡಲಾಗಿದೆ. ನಂತರ ಹಂತ ಹಂತವಾಗಿ ಮಹೇಶ್ ಅವರು 33.40 ಲಕ್ಷ ರೂ. ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ.

**ವಿದ್ಯಾರ್ಥಿನಿ ಜ್ಯೋತಿ 2.50 ಲಕ್ಷ ವರ್ಗಾವಣೆ:** ಜೆ.ಪಿ.ನಗರ ನಿವಾಸಿಯಾಗಿರುವ ವಿದ್ಯಾರ್ಥಿನಿ ಜ್ಯೋತಿ ಜೆ. ಹೊಮ್ಮರಡಿ (21) ಅವರಿಗೆ ಟಾಸ್ಕ್ ಪೂರೈಸಿದರೆ ಕಮಿಷನ್ ದೊರೆಯುತ್ತದೆ ಎಂದು ತಿಳಿಸಿ, ಮೊದಲಿಗೆ 100 ರೂ. ಹೂಡಿಕೆ ಮಾಡಿ ಟಾಸ್ಕ್ ಪೂರೈಸಿದಾಗ ಕಮಿಷನ್ ಸೇರಿ 180 ರೂ. ಅವರ ಖಾತೆಗೆ ಜಮೆ ಮಾಡಲಾಗಿದೆ. 2ನೇ ಬಾರಿಗೆ 500 ರೂ. ಹೂಡಿಕೆ ಮಾಡಿ ಟಾಸ್ಕ್ ಪೂರೈಸಿದಾಗ ಅವರ ಖಾತೆಗೆ 1500 ರೂ. ಜಮೆ ಮಾಡಿದ್ದು, 9 ಹಂತಗಳ ಟಾಸ್ಕ್ ಪೂರೈಸಿದರೆ ಹೆಚ್ಚಿನ ಕಮಿಷನ್ ದೊರೆಯುತ್ತದೆ ಎಂದು ತಿಳಿಸಿದ ಮೇರೆಗೆ ಇವರು 2.50 ಲಕ್ಷ ರೂ. ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ.

**ಭಾನುಮತಿಗೆ 2.28 ಲಕ್ಷ ಮೋಸ:** ಲಕ್ಷ್ಮೀಪುರಂ ನಿವಾಸಿ ಹೆಚ್.ಎಲ್. ಭಾನುಮತಿ(43) ಎಂಬುವರು ಯುಟ್ಯೂಬ್ ಸಬ್‌ಸ್ಕ್ರೈಬ್ ಮಾಡಿದರೆ ಕಮಿಷನ್ ದೊರೆಯುತ್ತದೆ ಎಂಬುದನ್ನು ನಂಬಿ 2.28 ಲಕ್ಷ ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ.

**ಬೋಗಾದಿ ಮೇಘನಾ 4.03, ಮಂಜುನಾಥ್‌ಗೆ 1.64 ಲಕ್ಷ ವಂಚನೆ:** ಬೋಗಾದಿ ನಿವಾಸಿ ಎಂ. ಮೇಘನಾ(23) ಅವರು ಹೂಡಿಕೆ ಮಾಡಿ ಟಾಸ್ಕ್ ಪೂರೈಸಿದರೆ ದೊಡ್ಡ ಮೊತ್ತದ ಕಮಿಷನ್ ದೊರೆಯುತ್ತದೆ ಎಂಬುದನ್ನು ನಂಬಿ 4,03,209 ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ. ಅರವಿಂದನಗರ ನಿವಾಸಿಯಾಗಿರುವ ಇಂಜಿನಿಯರ್ ಮಂಜುನಾಥ್ ಉದ್ದಪ್ಪ ಜೋಗಣ್ಣನವರ್(30) ಎಂಬುವರು ಟೆಲಿಗ್ರಾಂ ಗ್ರೂಪ್‌ಗೆ ಸೇರಿ ಟಾಸ್ಕ್ ಪೂರೈಸಿದರೆ ಕಮಿಷನ್ ದೊರೆಯುತ್ತದೆ ಎಂಬುದನ್ನು ನಂಬಿ 1.64 ಲಕ್ಷ ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ. ಕುವೆಂಪುನಗರ ನಿವಾಸಿ ಬಿ. ಇಂದು(42) ಎಂಬುವರು ಅಮೇಜಾನ್ ಪ್ರಾಡಕ್ಟ್‌ನ ಸ್ಕ್ರೀನ್ ಶಾಟ್ ಕಳುಹಿಸಿದರೆ, ಕಮಿಷನ್ ದೊರೆಯುತ್ತದೆ ಎಂಬ ಆಮಿಷಕ್ಕೆ ಬಲಿಯಾಗಿ 2,03, 400 ರೂ. ವರ್ಗಾವಣೆ ಮಾಡಿ ವಂಚನೆ ಗೊಳಗಾಗಿದ್ದಾರೆ. ಈ ಎಲ್ಲಾ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

## ಕೋವಿಡ್ ಹಗರಣ: ವಿಜಯೇಂದ್ರ ಮಂಪರು ಪರೀಕ್ಷೆಗೆ ಬಿ.ಕೆ.ಹರಿಪ್ರಸಾದ್ ಆಗ್ರಹ





ನವದೆಹಲಿ, ಜ.13– ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋವಿಡ್ ಹೆಸರಿನಲ್ಲಿ 40 ಸಾವಿರ ಕೋಟಿ ಹಗರಣ ನಡೆದಿದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ ನೀಡಿದ್ದಾರೆ. ಇದರ ಬಗ್ಗೆ ತನಿಖೆ ಆಗಬೇಕು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಅವರನ್ನು ಮಂಪರು ಪರೀಕ್ಷೆ ನಡೆಸಬೇಕು ಎಂದು ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಆಗ್ರಹಿಸಿದರು.

ಶನಿವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ರಾಮಮಂದಿರ ಉದ್ಘಾಟನೆ ವೇಳೆ ಗೋಧ್ರಾ ಮಾದರಿ ಘಟನೆ ನಡೆಯಬಹುದು ಎಂದು ನಾನು ಈ ಹಿಂದೆ ಹೇಳಿಕೆ ನೀಡಿದ್ದೆ. ನನ್ನ ಮಂಪರು ಪರೀಕ್ಷೆ ನಡೆಸಬೇಕು ಎಂದು ವಿಜಯೇಂದ್ರ ಹೇಳಿದ್ದಾರೆ. ಮಂಪರು ಪರೀಕ್ಷೆಗೆ ಒಳಪಡಲು ನಾನು ಸಿದ್ಧನಿದ್ದೇನೆ. ಅದೇ ರೀತಿ, ವಿಜಯೇಂದ್ರ ಅವರನ್ನೂ ಪರೀಕ್ಷೆಗೆ ಒಳಪಡಿಸಲಿ. ಲೈವ್ ಮೂಲಕವೇ ಇಬ್ಬರ ಪರೀಕ್ಷೆ ನಡೆಸಲಿ ಎಂದರು.

ನನ್ನನ್ನು ಬಂಧಿಸಬೇಕು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದ್ದಾರೆ. ಅದಕ್ಕೆ ಮೊದಲು ಜಾಲಹಳ್ಳಿ ಠಾಣೆಯಲ್ಲಿ ಇರುವ ಪ್ರಕರಣಗಳು ಕುರಿತು ಅಶೋಕ ಯೋಚಿಸಲಿ. ಬಿಜೆಪಿಯವರ ಇತಿಹಾಸ ಏನೆಂಬುದು ನನಗೆ ಗೊತ್ತಿದೆ ಎಂದರು.

## ಅಂಬಿಗರ ಚೌಡಯ್ಯ ಜಯಂತಿ ಪ್ರತ್ಯೇಕವಾಗಿ ಆಚರಿಸಲು ಆಗ್ರಹ

ಮೈಸೂರು, ಜ.13(ಎಂಕೆ)– ಅಂಬಿಗರ ಚೌಡಯ್ಯ ಜಯಂತಿಯನ್ನು ಪ್ರತ್ಯೇಕವಾಗಿ ಆಚರಿಸಬೇಕೆಂದು ಶ್ರೀ ಗಂಗಾಮತಸ್ಥರ ಬೆಸ್ತರ ಸಂಘ ಒತ್ತಾಯಿಸಿದೆ. ಜ.21 ಬೆಳಗ್ಗೆ 11 ಗಂಟೆಗೆ ಜಿಲ್ಲಾಡಳಿತ ವತಿಯಿಂದ ಅಂಬಿಗರ ಚೌಡಯ್ಯ ಮತ್ತು ವೇಮನ ಜಯಂತಿಯನ್ನು ಒಂದೇ ವೇದಿಕೆಯಲ್ಲಿ ಆಚರಿಸಲು ಮುಂದಾಗಿರುವುದು ಸರಿಯಲ್ಲ. ಆಯಾಯ ಸಮುದಾಯದ ಮೂಲ ಪುರುಷರ ಜಯಂತಿಯನ್ನು ಸ್ವತಂತ್ರವಾಗಿ ಆಚರಿಸಲು ಮತ್ತು ಸಾಂಸ್ಕೃತಿಕವಾಗಿ ಸಮುದಾಯದ ಹಿರಿಮೆಯನ್ನು ಸಂಭ್ರಮಿಸಲು ಅವಕಾಶ ಮಾಡಿಕೊಡಬೇಕು. ಜಿಲ್ಲಾಡಳಿತ ಕೂಡಲೇ ಪ್ರತ್ಯೇಕವಾಗಿ ಅಂಬಿಗರ ಚೌಡಯ್ಯ ಅವರ ಜಯಂತಿಯನ್ನು ಆಚರಿಸಬೇಕು. ಇದಕ್ಕೆ ಶ್ರೀ ಗಂಗಾಮತಸ್ಥರ ಬೆಸ್ತರ ಸಂಘವೂ ಬೆಂಬಲ ನೀಡಲಿದೆ ಎಂದು ಸಂಘದ ಅಧ್ಯಕ್ಷ ದಾಸಿ, ಸಮುದಾಯದ ಮುಖಂಡರಾದ ನಾಗೇಂದ್ರ, ಗೋವಣ್ಣ ಮತ್ತಿತರರು ಪ್ರತಿಕಾ ಪ್ರಕಟಣೆ ಮೂಲಕ ಒತ್ತಾಯಿಸಿದ್ದಾರೆ.



ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಪುರಭವನದ ಮುಂಭಾಗ ನಡೆಸುತ್ತಿರುವ ಧರಣಿಯ 68ನೇ ದಿನವಾದ ಶನಿವಾರ ಮೌನ ಪ್ರತಿಭಟನೆ ನಡೆಸಿದರು. ಉಪಾಧ್ಯಕ್ಷ ಎಂ.ಜೆ.ಸುರೇಶಗೌಡ, ಕಾರ್ಯದರ್ಶಿ ಮೆಲ್ಲಹಳ್ಳಿ ಮಹದೇವಸ್ವಾಮಿ, ಪ್ರಧಾನ ಸಂಚಾಲಕ ಮೂಗೂರು ನಂಜುಂಡಸ್ವಾಮಿ, ಬಿಜೆಪಿ ಮುಖಂಡ ರಂಗಪ್ಪ, ರಾಜ್ಯ ರೈತ ಸಂಘದ ಸಿಂಧುವಳ್ಳಿ ಶಿವಕುಮಾರ್, ಗಿರೀಶ್ ಗೌಡ, ರವಿಶಂಕರ್, ಸಾಕಣ್ಣ, ನಗುವನಹಳ್ಳಿ ಬಾಲಕೃಷ್ಣ, ಮಹೇಶ್, ಕರ್ನಾಟಕ ಸೇನಾಪಡೆಯ ಜಿಲ್ಲಾಧ್ಯಕ್ಷ ತೇಜಸ್ ಲೋಕೇಶ್‌ಗೌಡ, ಕೃಷ್ಣಪ್ಪ, ಪ್ರಭಾಕರ್, ಹನುಮಂತಯ್ಯ, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ಉಪಾಧ್ಯಕ್ಷ ಶಿವಲಿಂಗಯ್ಯ, ಕನ್ನಡ ಹೋರಾಟಗಾರ ಸಿದ್ದೇಗೌಡ, ಡಾ.ರಾಜಕುಮಾರ್ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಮಂಜುಳಾ, ಶ್ರೀನಿವಾಸ್, ನಂಜುಂಡ, ಅಶೋಕ್, ಭಾಗ್ಯಮ್ಮ, ರವೀಶ್, ಪ್ರಮೋದ್, ಪೈಲ್ವಾನ್ ಬಾಲಾಜಿ, ಪೈಲ್ವಾನ್ ಬಲರಾಂ, ಜೆಡಿಎಸ್ ಮುಖಂಡ ನಾಗರಾಜ್ ಇನ್ನಿತರರಿದ್ದರು.

# ರಾಜ್ಯದ ಪಾಲಿನ ತೆರಿಗೆ ಹಣ ನೀಡದೇ ಕೇಂದ್ರದಿಂದ ಮಹಾ ದ್ರೋಹ

### ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಆರೋಪ



ಎಂ.ಲಕ್ಷ್ಮಣ್

ಮೈಸೂರು, ಜ.13(ಎಂಟಿವೈ)– ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಬೇಕಾದ ತೆರಿಗೆ ಪಾಲಿನ ಹಣ ಬಿಡುಗಡೆ ಮಾಡದೆ ಮಹಾ ದ್ರೋಹ ಎಸಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಿಂದ 4.81 ಲಕ್ಷ ಕೋಟಿ ರೂ. ತೆರಿಗೆ ಕೇಂದ್ರ ಸರ್ಕಾರಕ್ಕೆ ಸಂದಾಯವಾಗುತ್ತಿದೆ. ನಿಯಮಾನುಸಾರ ರಾಜ್ಯದಿಂದ ಸಂಗ್ರಹವಾದ ತೆರಿಗೆ ಮೊತ್ತದ ಪಾಲುದಾರಿಕೆಯನ್ನು ಕರ್ನಾಟಕಕ್ಕೆ ನೀಡದೆ ಮಲತಾಯಿ ಧೋರಣೆ ಅನುಸರಿಸಲಾಗುತ್ತಿದೆ. ಆದಾಯ ಮತ್ತು ಕಾರ್ಪೋರೇಟ್ ತೆರಿಗೆ 2.23 ಲಕ್ಷ ಕೋಟಿ ರೂ., ಜಿಎಸ್‌ಟಿ 1.40 ಲಕ್ಷ ಕೋಟಿ ರೂ., ಪೆಟ್ರೋಲ್, ಡೀಸೆಲ್ ಇಂಧನದ ಮೇಲೆ ವಿಧಿಸುವ ಸೆಸ್ ಚಾರ್ಜ್‌ಗಳಿಂದ 26ರಿಂದ 30 ಸಾವಿರ ಕೋಟಿ ರೂ. ಸಂಗ್ರಹವಾಗುತ್ತದೆ.

ರಾಜ್ಯ ವಲಯದಿಂದ ಸಂಗ್ರಹವಾಗುವ ಕಸ್ಟಮ್ ತೆರಿಗೆಗಳಿಂದ 30 ಸಾವಿರ ಕೋಟಿ. ಜಿಎಸ್‌ಟಿ ಪ್ರತಿ ತಿಂಗಳು 15 ಸಾವಿರ ಕೋಟಿ ಸಂಗ್ರಹವಾಗುತ್ತಿದೆ. ಹೆದ್ದಾರಿ ಟೋಲ್‌ಗಳಿಂದ 3 ಸಾವಿರ ಕೋಟಿ ಸಂಗ್ರಹವಾಗುತ್ತದೆ. ಇವೆಲ್ಲವನ್ನೂ ಸೇರಿಸಿ ಒಟ್ಟು 4.81 ಲಕ್ಷ ಕೋಟಿ ತೆರಿಗೆಯನ್ನು ಕೇಂದ್ರ ಸರ್ಕಾರ ಸಂಗ್ರಹ ಮಾಡುತ್ತದೆ. ಮಹಾರಾಷ್ಟ್ರದ ಬಳಿಕ ಅತೀ ಹೆಚ್ಚು ಟ್ಯಾಕ್ಸ್ ಕಟ್ಟುವ ಎರಡನೇ ರಾಜ್ಯ ಕರ್ನಾಟಕ. ಅದರಲ್ಲಿ ನಮಗೆ ಶೇ.42ರಷ್ಟು ವಾಪಸ್ ಕೊಡಬೇಕು. ಆದರೆ ಕೇವಲ ಶೇ.10ರಷ್ಟನ್ನೂ ಕೂಡ ನಮಗೆ ಕೊಡುತ್ತಿಲ್ಲ. ಈ ಮೂಲಕ ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರ ಕೊಡದೆ ಮಲತಾಯಿ ಧೋರಣೆ ತೋರುತ್ತಿದೆ ಎಂದು ಲಕ್ಷ್ಮಣ್ ವಿವರಿಸಿದರು.

ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ 10 ವರ್ಷಗಳಲ್ಲಿ 123 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ದೇಶದ ಒಟ್ಟು ಸಾಲ 258 ಲಕ್ಷ ಕೋಟಿ ಇದೆ. ದೇಶದ ಪ್ರತಿಯೊಬ್ಬ ಪ್ರಜೆ ಮೇಲೂ 4 ಲಕ್ಷ ರೂ. ಸಾಲ ಇದೆ. ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಮೇಲೆ ಕಾರ್ಪೋರೇಟ್ ಕಂಪನಿಗಳ 20 ಲಕ್ಷ ಕೋಟಿ ಸಾಲ ಮನ್ನಾ ಮಾಡಿದ್ದಾರೆ. ರೈತರ ಸಾಲ ಮಾತ್ರ ಮನ್ನಾ ಮಾಡಿಲ್ಲ ಎಂದು ತಿಳಿಸಿದರು.

**ಬರ ಪರಿಹಾರದಲ್ಲೂ ಅನ್ಯಾಯ:** ಕೇಂದ್ರ ಸರ್ಕಾರ ಬರ ಪರಿಹಾರದ ಹಣವನ್ನು ನೀಡಿಲ್ಲ. ರಾಜ್ಯ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಸಂಚನ್ನು ಬಿಜೆಪಿ ನಾಯಕರು ಮಾಡುತ್ತಿದ್ದಾರೆ. ರಾಜ್ಯದಲ್ಲಿ ಬರದಿಂದ 35,000 ಕೋಟಿ ರೂ. ನಷ್ಟ ಆಗಿದೆ ಎಂದು ಕೇಂದ್ರ ಸಮಿತಿಯೇ ವರದಿ ನೀಡಿದೆ. ಆದರೆ ಇದುವರೆಗೂ ಕೇಂದ್ರದಿಂದ ಬಿಡಿಗಾಸು ಅನುದಾನ ಬಂದಿಲ್ಲ. ಬಿಜೆಪಿ ನಾಯಕರು ಈ ವಿಚಾರ ಪ್ರಶ್ನೆ ಮಾಡೋದು ಬಿಟ್ಟು ರಾಜ್ಯ ಸರ್ಕಾರದ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದ್ದಾರೆ. ದೇಶದಲ್ಲೇ ಅಧಿಕಾರಕ್ಕೆ ಬಂದ ಏಳು ತಿಂಗಳಲ್ಲಿ ಕೊಟ್ಟ ಎಲ್ಲಾ ಭರವಸೆಗಳನ್ನು ನಮ್ಮ ಕಾಂಗ್ರೆಸ್ ಸರ್ಕಾರ ಈಡೇರಿಸಿದೆ ಎಂದು ಎದೆಯುಬ್ಬಿಸಿ ಹೇಳುತ್ತೇವೆ ಎಂದರು.

**ಪ್ರತಿಪಕ್ಷಗಳ ವಿರುದ್ಧ ಜಾಗೃತಿ:** ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಮಾತನಾಡಿ, ರಾಜ್ಯಸರ್ಕಾರದ ಸಾಧನೆಗಳನ್ನು ಮನೆ ಮನೆಗೆ ತಲುಪಿಸುವ ಜತೆಗೆ ಕೇಂದ್ರ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಜನರಿಗೆ ಮನವರಿಕೆ ಮಾಡಿಕೊಡಲು ಉದ್ದೇಶಿಸಲಾಗಿದೆ. ಬಿಜೆಪಿ ಹೊಸ ಹೊಸ ವಿಚಾರಗಳನ್ನು ಮುಂದಿಟ್ಟುಕೊಂಡು ಜನರ ಭಾವನೆ ಕೆಡಿಸುವ ಕೆಲಸ ಮಾಡುತ್ತಿದೆ. ಕಾಂಗ್ರೆಸ್ ಸರ್ಕಾರ ಮಾಡಿರುವ ಸಾಧನೆಗಳನ್ನು ಹೇಳಿದರೆ ಮತದಾರರು ಬೆಂಬಲಿಸಲಿದ್ದಾರೆ ಎಂದು ಅಭಿಪ್ರಾಯಪಟ್ಟರು. ನಗರ ಅಧ್ಯಕ್ಷ ಆರ್.ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ವಕ್ತಾರ ಕೆ.ಮಹೇಶ್, ಸೇವಾದಳದ ಸಂಚಾಲಕ ಗಿರೀಶ್ ನಾಯಕ ಮತ್ತಿತರರು ಇದ್ದರು.

# ಶೋಷಿತ ಸಮುದಾಯಗಳ ಹತ್ತಿಕ್ಕುವ ಸಂಚು ನಡೆಯುತ್ತಿದೆ

### ಶೋಷಿತ ಸಮುದಾಯಗಳ ಮುಖಂಡರ ಸಭೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಆರೋಪ



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಸಮುದಾಯ ಭವನದಲ್ಲಿ ಶನಿವಾರ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಶೋಷಿತ ಸಮುದಾಯಗಳ ಮುಖಂಡರ ಸಭೆಯಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿದರು.

ಮೈಸೂರು,ಜ.13(ಎಂಟಿವೈ)–ಜಾತಿ, ಧರ್ಮಗಳ ವಿರುದ್ಧ ಎತ್ತಿಕಟ್ಟುವ ಮೂಲಕ ಶೋಷಿತ ಸಮುದಾಯಗಳನ್ನು ಹತ್ತಿಕ್ಕುವ ಸಂಚು ನಡೆಯುತ್ತಿದ್ದು, ಈ ಸಂಚಿನ ವಿರುದ್ಧ ಶೋಷಿತ ಸಮುದಾಯ ಎಚ್ಚರಿಕೆಯಿಂದಿರಬೇಕು ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸಲಹೆ ನೀಡಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಸಮುದಾಯ ಭವನದಲ್ಲಿ ಶನಿವಾರ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಶೋಷಿತ ಸಮುದಾಯಗಳ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಭಾರತ ಸರ್ವಜನಾಂಗದ ಶಾಂತಿಯ ತೋಟವಾಗಿದೆ. ದೇಶದಲ್ಲಿ ವಿವಿಧ ಧರ್ಮ, ಜಾತಿ, ಸಮುದಾಯಗಳ ಜನರು ಸೌಹಾರ್ದತೆಯಿಂದ ಸಹಬಾಳ್ವೆ ನಡೆಸುತ್ತಿದ್ದಾರೆ. ಆದರೆ, ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದೇಶದಲ್ಲಿ ಶಾಂತಿ ಕದಡುವ ಸಂಚು ನಿರಂತರವಾಗಿ ನಡೆಸಲಾಗುತ್ತಿದೆ. ರಾಜಕೀಯ ಉದ್ದೇಶಕ್ಕಾಗಿ ಜಾತಿ–ಜಾತಿ, ಧರ್ಮ–ಧರ್ಮಗಳ ನಡುವೆ ಎತ್ತಿಕಟ್ಟುವ ಕೆಲಸ ಮಾಡಲಾಗುತ್ತಿದೆ. ಹಿಂದುತ್ವ ಪ್ರತಿಪಾದಿಸುವ ಮೂಲಕ ತಮ್ಮ ಬೇಳೆ ಬೇಯಿಸಿಕೊಳ್ಳಲು ಬಿಜೆಪಿ ನಾಯಕರು ಮುಂದಾಗಿದ್ದಾರೆ. ಕೇಂದ್ರ ಸರ್ಕಾರ ನಿಲುವಿನಿಂದಾಗಿ ಶೋಷಿತ ಸಮುದಾಯ 100 ವರ್ಷ ಹಿಂದಕ್ಕೆ ತಳ್ಳಲ್ಪಡುತ್ತಿದೆ ಎಂದು ಆರೋಪಿಸಿದರು.

ಇತ್ತೀಚಿನ ವರ್ಷಗಳಲ್ಲಿ ಶೋಷಿತ ಸಮುದಾಯ ಸಂಘಟನೆಯಾಗಿ ಒಗ್ಗಟ್ಟಾಗುತ್ತಿತ್ತು. ಆದರೆ, ಶೂದ್ರರು ಎಂಬ ಕಾರಣದಿಂದ ಶೋಷಿತ ಸಮುದಾಯಗಳು ಒಂದುಗೂಡುವುದಕ್ಕೆ ಅಡ್ಡಿಯುಂಟು ಮಾಡಲಾಗುತ್ತಿದೆ. ಶೋಷಿತ ಸಮುದಾಯಗಳು ಒಗ್ಗಟ್ಟಾದರೆ ದೊಡ್ಡ ಶಕ್ತಿಯೇ ರೂಪುಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಶೋಷಿತ ಸಮುದಾಯವನ್ನು ಒಂದುಗೂಡದಂತೆ ಸಂಚು ನಡೆಸಲಾಗುತ್ತಿದೆ. ಇದನ್ನು ಜನ ಅರ್ಥ ಮಾಡಿಕೊಳ್ಳಬೇಕು. ಸಂಚಿಗೆ ಬಲಿಯಾಗಬಾರದು. 'ನಾವೆಲ್ಲಾ ಹಿಂದು–ನಾವೆಲ್ಲಾ ಒಂದು' ಎಂದು ಬಾಯಿ ಮಾತಿಗಷ್ಟೇ ಹೇಳುವ ಬಿಜೆಪಿಗರು ಹಾಗೂ ಸಂಘ ಪರಿವಾರದ ಮುಖಂಡರ ನಯವಾದ ಮಾತಿಗೆ ಮನ್ನಣೆ ನೀಡಬಾರದು ಎಂದು ಸಲಹೆ ನೀಡಿದರು.

ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಪ್ರಸ್ತಾವಿಕವಾಗಿ ಮಾತನಾಡಿ, ದಲಿತ, ಹಿಂದುಳಿದ, ಆದಿವಾಸಿ, ಅಲೆಮಾರಿ, ಅಲ್ಪಸಂಖ್ಯಾತ ಮತ್ತು ಜನಪದ ಸಂಘಟನೆಗಳ ಒಕ್ಕೂಟವಾದ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಜ.28ರಂದು ಬೆಳಗ್ಗೆ 11 ಗಂಟೆಗೆ ಚಿತ್ರದುರ್ಗದ ಶ್ರೀ ಬಸವ ಮೂರ್ತಿ ಮಾದಾರ ಚನ್ನಯ್ಯ ಪೀಠದ ಪಕ್ಕದ ಮೈದಾನದಲ್ಲಿ ಆಯೋಜಿಸಿರುವ ಶೋಷಿತರ ಜಾಗೃತಿ ಸಮಾವೇಶಕ್ಕೆ ಮೈಸೂರು ಜಿಲ್ಲೆಯಿಂದ ಎಲ್ಲಾ ಶೋಷಿತ ಸಮುದಾಯಗಳ ಜನ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾವೇಶವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು

ಸಭೆಯ ಅಧ್ಯಕ್ಷತೆಯನ್ನು ರಾಮಚಂದ್ರಪ್ಪ ವಹಿಸಿದ್ದರು. ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಮಹೇಶ್ ಚಂದ್ರಗುರು, ಮಾಜಿ ಮೇಯರ್‌ಗಳಾದ ನಾರಾಯಣ್, ಪುರುಷೋತ್ತಮ್, ಪುಷ್ಪಲತಾ ಚಿಕ್ಕಣ್ಣ, ಮುಖಂಡರುಗಳಾದ ಮಾವಳ್ಳಿ ಶಂಕರ್, ಆರೀಫ್, ಮೂರ್ತಿ, ರಾಮಸ್ವಾಮಿ, ಶಿವರಾಮ, ಶಿವಣ್ಣ, ರವಿ ರಾಮಚಂದ್ರಪ್ಪ, ರಾಮು, ಕೃಷ್ಣಮೂರ್ತಿ, ರಾಮಕೃಷ್ಣ ಹಾಗೂ ಮೈಸೂರು ಜಿಲ್ಲೆಯ ಎಲ್ಲಾ ತಾಲೂಕಿನ ಶೋಷಿತ ಸಮುದಾಯಗಳು ಹಾಲಿ ಮತ್ತು ಮಾಜಿ ಚುನಾಯಿತ ಪ್ರತಿನಿಧಿಗಳು, ಮುಂಚೂಣಿ ಘಟಕದ ಅಧ್ಯಕ್ಷರು, ಮುಖಂಡರು ಹಾಗೂ ಇನ್ನಿತರರು ಭಾಗವಹಿಸಿದ್ದರು.

ಮೈಸೂರು ಮಿತ್ರ ಭಾನುವಾರ 14 ಜನವರಿ 2024

# ಜ.21, ಮಂಡ್ಯದಲ್ಲಿ ಕವಿಕಾವ್ಯ ಸಮ್ಮೇಳನ



ಸುದ್ದಿಗೋಷ್ಠಿಯಲ್ಲಿ ಎಸ್.ಕೃಷ್ಣ ಸ್ವರ್ಣಸಂದ್ರ ಶನಿವಾರ ಮಾತನಾಡಿದರು.

ಮಂಡ್ಯ, ಜ.13– ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂಸ್ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ 32ನೇ ರಾಜ್ಯ ಮಟ್ಟದ ಕವಿಕಾವ್ಯ ಮೇಳ, ವಿವಿಧ ಪ್ರಶಸ್ತಿ ಪ್ರದಾನ ಹಾಗೂ ಓ ಗುಣವಂತ ಕಿರುಚಿತ್ರ ಬಿಡುಗಡೆ, ನಾಯಕ ವಿಷ್ಣು ತೇಜ ಅವರಿಗೆ ರೆಬಲ್ ರೇಜಿಂಗ್ ಸ್ಟಾರ್ ಬಿರುದು ಪ್ರದಾನ ಮತ್ತು ಸಾಹಿತಿ ಹಾಗೂ ಪತ್ರಕರ್ತ ಡಾ.ಶಂಕರ ಹಲ್ಲೇಗೆರೆ ಅವರ ಪರಿಸರ ಪಲ್ಲವಿ ಕವನ ಸಂಕಲನ ಬಿಡುಗಡೆ ಸಮಾರಂಭ ಜ.21ರಂದು ಬೆಳಗ್ಗೆ 10.30ಕ್ಕೆ ನಗರದ ರೈತ ಸಭಾಂಗಣದಲ್ಲಿ ನಡೆಯಲಿದೆ ಎಂದು ಡಾ. ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣಸ್ವರ್ಣಸಂದ್ರ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 32ನೇ ರಾಜ್ಯ ಮಟ್ಟದ ಕವಿಕಾವ್ಯ ಮೇಳ, ವಿವಿಧ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜೇಗೌಡ ಉದ್ಘಾಟಿಸಲಿದ್ದು, ಸನಾತನ ಧರ್ಮ ಜಾಗರಣ ಮಿಷನ್ ಮುಖ್ಯಸ್ಥ ಡಾ.ಆರ್.ಎಸ್.ರಾಜು ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಸಾಹಿತಿ ಡಾ.ಹೆಚ್.ಎಸ್.ಮುದ್ದೇಗೌಡ ಸಮ್ಮೇಳನಾಧ್ಯಕ್ಷರಿಗೆ ಗೌರವ ಸಲ್ಲಿಸಲಿದ್ದು, ಶಾಸಕ ಗಣಿಗ ರವಿಕುಮಾರ್‌ಗೌಡ ಕರ್ನಾಟಕ ಸೇವಾರತ್ನ ಪ್ರಶಸ್ತಿ ಪ್ರದಾನ ಮಾಡುವರು ಎಂದರು.

ಹಿರಿಯ ಪತ್ರಕರ್ತ, ಸಾಹಿತಿ ಡಾ.ಹಲ್ಲೇಗೆರೆ ಶಂಕರ್ ಕವಿಕಾವ್ಯ ಸಮ್ಮೇಳನಾಧ್ಯಕ್ಷತೆ ವಹಿಸಲಿದ್ದು, ಕನ್ನಡ ರತ್ನ ಪ್ರಶಸ್ತಿಯನ್ನು ರೈತರ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಯು.ಸಿ.ಶೇಖರ್ ಪ್ರದಾನ ಮಾಡಲಿದ್ದಾರೆ. ಡಾ.ಪುನೀತ್ ರಾಜಕುಮಾರ್ ಪುರಸ್ಕಾರವನ್ನು ವಕೀಲ ಹಾಗೂ ನಿರ್ಮಾಪಕ ಎಸ್.ಕೆ ಮೋಹನ್ ಕುಮಾರ್ ನೆರವೇರಿಸಲಿದ್ದು, ಕಾಂಗ್ರೆಸ್ ಮುಖಂಡ ವಿಜಯರಾಮೇಗೌಡ ನಟ ವಿಷ್ಣುತೇಜ ಅವರಿಗೆ ಬಿರುದು ಪ್ರದಾನ ಮಾಡಲಿದ್ದಾರೆ. ಸಮಾಜಸೇವಕ ಆರ್‌ಟಿಓ ಮಲ್ಲಿಕಾರ್ಜುನ್ ಅಭಿನಂದನೆ ಸಲ್ಲಿಸಲಿದ್ದು, ಗೋಸಂರಕ್ಷಕ ಡಾ.ಮಹೇಂದ್ರ ಮನೋತ್ ಓ ಗುಣವಂತ ಕಿರುಚಿತ್ರ ಬಿಡುಗಡೆ ಮಾಡಲಿದ್ದಾರೆ ಎಂದರು.

ಸಮಾರಂಭದಲ್ಲಿ ಕಿರು ಚಿತ್ರನಟ ವಿಷ್ಣು ತೇಜ, ನಟಿ ಅನಿತಾ ರಾಣಿ ಭಾಗವಹಿಸಲಿದ್ದು, ಸುಗ್ಗಿ ಸಂಭ್ರಮ ಕರ್ನಾಟಕ ಸೇವಾರತ್ನ ಪ್ರಶಸ್ತಿಯನ್ನು ಕೇಂದ್ರೀಯ ಕಿಸಾನ್ ಕಮಿಟಿ ನಿರ್ದೇಶಕ ಡಾ.ಆರ್.ಎಸ್.ರಾಜು, ಕಾಂಗ್ರೆಸ್ ಮುಖಂಡ ವಿಜಯರಾಮೇಗೌಡ, ಅಧ್ಯಾಪಕ ಡಾ.ಬಿ.ಕೆ.ರುದ್ರೇಶ್, ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ರೈತರ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಯು.ಸಿ.ಶೇಖರ್ ಪಡೆಯಲಿದ್ದಾರೆ. ಅದೇ ರೀತಿ ಡಾ. ಪುನೀತ್ ರಾಜಕುಮಾರ್ ಪುರಸ್ಕಾರ ಪ್ರಶಸ್ತಿ ಸಮಾಜ ಸೇವಕರಾದ ಡಾ.ಮಹೇಂದ್ರ ಮನೋತ್, ಆರ್‌ಟಿಓ ಮಲ್ಲಿಕಾರ್ಜುನ್, ಶಿಕ್ಷಕಿ ಇಂದಿರಾ ಲೋಕೇಶ್, ರಂಗಭೂಮಿ ಕಲಾವಿದೆ ರಾಣಿ ಈಶ್ವರ್, ನಟ ಡಾ. ಕಿರಣ್‌ಕುಮಾರ್, ಶಿಕ್ಷಕರಾದ ಡಾ.ಸೌಮ್ಯ, ಡಾ.ಯೋಗೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ತಿಮ್ಮೇಗೌಡ, ನಟಿ ಪ್ರೇರಣಾ, ಚಿತ್ರ ನಿರ್ದೇಶಕ ಡಾ.ಹೆಚ್.ವಿ.ಪುಟ್ಟಸ್ವಾಮಿ ಪಡೆಯಲಿದ್ದಾರೆ ಎಂದರು.

ಸುಗ್ಗಿ ಸಂಭ್ರಮ ಕನ್ನಡರತ್ನ ಪ್ರಶಸ್ತಿಗೆ ಡಾ.ಹಾಸನ ಶೇಕ್ ಕುಮಾರ್ (ಸಮಾಜಸೇವೆ), ಕಟ್ಟಾ ಪೆರುಮಾಳ್ (ಸಾಹಿತ್ಯ), ಡಾ.ಎಸ್.ಪಾಪಣ್ಣ ಲೋಕಸರ (ಸಮಾಜಸೇವೆ), ಕುಮಾರಸ್ವಾಮಿ ಹಿರೇಮಠ (ಶಿಕ್ಷಣ), ಜಿ.ಸಿ. ಸಿದ್ದರಾಜು (ಶಿಕ್ಷಣ), ವಿಶಾಲಾಕ್ಷಿ ಕಲ್ಲುಣಿ (ಸಾಹಿತ್ಯ–ಶಿಕ್ಷಣ), ಸಾತನೂರು ವೆಂಕಟೇಶ್ (ರಂಗಭೂಮಿ), ಹೆಚ್.ಆರ್.ಹೇಮಾರೆಡ್ಡಿ (ಸಮಾಜಸೇವೆ), ಧರಣೇಂದ್ರಯ್ಯ (ಸಾಹಿತ್ಯ–ಸಂಘಟನೆ), ಎಂ.ಚಂದ್ರಪ್ಪ (ಸಾಹಿತ್ಯ–ರಂಗಭೂಮಿ) ಭಾಜನರಾಗಿದ್ದು, ಅದೇ ರೀತಿಯ ಓ ಗುಣವಂತ' ಚಿತ್ರ ತಂಡದ ವಿಷ್ಣು ತೇಜ, ಡಾ.ಚಂದ್ರಚೂಡೇಶ್ವರ ರಾಜು, ನಿಖಿತ್‌ಗೌಡ, ರವಿ ಸೂರ್ಯ, ಹನುಮಂತು, ಹಾವೇರಿ ನೇತ್ರಾವತಿ ಅವರನ್ನು ಅಭಿನಂದಿಸಲಾಗುವುದು ಎಂದರು.

32ನೇ ಸುಗ್ಗಿ ಸಂಭ್ರಮ ರಾಜ್ಯ ಮಟ್ಟದ ಕವಿಕಾವ್ಯ ಮೇಳ ನಡೆಯಲಿದ್ದು, ಮೇಳಕ್ಕೆ ಕವಿಯತ್ರಿ ಡಾ.ಪದ್ಮ ಶ್ರೀನಿವಾಸ್ ಚಾಲನೆ ನೀಡಲಿದ್ದು, ಕವಿ ಹಲ್ಲೆಗೆರೆ ಶಂಕರ್, ಶರಸಾಹಿತ್ಯ ಪರಿಷತ್ ಅಧ್ಯಕ್ಷ ಬನ್ನಂಗಾಡಿ ಸಿದ್ದಲಿಂಗಯ್ಯ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಮಂಗಲ ಶಿವಣ್ಣ, ಕರ್ನಾಟಕ ಯುವ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಮಂಜುಳಾ ನಾರಾಯಣ್ ಭಾಗವಹಿಸಲಿದ್ದು, ಸುಗ್ಗಿ ಸಂಭ್ರಮ ರಾಜ್ಯ ಮಟ್ಟದ ಕಾವ್ಯಶ್ರೀ ಪ್ರಶಸ್ತಿಗೆ ಡಿ.ಲೋಕೇಶ್ ಕಳಲೆ, ಪೂರ್ಣಚಂದ್ರ, ಹಿಮಂತರಾಜು, ನಾಗರತ್ನ, ವಿಜಯಲಕ್ಷ್ಮಿ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಓ ಗುಣವಂತ ಚಿತ್ರ ತಂಡದ ಡಾ.ಚಂದ್ರಚೂಡೇಶ್ವರ ರಾಜು, ವಿಷ್ಣುತೇಜ, ಹಾವೇರಿ ನೇತ್ರಾವತಿ ಇತರರಿದ್ದರು.

# ಧರ್ಮಜಾಗೃತಿ ಯಾತ್ರೆ ಪ್ರಚಾರ ರಥಕ್ಕೆ ಚಾಲನೆ



ಧರ್ಮಜಾಗೃತಿ ಯಾತ್ರೆ ಪ್ರಚಾರ ರಥಕ್ಕೆ ಮಾಜಿ ಸಚಿವ ಪುಟ್ಟರಾಜು ಚಾಲನೆ ನೀಡಿದರು.

**ಚಿನಕುರಳಿ:** ಶ್ರೀಮರಿದೇವರು ಸ್ವಾಮೀಜಿಗಳ 130ನೇ ಜಯಂತಿ ಹಾಗೂ ಡಾ.ಶ್ರೀತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿಗಳ 25ನೇ ವರ್ಷದ ಪಟ್ಟಾಧಿಕಾರ ರಜತ ಮಹೋತ್ಸವ ಸಮಾರಂಭದ 'ಧರ್ಮಜಾಗೃತಿ ಯಾತ್ರೆ ಪ್ರಚಾರ ರಥ'ಕ್ಕೆ ತಾಲೂಕಿನ ಬೇಬಿ ಗ್ರಾಮದ ದುರ್ದಂಡೇಶ್ವರ ಮಠದ ಆವರಣದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹಾಗೂ ಡಾ.ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಚಾಲನೆ ನೀಡಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದಲ್ಲಿ ಜ.26,27 ಮತ್ತು 28 ರಂದು ಶ್ರೀಮರಿದೇವರು ಸ್ವಾಮೀಜಿಗಳ 130ನೇ ಜಯಂತಿ ಹಾಗೂ ಡಾ.ಶ್ರೀತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿಗಳ 25ನೇ ವರ್ಷದ ಪಟ್ಟಾಧಿಕಾರ ರಜತ ಮಹೋತ್ಸವ ಸಮಾರಂಭ ಅದ್ದೂರಿಯಾಗಿ ನಡೆಯಲಿದ್ದು, ಆ ಹಿನ್ನೆಲೆಯಲ್ಲಿ ಧರ್ಮ ಜಾಗೃತಿ ಯಾತ್ರೆ ಪ್ರಚಾರ ರಥಕ್ಕೆ ಚಾಲನೆ ನೀಡಲಾಗಿದೆ ಎಂದರು.

ಜ.27ರಂದು ಮಠದ ಪೀಠಾಧ್ಯಕ್ಷ ಡಾ.ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿಗಳ ಪಾದ ಪೂಜೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡು ಹಲವು ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ಈ ವೇಳೆ ವಿವಿಧ ಮಠಗಳ ಮಠಾಧೀಶರು ಪಾಲ್ಗೊಳ್ಳಲಿದ್ದಾರೆ. ಜ.28ರಂದು ಬೆಳಗ್ಗೆ ಮಠದ ಆವರಣದಲ್ಲಿ ಆಯುರ್ವೇದ ಆಸ್ಪತ್ರೆ ಉದ್ಘಾಟನೆಯಾಗಲಿದೆ. ಸಂಜೆ ಸಮಾರೋಪ ಸಮಾರಂಭದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಎಸ್.ಎಂ.ಕೃಷ್ಣ, ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿಗಳು, ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ದೇಶಿಕೇಂದ್ರ ಸ್ವಾಮೀಜಿ ಭಾಗವಹಿಸಲಿದ್ದಾರೆ. ಮೂರು ದಿನವೂ ರಾಜ್ಯಮಟ್ಟದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.

ಈ ವೇಳೆ ವಿಜಯಪುರದ ಸಿದ್ದಲಿಂಗೇಶ್ವರ ಮಠದ ಸಿದ್ದಲಿಂಗಸ್ವಾಮಿ ಪ್ರವಚನ ನೀಡಿದರು. ಗ್ರಾಪಂ ಅಧ್ಯಕ್ಷೆ ಪುಟ್ಟಲಿಂಗಮ್ಮ, ಮಾಜಿ ಅಧ್ಯಕ್ಷ ನಾಗಣ್ಣ, ಸಾಹಿತಿ ವಾಣಿ ಚಂದ್ರಯ್ಯ ನಾಯ್ಡು, ಮಠದ ಕಾರ್ಯದರ್ಶಿ ಟಿ.ಪಿ.ಶಿವಕುಮಾರ್ ಸೇರಿದಂತೆ ಮಠದ ಭಕ್ತರು ಹಾಜರಿದ್ದರು.



ಮಳವಳ್ಳಿ ತಾಲೂಕಿನ ವಿರಾಜಿಪುರ ಜೆಎಸ್‌ಎಸ್ ಶಾಲೆಯಲ್ಲಿ ಮೌರ್ಯ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಕಾಲೇಜು ವತಿಯಿಂದ ವಿದ್ಯಾರ್ಥಿಗಳ ರಕ್ತ ಗುಂಪು ಪರೀಕ್ಷೆ ಮತ್ತು ಆರೋಗ್ಯ ತಪಾಸಣಾ ಶಿಬಿರ ನಡೆಯಿತು. ಕಾಲೇಜಿನ ಆಡಳಿತಾಧಿಕಾರಿ ಹೆಚ್.ಎನ್. ಮಹದೇವಪ್ರಸಾದ್, ಕಾಲೇಜು ಆಡಳಿತ ಮಂಡಳಿ ಮತ್ತು ಬೋಧಕ ಸಿಬ್ಬಂದಿ ಭಾಗವಹಿಸಿದ್ದರು.

## ಭವ್ಯಗೆ ಪಿಹೆಚ್.ಡಿ



**ಮಂಡ್ಯ:** ಪ್ರೊ.ಪುಟ್ಟಸ್ವಾಮಿ ಅವರ ಮಾರ್ಗದರ್ಶನದಲ್ಲಿ ಮೈಸೂರು ವಿವಿ ಪಿಇಎಸ್ ಸಂಶೋಧನಾ ಕೇಂದ್ರ ಮಂಡ್ಯದ ವಿದ್ಯಾರ್ಥಿ ಹಾಗೂ ಮದ್ದೂರು ತಾಲೂಕು ಕುರಿಕೆಂಪನದೊಡ್ಡಿ ಗ್ರಾಮದ ನಿವಾಸಿ ಕೆ.ಎನ್.ಮಧುಸೂಧನ್ ಅವರ ಪತ್ನಿ ಸಿ.ಎ.ಭವ್ಯ ಅವರ A Study On Sum Results in the Domination and Energy of Graphs ಎಂಬ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.



ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದ ಶ್ರೀಕ್ಷೇತ್ರ ಬಲಮುರಿ ದೇವಾಲಯಗಳ ಅಭಿವೃದ್ಧಿ ಸಮಿತಿಯಿಂದ ಶಿವರಾತ್ರಿ ಪ್ರಯುಕ್ತ ನಡೆಯುವ ವಿಶೇಷ ಉತ್ಸವ ಹಾಗೂ ಕಾರ್ಯಕ್ರಮಗಳಿಗೆ ಆಗಮಿಸುವಂತೆ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಆಹ್ವಾನಿಸಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ಬಿ.ಸಿ.ಸುಧಾಕರ್, ಉಪಾಧ್ಯಕ್ಷ ಸಂತೋಷ್, ಸದಸ್ಯ ವಿಶ್ವನಾಥ್, ಗ್ರಾಮದ ಯಜಮಾನ ಸ್ವಾಮಿಗೌಡ ಸೇರಿದಂತೆ ಇನ್ನಿತರರಿದ್ದರು.

# ಮೋದೂರು ಶಾಲೆಯಲ್ಲಿ ಸ್ವಾಮಿ ವಿವೇಕಾನಂದ ಜಯಂತಿ



ಮೋದೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಆಚರಿಸಲಾಯಿತು.

**ಕೆ.ಆರ್.ಪೇಟೆ:** ಸ್ವಾಮಿ ವಿವೇಕಾನಂದ ಅವರು ಇಡೀ ವಿಶ್ವಕ್ಕೆ ಹಿಂದೂ ಧರ್ಮ ಹಾಗೂ ಯೋಗ ಪರಿಚಯಿಸಿ, ಹಿಂದೂ ಧರ್ಮ ಹೆಮ್ಮರವಾಗಿ ಬೆಳೆಯಲು ಕಾರಣರಾಗಿದ್ದಾರೆ ಎಂದು ಮೋದೂರು ಸರ್ಕಾರಿ ಶಾಲೆ ಪ್ರಭಾರಿ ಮುಖ್ಯ ಶಿಕ್ಷಕ ವಿ.ಜೆ.ಮಲ್ಲಿಕಾರ್ಜುನ್ ತಿಳಿಸಿದರು.

ತಾಲೂಕಿನ ಮೋದೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದ ಅವರು ದೇಶ ವಿದೇಶಗಳಲ್ಲಿ ಹಿಂದೂ ಧರ್ಮದ ಸಾರವನ್ನು ತಿಳಿಸುವ ಜೊತೆಗೆ ನಮ್ಮ ಹಿಂದೂ ಸಂಸ್ಕೃತಿ ಶ್ರೀಮಂತಗೊಳಿಸಲು ಕೊನೆವರೆಗೂ ಶ್ರಮಿಸಿದರು. ಇಂತಹ ಮಹಾನ್ ಧಾರ್ಮಿಕ ಸಂತನ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು. ಅವರಲ್ಲಿದ್ದ ದೇಶಭಕ್ತಿಯನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದಲ್ಲಿನ ಶಿಕ್ಷಣ ಮಾತ್ರ ಜೀವನ ಬದಲಾಯಿಸುವುದಿಲ್ಲ. ನಾವು ನೋಡಿ ಕಲಿತದ್ದು ಮತ್ತು ಸ್ವತಃ ಅನುಭವಗಳು ನಮ್ಮನ್ನು ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸುತ್ತವೆ. ಕೇವಲ ಅಂಕಗಳನ್ನು ಗಳಿಸುವುದಕ್ಕಾಗಿ ಮಾತ್ರವೇ ಓದಬಾರದು. ಜ್ಞಾನ ಸಂಪಾದನೆಗಾಗಿ ಓದಬೇಕು. ನಾವು ಗ್ರಾಮೀಣ ವಿದ್ಯಾರ್ಥಿಗಳು ಎಂಬ ಕೀಳರಿಮೆ ಇರಬಾರದು. ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಿ ಗುರಿ ಸಾಧನೆ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ದೈಹಿಕ ಶಿಕ್ಷಣ ಶಿಕ್ಷಕ ಸಿ.ರಾಧಾಸ್ವಾಮಿ ವಿವೇಕಾನಂದರ ಯೋಗ ಶಿಕ್ಷಣ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಶಿಕ್ಷಕರಾದ ಎಂ.ಎಸ್. ಮಹೇಶ್‌ಕುಮಾರ್, ರಾಘವೇಂದ್ರಡಿ.ಎನ್, ಎಸ್‌ಡಿಎಂಸಿ ಸದಸ್ಯರು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಆಯುಷ್ ಸೇವಾ ಕಾರ್ಯಕ್ರಮ ಯಶಸ್ವಿಯಾಗಲಿ

## ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ

ನಾಗಮಂಗಲ, ಜ.13– ಜನಸಾಮಾನ್ಯರ ಆರೋಗ್ಯ ಸುಸ್ಥಿತಿಯಲ್ಲಿ ಇಡಬೇಕೆಂಬ ಉದ್ದೇಶದಿಂದ ಸರ್ಕಾರವು ಆಯುಷ್ ಸೇವಾ ಗ್ರಾಮ ಯೋಜನೆ ಜಾರಿಗೊಳಿಸಿದೆ. ಈ ಕಾರ್ಯಕ್ರಮ 3 ತಿಂಗಳ ಕಾಲ ನಡೆಯಲಿದ್ದು, ಸಾರ್ವಜನಿಕರು ಈ ಯೋಜನೆ ಸದುಪಯೋಗಪಡಿಸಿಕೊಳ್ಳಬೇಕು. ಗ್ರಾಮದಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾರೈಸಿದರು.

ತಾಲೂಕಿನ ಶಿಕಾರಿಪುರ ಗ್ರಾಮದಲ್ಲಿ ಮಂಡ್ಯ ಜಿಪಂ ಆಯುಷ್ ಇಲಾಖೆ ವತಿಯಿಂದ 2023–24ನೇ ಸಾಲಿನ ಪರಿಶಿಷ್ಟ ಪಂಗಡದ ಉಪ ಯೋಜನೆಯಡಿ ಆಯೋಜಿಸಿದ್ದ ಆಯುಷ್ ಸೇವಾ ಗ್ರಾಮ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರದಿಂದ ಜಾರಿಯಾಗಿರುವ ಆಯುಷ್ ಯೋಜನೆಯಡಿ ಜನರ ಆರೋಗ್ಯ ಕಾಪಾಡಲು ಆಯುಷ್ ಇಲಾಖೆ ಅಧಿಕಾರಿಗಳು ಹಾಗೂ ತಾಲೂಕು ಆಡಳಿತ ಶ್ರಮಿಸಬೇಕು ಎಂದರು.

ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ವಾರದೊಳಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಾಗುವುದು. ಸರ್ವೇ ನಂ.158ರ ಸಮಸ್ಯೆ ಪರಿಶೀಲಿಸಿ ಬಗೆಹರಿಸಲಾಗುವುದು ಇದಕ್ಕೆ ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆ ಪೂರ್ಣ ಪ್ರಮಾಣದ ಸಹಕಾರವನ್ನು ಗ್ರಾಮದ ಜನರಿಗೆ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ಸೀತಾಲಕ್ಷ್ಮಿ, ತಹಸೀಲ್ದಾರ್ ನಯಿಮಾ ಉನ್ನಿಸಾ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

# ವಚನ ಅಧ್ಯಯನದಿಂದ ಪಂಚೇಂದ್ರಿಯಗಳ ಮೇಲೆ ನಿಯಂತ್ರಣ ಸಾಧ್ಯ



'ಶರಣ ದರ್ಶನ ಕುರಿತು' ಆಶುಭಾಷಣ ಸ್ಪರ್ಧೆ ಹಾಗೂ 'ಶರಣ ಸಾಹಿತ್ಯ ಪ್ರಸ್ತುತತೆ' ವಿಚಾರ ಸಂಕಿರಣವನ್ನು ಮೈಸೂರು ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಹಿರಿಯ ಉಪನ್ಯಾಸಕ ಡಿ.ಉದಯಕುಮಾರ್ ಉದ್ಘಾಟಿಸಿದರು.

ಮೈಸೂರು, ಜ.13(ಎಸ್‌ಪಿಎನ್)– ಮನುಷ್ಯನ ಪಂಚೇಂದ್ರೀಯಗಳ ಮೇಲೆ ನಿಯಂತ್ರಣ ಸಾಧಿಸಲು ವಚನಗಳ ಅಧ್ಯಯನದಿಂದ ಸಾಧ್ಯ ಎಂದು ಮೈಸೂರು ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಹಿರಿಯ ಉಪನ್ಯಾಸಕ ಡಿ.ಉದಯಕುಮಾರ್ ತಿಳಿಸಿದರು.

ಮೈಸೂರು ಲಕ್ಷ್ಮೀಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆ ಆವರಣದಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ವತಿಯಿಂದ ಶಾಲಾ ವಿದ್ಯಾರ್ಥಿಗಳಿಗೆ ಶನಿವಾರ ಆಯೋಜಿಸಿದ್ದ 'ಶರಣ ದರ್ಶನ ಕುರಿತು' ಆಶುಭಾಷಣ ಸ್ಪರ್ಧೆ ಹಾಗೂ 'ಶರಣ ಸಾಹಿತ್ಯ ಪ್ರಸ್ತುತತೆ' ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ವಚನ ಸಾಹಿತ್ಯ ಗದ್ಯವೂ ಅಲ್ಲದ ಪದ್ಯವೂ ಅಲ್ಲದ ಆಧ್ಯಾತ್ಮಿಕ ಸಾಕ್ಷಾತ್ಕಾರಗಳಿಂದ ಕೂಡಿದ ಭಾವಗೀತೆಗಳೇ ವಚನ ಸಾಹಿತ್ಯ. ಅಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿ ಉನ್ನತ ದರ್ಜೆಗೇರಬೇಕಾದರೆ, ಆಲಿಸುವಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಮನುಷ್ಯನ ನಿತ್ಯ ಬದುಕಿನಲ್ಲಿ ಉಂಟಾಗುವ ಏರಿಳಿತಗಳಿಂದ ದೇಹದಲ್ಲಿ ಕೋಪ–ತಾಪ ಮತ್ತು ತಮ್ಮ ತಪ್ಪುಗಳನ್ನು ನಿಯಂತ್ರಿಸುವ ಶಕ್ತಿ ವಚನ ಸಾಹಿತ್ಯ ಅಧ್ಯಯನಗಳಿಂದ ಸಾಧ್ಯವಿದೆ. ಅಲ್ಲದೆ, ಮನುಷ್ಯ ಹಣದ ಬೆನ್ನು ಹತ್ತಿದರೆ, ಸಾಮಾಜಿಕ ಗೌರವ ಕಳೆದುಕೊಳ್ಳುತ್ತಾನೆ. ಅಂತೆಯೇ ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧ ನೀತಿಗಳಿಂದ ಹೊರಬರಲು ವಚನ ಸಾಹಿತ್ಯದ ಆಧ್ಯಾತ್ಮ ಸಾಕ್ಷಾತ್ಕಾರದಿಂದ ಸಾಧ್ಯವಿದೆ ಎಂದು ತಿಳಿಸಿದರು.

ಈ ವೇಳೆ ಆಶುಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯಶಿಕ್ಷಕ ಎಂ.ಸಿ.ದೇವರಾಜು ಬಹುಮಾನ ವಿತರಿಸಿದರು. ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಕಾರ್ಯದರ್ಶಿ ಟಿ.ಎಸ್.ಕುಮಾರಸ್ವಾಮಿ ಉಪಸ್ಥಿತರಿದ್ದರು. ಡಾ.ಮುದ್ದು ಮಲ್ಲೇಶ್ ಸ್ವಾಗತಿಸಿದರೆ, ಪ್ರಕಾಶ್ ವಂದಿಸಿದರು. ಸಂತೋಷ್, ಶ್ರೀಶೈಲ ಓಂಪ್ರಸಾದ್, ಲಾವಣ್ಯ, ವಿಕಾಸ್, ಸೌಭಾಗ್ಯ ಉಪಸ್ಥಿತರಿದ್ದರು.

# ರಾಮಮಂದಿರ ಉದ್ಘಾಟನೆ ದಿನ ಹಿಂದೂ ನೌಕರರಿಗೆ ಎರಡು ಗಂಟೆ ವಿಶೇಷ ಬ್ರೇಕ್ ನೀಡಿದ ಮಾರಿಷಸ್

**ಪೋರ್ಟ್ ಲೂಯಿಸ್:** ಜ.22 ರಂದು ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನಾ ಸಮಾರಂಭ ವೀಕ್ಷಿಸಲು ಮತ್ತು ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಲು ಹಿಂದೂ ನೌಕರರಿಗೆ 2 ಗಂಟೆಗಳ ಕಾಲ ವಿಶೇಷ ರಜೆ ನೀಡಲು ಮಾರಿಷಸ್ ಸರ್ಕಾರ ನಿರ್ಧರಿಸಿದೆ.

ರಾಮ ಮಂದಿರದಲ್ಲಿ ನಡೆಯುವ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಇತರ ಹಿರಿಯ ನಾಯಕರು ಭಾಗವಹಿಸಲಿದ್ದು, ಸಮಾರಂಭ ನೇರ ಪ್ರಸಾರವಾಗಲಿದೆ."ಅಯೋಧ್ಯೆ ರಾಮಮಂದಿರದ ಉದ್ಘಾಟನೆಯ ಸಂದರ್ಭದಲ್ಲಿ, ಸೇವೆಯ ಅಗತ್ಯತೆಗಳಿಗೆ ಒಳಪಟ್ಟು, ಹಿಂದೂ ಅಧಿಕಾರಿಗಳಿಗೆ 2 ಗಂಟೆಗಳ ವಿಶೇಷ ರಜೆ ನೀಡಲು ಕ್ಯಾಬಿನೆಟ್ ಒಪ್ಪಿಗೆ ನೀಡಿದೆ. ಭಾರತದಲ್ಲಿ ಅಯೋಧ್ಯೆ ರಾಮ ಮಂದಿರ, ಇದು ಅಯೋಧ್ಯೆಯಲ್ಲಿ ಭಗವಾನ್ ರಾಮನ ಪುನರಾಗಮನವನ್ನು ಸಂಕೇತಿಸುವ ಒಂದು ಹೆಗ್ಗುರುತಿನ ಸಮಾರಂಭವಾಗಿದೆ ಅಂತ ಮಾರಿಷಸ್ ಸರ್ಕಾರ ತನ್ನ ಆದೇಶದಲ್ಲಿ ತಿಳಿಸಿದೆ.

ಭಾರತದಲ್ಲಿ ರಾಮ ಮಂದಿ ಉದ್ಘಾಟನೆ ದಿನ 2 ಗಂಟೆಗಳ ಕಾಲ ವಿರಾಮ ನೀಡುವಂತೆ ಹಿಂದೂ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಮಾಡಿದ್ದ ಮನವಿಯನ್ನು ಮಾರಿಷಸ್ ಸರ್ಕಾರ ಅನುಮೋದಿಸಿದೆ. ಮಾರಿಷಸ್‌ನಲ್ಲಿ ಹಿಂದೂ ಧರ್ಮವು ಅತಿದೊಡ್ಡ ಧರ್ಮವಾಗಿದೆ. 2011ರಲ್ಲಿ ಮಾರಿಷಸ್ ಹಿಂದೂಗಳು ಜನಸಂಖ್ಯೆಯ ಸರಿಸುಮಾರು ಶೇ.48.5 ರಷ್ಟು ಇತ್ತು.

# ಸಿದ್ದರಾಮಯ್ಯ ವಿರುದ್ಧ ಏಕವಚನದಲ್ಲಿ ಅನಂತಕುಮಾರ್ ಹೆಗಡೆ ವಾಗ್ದಾಳಿ



ಅನಂತಕುಮಾರ್ ಹೆಗಡೆ

ಕುಮಟಾ, ಜ.13– ಬಿಜೆಪಿ ಸಂಸದ ಅನಂತಕುಮಾರ್ ಹೆಗಡೆ ಬಹಳ ದಿನಗಳ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮತ್ತೆ ವಾಗ್ದಾಳಿ ಮುಂದುವರಿಸಿದ್ದಾರೆ.

ಕುಮಟಾದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಶತಮಾನಗಳಿಂದಲೂ ಹಿಂದೂ ಸಮಾಜವನ್ನು ಒಡೆಯುತ್ತಲೆ ಬರುತ್ತಿದ್ದಾರೆ. ಕಾಂಗ್ರೆಸ್ ನಮ್ಮ ವಿರೋಧಿ ಅಲ್ಲ. ಅದು ಹಿಂದೂ ವಿರೋಧಿಗಳು, ಸನಾತನ ಧರ್ಮ ವಿರೋಧಿಗಳು. ಕಾಂಗ್ರೆಸ್ ನಮ್ಮ ವಿರೋಧಿ ಅಲ್ಲ, ಸಿಎಂ ಸಿದ್ದರಾಮಯ್ಯ ನಮ್ಮ ವಿರೋಧಿ. ಅಲ್ಪಸಂಖ್ಯಾತರ ಮತಕ್ಕಾಗಿ ಹರಾಜಾಗಿ ಹೋದವರು ನಮ್ಮ ವಿರೋಧಿಗಳು ಎಂದು ಅನಂತಕುಮಾರ್ ಹೆಗಡೆ ಆಕ್ರೋಶ ವ್ಯಕ್ತಪಡಿಸಿದರು.

ಸಿಎಂ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ಮುಂದುವರಿಸಿದ ಅವರು, ಮೊದಲು ರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ರಾಮ ಮಂದಿರ ಲೋಕಾರ್ಪಣೆಯ ಆಹ್ವಾನ ಬಂದಿಲ್ಲ ಎಂದರು. ಆಹ್ವಾನ ಬಂದ ಮೇಲೆ ನಾನು ಹೋಗುವುದಿಲ್ಲ ಎಂದರು ಎಂದು ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು. ನೀನು ಬಾ, ಅಥವಾ ಬಿಡು. ಆದರೆ ರಾಮ ಜನ್ಮಭೂಮಿಯಲ್ಲಿ ಏನೂ ನಿಲ್ಲೋದಿಲ್ಲ ಎಂದು ನಿಂದಿಸಿದರು. ಇನ್ನು ಮೊದಲಿಗೆ ಜನವರಿ 22ಕ್ಕೆ ಅಯೋಧ್ಯೆಗೆ ಹೋಗುವುದಿಲ್ಲ ಎಂದು ಹೇಳಿದ್ದ ಸಿದ್ದರಾಮಯ್ಯ ನಂತರ ಹೋಗುತ್ತೇನೆ ಎಂದು ಹೇಳಿದ್ದಾರೆ. ಇದು ಹಿಂದೂ ಸಮಾಜದ ತಾಕತ್ತು, ದಮ್ ಎಂದು ಹೆಗಡೆ ಹೇಳಿದರು.

# ಮಕ್ಕಳ ಮುಂದೆ ಪೋಷಕರು ಪುಸ್ತಕ ಓದಿದರೆ ಅದು ಅವರಿಗೆ ಪ್ರೇರಣೆಯಾಗಲಿದೆ

## ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ





ಮಹದೇವಪುರದ ಸಿಎನ್‌ಎಂ ಪಬ್ಲಿಕ್ ಶಾಲೆಯ 6ನೇ ವಾರ್ಷಿಕೋತ್ಸವವನ್ನು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಉದ್ಘಾಟಿಸಿದರು. ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜ.13(ಎಸ್‌ಬಿಡಿ)– ಪೋಷಕರು ತಮ್ಮ ಮಕ್ಕಳ ಮುಂದೆ ಪುಸ್ತಕ, ದಿನ ಪತ್ರಿಕೆಗಳನ್ನು ಓದುವ ಮೂಲಕ ಅವರಿಗೂ ಉತ್ತೇಜನ ನೀಡಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸಲಹೆ ನೀಡಿದರು.

ಮೈಸೂರಿನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಶನಿವಾರ ನಡೆದ ಮಹದೇವಪುರದ ಸಿಎನ್‌ಎಂ ಪಬ್ಲಿಕ್ ಶಾಲೆಯ 6ನೇ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ತಮ್ಮ ಪೋಷಕರನ್ನು ಅನುಸರಿಸುತ್ತಾರೆ. ಹಾಗಾಗಿ ತಾವು ಓದುವುದನ್ನು ರೂಢಿಸಿಕೊಂಡರೆ ಅದರಿಂದ ಮಕ್ಕಳೂ ಪ್ರಭಾವಿತರಾಗಿ ಓದಲು ಆರಂಭಿಸುತ್ತಾರೆ ಎಂದು ಕಿವಿಮಾತು ಹೇಳಿದರು.

ಮಕ್ಕಳನ್ನು ಟಿವಿ, ಮೊಬೈಲ್, ಸಾಮಾಜಿಕ ಜಾಲತಾಣಗಳಿಂದ ದೂರವಿಟ್ಟು, ಶಿಕ್ಷಣದ ಬಗ್ಗೆ ಆಸಕ್ತಿ ಹೆಚ್ಚಿಸಬೇಕು. ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಅವರನ್ನು ಈ ದೇಶದ ಆಸ್ತಿಯನ್ನಾಗಿ ಮಾಡಬೇಕು. ನಾವು ಓದುವಾಗ ಈಗಿನಷ್ಟು ಸೌಕರ್ಯಗಳಿರಲಿಲ್ಲ. ಈಗಿನ ಮಕ್ಕಳಿಗೆ ಪೋಷಕರ ಜೊತೆಗೆ ಸರ್ಕಾರವೂ ಕೂಡ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿದೆ. ಸದುಪಯೋಗಪಡಿಸಿಕೊಂಡು ವಿದ್ಯಾಭ್ಯಾಸದಲ್ಲಿ ಮಗ್ನರಾಗಬೇಕು ಎಂದು ಮಕ್ಕಳಿಗೂ ತಿಳಿ ಹೇಳಿದರು.

ಮಕ್ಕಳು ಶಾಲೆಯಿಂದ ಮನೆಗೆ ಬಂದ ಮೇಲೆ ಅರ್ಧಗಂಟೆ ಆಟವಾಡಲು ಬಿಟ್ಟು, ನಂತರ ಓದಲು ತಿಳಿಹೇಳಿ. ಅವರ ಮುಂದೆ ನೀವೇ ಮೊಬೈಲ್ ಹಿಡಿದುಕೊಂಡು ಸಾಮಾಜಿಕ ಜಾಲತಾಣದಲ್ಲಿ ಮುಳುಗಬೇಡಿ. ಅಬ್ದುಲ್ ಕಲಾಂ, ರಾಧಾಕೃಷ್ಣನ್, ಅಂಬೇಡ್ಕರ್, ಬಸವಣ್ಣರಂತಹ ದಾರ್ಶನಿಕರ ಆದರ್ಶ ತತ್ವಗಳನ್ನು ಮಕ್ಕಳಿಗೆ ತಿಳಿಸಿ. ಸಮಯಪ್ರಜ್ಞೆಯನ್ನು ಹೇಳಿಕೊಡಿ. ದೇಶದಲ್ಲಿ ಜನಸಂಖ್ಯೆ ಜೊತೆಗೆ ನಿರುದ್ಯೋಗವು ಹೆಚ್ಚಾಗುತ್ತಿದೆ. ಸ್ಪರ್ಧಾತ್ಮಕ ಯುಗದಲ್ಲಿ ಎಷ್ಟು ಓದಿದರೂ ಕೆಲಸ ಸಿಗುತ್ತಿಲ್ಲ. ನಿಮ್ಮ ಮಕ್ಕಳ ಉಜ್ವಲ ಭವಿಷ್ಯದತ್ತ ಗಮನಹರಿಸಿ. ಈ ನಿಟ್ಟಿನಲ್ಲಿ ಸಿಎನ್‌ಎಂ ಶಾಲೆಯಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ನಾಗಮ್ಮ, ಕಾರ್ಯದರ್ಶಿ ಭರತ್ ಮಂಜೇಗೌಡ, ಖಜಾಂಚಿ ಭಾರ್ಗವಿ, ನಿರ್ದೇಶಕರಾದ ಭವ್ಯ ರಾಘವೇಂದ್ರ, ಮಹಾಲಕ್ಷ್ಮಿ, ಅಪೆಕ್ಸ್ ಶ್ರೀನಿವಾಸ್, ರಾಘವೇಂದ್ರ, ನಂಜರಾಜು, ಮಹಾದೇವಸ್ವಾಮಿ, ಪ್ರಾಂಶುಪಾಲರಾದ ಜಾಯ್ಸ ಮುನಿರತ್ನ, ಸತ್ಯಶೀಲ ಮತ್ತಿತರರು ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ನಂತರ ಶಾಲೆಯ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ಪ್ರಸ್ತುತಪಡಿಸಿದರು.

# ಅನಂತಕುಮಾರ್ ಹೆಗಡೆ ವಿರುದ್ಧ ಕಾಂಗ್ರೆಸ್ ಮುಖಂಡರ ತೀವ್ರ ವಾಗ್ದಾಳಿ

**ಬೆಂಗಳೂರು:** ಬಿಜೆಪಿ ಸಂಸದ ಅನಂತಕುಮಾರ್ ಹೆಗಡೆ ಅವರ ವಿವಾದಾತ್ಮಕ ಹೇಳಿಕೆಗೆ ಕಾಂಗ್ರೆಸ್ ನಾಯಕರು ಆಕ್ರೋಶ ಹೊರಹಾಕುತ್ತಿದ್ದಾರೆ. ಸಂಸದರ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.

ನಗರದಲ್ಲಿ ಮಾತನಾಡಿದ ಅವರು, ಅನಂತಕುಮಾರ್ ವಿರುದ್ಧ ಕಾನೂನಿನಡಿ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ. ಕೇಂದ್ರದಲ್ಲಿ ಸಚಿವರಾಗಿದ್ದವರು ಜವಾಬ್ದಾರಿಯಿಂದ ಮಾತನಾಡಬೇಕು. ಯಾರೂ ಇಂತಹ ಹೇಳಿಕೆಗಳನ್ನು ಒಪ್ಪುವುದಿಲ್ಲ ಎಂದರು.

ಯಾರು ಪ್ರೇರೇಪಿಸಿದ್ದಾರೋ ಗೊತ್ತಿಲ್ಲ, ರಾಮನೇ ಅವರಿಗೆ ಒಳ್ಳೆಯ ಮನಸ್ಸು ನೀಡಲಿ. ಪ್ರಚೋದನೆಯಿಂದ ಏನಾದರೂ ಘಟನೆಗಳು ನಡೆದರೆ ಅನಂತಕುಮಾರ್ ಜವಾಬ್ದಾರಿ ಆಗುತ್ತಾರೆ. ಬೇರೆಯವರನ್ನು ಹೊಣೆ ಮಾಡಲ್ಲ ಎಂದರು.

ಸಿಎಂ ಸಿದ್ದರಾಮಯ್ಯ ವಿರುದ್ಧ ಏಕವಚನದಲ್ಲೇ ಅನಂತಕುಮಾರ್ ಹೆಗಡೆ ವಾಗ್ದಾಳಿ ನಡೆಸಿದ ವಿಚಾರವಾಗಿ ಮಾತನಾಡಿದ ಅವರು, ಸಿಎಂ ಬಗ್ಗೆ, ಬೇರೆಯವರ ಬಗ್ಗೆ ಬಹಳ ಸುಲಭವಾಗಿ ಮಾತನಾಡಬಹುದು. ಅದು ಅವರವರ ಸಂಸ್ಕೃತಿ ತೋರಿಸುತ್ತದೆ, ಬೇರೇನೂ ತೋರಿಸಲ್ಲ ಎಂದರು.

ಸಿಎಂ ಸಿದ್ದರಾಮಯ್ಯ ವಿರುದ್ಧ ಅನಂತಕುಮಾರ್ ವಾಗ್ದಾಳಿ ವಿಚಾರವಾಗಿ ಮಾತನಾಡಿದ ಸಚಿವ ಎಂಬಿ ಪಾಟೀಲ್, ಚುನಾವಣೆಗೋಸ್ಕರ ಅನಂತಕುಮಾರ್ ಹೀಗೆ ಹೇಳಿಕೆ ನೀಡುತ್ತಿದ್ದಾರೆ. ನಾಲ್ಕು ವರ್ಷ ಅನಂತಕುಮಾರ್ ಹೆಗಡೆ ಎಲ್ಲಿ ಹೋಗಿದ್ದರು. ಈಗ ಉತ್ತರ ಕನ್ನಡ ಲೋಕಸಭೆ ಕ್ಷೇತ್ರದ ಕಡೆ ಗಮನ ಹರಿಸುತ್ತಿದ್ದಾರೆ. ಜನರ ಕೈಗೆ ಇಷ್ಟು ದಿನ ಸಿಕ್ಕಿಲ್ಲ, ಈಗ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ ಎಂದರು.

ಬಿ.ಕೆ.ಹರಿಪ್ರಸಾದ್ ಮಾಧ್ಯಮದೊಂದಿಗೆ ಮಾತನಾಡಿ, ಸಂಸದ ಅನಂತ ಕುಮಾರ್ ಶಾಂತಿ ಕದಡುವ ಹೇಳಿಕೆ ನೀಡಿದ್ದಾರೆ. ಹೀಗಾಗಿ ಅನಂತ್ ಕುಮಾರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ಸುವ್ಯವಸ್ಥಿತವಾದ ಆಸ್ಪತ್ರೆ ನಿರ್ಮಿಸಿಲ್ಲ. ಇವರಿಗೆ ಅಭಿವೃದ್ಧಿ ಕುರಿತು ಮಾತನಾಡುವ ಧೈರ್ಯ ಇಲ್ಲ ಎಂದರು.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಸರಣಿ ಟ್ವೀಟ್ ಮಾಡಿರುವ ಸಚಿವ ದಿನೇಶ್ ಗುಂಡೂರಾವ್ 'ಕುಲವಂ ನಾಲಗೆ ನುಡಿಯಿತು' ಎಂಬಂತೆ ಉತ್ತರ ಕನ್ನಡ ಸಂಸದರ ಸಂಸ್ಕಾರ ಅವರ ಮಾತುಗಳಲ್ಲೇ ತಿಳಿಯುತ್ತದೆ. ವಯಸ್ಸಿನಲ್ಲಿ ಹಾಗೂ ಅನುಭವದಲ್ಲಿ ಸಿದ್ದರಾಮಯ್ಯರ ಮುಂದೆ ಅನಂತ್ ಕುಮಾರ್ ಹೆಗಡೆ ಹುಲ್ಲು ಕಡ್ಡಿಗೂ ಸಮಾನರಲ್ಲ. ಶೋಷಿತ ಸಮುದಾಯದ ಧ್ವನಿಯಾಗಿರುವ ಸಿದ್ದರಾಮಯ್ಯರನ್ನು ಮತಾಂಧತೆಯ ವಿಷ ತುಂಬಿಕೊಂಡಿರುವ ಹೆಗಡೆ ಏಕವಚನದಲ್ಲಿ 'ಮಗನೇ' ಎಂದಿರುವುದು ಅವರ ಕೊಳಕು ಮನಸ್ಥಿತಿಯ ಅನಾವರಣ ಮಾಡಿದೆ ಎಂದು ಕಿಡಿಕಾರಿದ್ದಾರೆ.

# ಡಾ.ಯತೀಂದ್ರ ಸನ್ ಆಫ್ ಸಿದ್ದರಾಮಯ್ಯ ವರ್ಸಸ್ ಪತ್ರಕರ್ತ ಪ್ರತಾಪ್ ಸಿಂಹ ಫೈಟ್!

● ಪ್ರಧಾನಿ ಮೋದಿ ಅಲೆಯಲ್ಲಿ ಕೊಚ್ಚಿ ಹೋಗುತ್ತಾರೆ
● ಸಚಿವರಿಗೆ ಈಗ ಚಳಿ ಜ್ವರ ಬಂದಿದೆ
● ಅಭ್ಯರ್ಥಿಗಳಿಲ್ಲದೆ ಕಾಂಗ್ರೆಸ್‌ಗೆ ಹೀನಾಯ ಸ್ಥಿತಿ



ಪತ್ರಕರ್ತರ ಜೊತೆ ಮಾತನಾಡಿದ ಸಂಸದ ಪ್ರತಾಪ್ ಸಿಂಹ

ಮೈಸೂರು, ಜ.13(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಪುತ್ರನನ್ನು ಕಣಕ್ಕಿಳಿಸಿದರೆ ಡಾ.ಯತೀಂದ್ರ ಸನ್ ಆಫ್ ಸಿದ್ದರಾಮಯ್ಯ ವರ್ಸಸ್ ಪತ್ರಕರ್ತ ಪ್ರತಾಪ್ ಸಿಂಹ ನಡುವೆ ಫೈಟ್ ನಡೆಯಲಿದೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.

ಮೈಸೂರಿನ ಮೃಗಾಲಯದ ಬಳಿ ನಿರ್ಮಾಣ ಮಾಡಿರುವ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಡಾ.ಯತೀಂದ್ರ ಸಿದ್ದರಾಮಯ್ಯ ತಮ್ಮ ಎದುರಾಳಿಯಾದರೆ ಒಳ್ಳೆಯದು ಎಂದು ಅಭಿಪ್ರಾಯಪಟ್ಟರು.

ನಾನು ಯಾವತ್ತೂ ನನ್ನ ಎದುರಾಳಿಯನ್ನು ನೋಡಲ್ಲ. ನರೇಂದ್ರ ಮೋದಿ ಹೆಸರಿನ ಮುಂದೆ ಯಾವ ಎದುರಾಳಿ ಹೆಸರು ನಡೆಯುವುದಿಲ್ಲ ಎಂದು ಘರ್ಜಿಸಿದ ಪ್ರತಾಪ್ ಸಿಂಹ, ಕಾಂಗ್ರೆಸ್‌ನವರಿಗೆ ನಮ್ಮ ಚಿಂತೆ ಯಾಕೆ, ಊರ ಉಸಾಬರಿ ಯಾಕೆ, ತಮ್ಮ ಅಭ್ಯರ್ಥಿ ಯಾರು ಎಂಬುದನ್ನು ಮೊದಲು ಘೋಷಣೆ ಮಾಡಲಿ ಎಂದು ಸವಾಲು ಹಾಕಿದರು.

ಇಡೀ ಕರ್ನಾಟಕದಲ್ಲಿ ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳಿಲ್ಲದೆ ಮಂತ್ರಿಗಳನ್ನು ಸ್ಪರ್ಧೆಗಿಳಿಸುವ ದೈನಾಸಿ ಸ್ಥಿತಿಗೆ ಕಾಂಗ್ರೆಸ್ ಬಂದಿದೆ. ಇನ್ನು ತಾವು ಸ್ಪರ್ಧೆ ಮಾಡಿದರೆ ಮೋದಿ ಅಲೆಯಲ್ಲಿ ಎಲ್ಲಿ ಕೊಚ್ಚಿ ಹೋಗುತ್ತೇವೋ ಎಂದು ಸಚಿವರಿಗೆ ಚಳಿ, ಜ್ವರ ಬಂದಿದೆ. ಲೋಕಸಭಾ ಚುನಾವಣೆಯಲ್ಲಿ ನಿಂತು ಸೋತರೆ ಇತ್ತ ಮಂತ್ರಿ ಸ್ಥಾನವೂ ಇಲ್ಲದೆ, ಅತ್ತ ಸಂಸದ ಸ್ಥಾನವೂ ಇಲ್ಲದೆ ಅತಂತ್ರರಾಗುತ್ತೇವೆ ಎಂದು ಸಚಿವರು ಚಿಂತೆಯಲ್ಲಿ ಮುಳುಗಿದ್ದಾರೆ ಎಂದು ಪ್ರತಾಪ್‌ಸಿಂಹ ಹೇಳಿದರು.

## ಡಾ.ಯತೀಂದ್ರಗೆ ಸಂಸದ ಪ್ರತಾಪ್ ಸಿಂಹ ರಣವೀಳ್ಯ

### ಪಾಪದಿಂದ ಮುಕ್ತರಾಗಲು ಸಿದ್ದರಾಮಯ್ಯ ಆಯೋಧ್ಯೆಗೆ ಹೋಗಲಿ

ರಾಮ ಜನ್ಮಭೂಮಿ ರಥಯಾತ್ರೆ ಮಾಡಿ ಜನಾಭಿಪ್ರಾಯ ರೂಪಿಸಿದವರು ಲಾಲ್ ಕೃಷ್ಣ ಅಡ್ವಾನಿ. ಕೋರ್ಟ್‌ನಲ್ಲಿ ಕಾನೂನಾತ್ಮಕ ಹೋರಾಟ ಮಾಡಿದವರು ಕೇಂದ್ರದ ಮಾಜಿ ಸಚಿವರೂ ಆದ ವಕೀಲ ರವಿಶಂಕರ್ ಪ್ರಸಾದ್, ತರುವಾಯ ರಾಮನ ಅಸ್ತಿತ್ವದ ಬಗ್ಗೆ ಪೂರಕ ದಾಖಲಾತಿಗಳನ್ನು ಒದಗಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ಕಾರಣಕರ್ತರಾದರು. ಈ ಹಿನ್ನೆಲೆ ಈಗ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಅಡ್ವಾನಿಯಿಂದ ನರೇಂದ್ರ ಮೋದಿ ತನಕ ಬಿಜೆಪಿಯ ಎಲ್ಲಾ ನಾಯಕರು ಕಾರಣಕರ್ತರಾಗಿದ್ದಾರೆ ಎಂದು ವಿವರಿಸಿದರು. ಆದರೆ ರಾಮನ ಅಸ್ತಿತ್ವವನ್ನು ಕಾಂಗ್ರೆಸ್‌ನವರು ಪ್ರಶ್ನೆ ಮಾಡಿದರು. ರಾಮಸೇತು ವಿಚಾರದಲ್ಲಿ ರಾಮ ಕಾಲ್ಪನಿಕ ವ್ಯಕ್ತಿ ಎಂದು ಸುಪ್ರೀಂಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದರು. ಈ ಎಲ್ಲಾ ಕಾರಣಗಳಿಂದ ಅಪರಾಧಿ ಪ್ರಜ್ಞೆಯಿಂದ ರಾಮ ಮಂದಿರ ಉದ್ಘಾಟನಾ ಕಾರ್ಯಕ್ರಮದಿಂದ ಕಾಂಗ್ರೆಸ್‌ನವರು ದೂರ ಉಳಿದಿದ್ದಾರೆ ಎಂದು ಆರೋಪಿಸಿದರು.

ಅಯೋಧ್ಯೆಗೆ ಭೇಟಿ ನೀಡಿ ರಾಮನಿಗೆ ವಿಶೇಷ ಪೂಜೆ ಸಲ್ಲಿಸುವುದಾಗಿ ಸಿದ್ದರಾಮಯ್ಯ ನೀಡಿರುವ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಪ್ರತಾಪ್ ಸಿಂಹ, ರಾಮನ ಅಸ್ತಿತ್ವವನ್ನೇ ಕಾಂಗ್ರೆಸ್ ನವರು ಪ್ರಶ್ನೆ ಮಾಡಿದರು. ಈಗ ಪಾಪ ತೊಳೆದುಕೊಳ್ಳಲು ಸಿದ್ದರಾಮಯ್ಯ ತಮ್ಮ ಶಿಷ್ಯರ ಜೊತೆಗೆ ಅಯೋಧ್ಯೆಗೆ ಹೋಗಿ ಬರಲಿ ಎಂದು ಸಲಹೆ ನೀಡಿದರು.

ತಮ್ಮ ಬಗ್ಗೆ ಹಗುರವಾಗಿ ಮಾತನಾಡಿರುವ ಶಾಸಕ ಪ್ರದೀಪ್ ಈಶ್ವರ್ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಕೊಚ್ಚೆಗೆ ನಾನು ಯಾವತ್ತೂ ಕಲ್ಲು ಹಾಕುವುದಿಲ್ಲ ಎಂದು ತಿರುಗೇಟು ನೀಡಿದರು.

### ಎಕ್ಸ್‌ಪ್ರೆಸ್ ಹೈವೆ ಮೂಲಭೂತ ಸೌಕರ್ಯಕ್ಕೆ 1,200 ಕೋಟಿ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಶೌಚಾಲಯ, ಹೋಟೆಲ್ ನಿರ್ಮಾಣ ಸೇರಿದಂತೆ ಭೂಸ್ವಾಧೀನಕ್ಕೆ 1,200 ಕೋಟಿ ರೂಪಾಯಿ ವೆಚ್ಚವಾಗಲಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ಪ್ರವೇಶ ಹಾಗೂ ನಿರ್ಗಮನ ಸ್ಥಳದಲ್ಲಿ ಸರಿಯಾದ ವ್ಯವಸ್ಥೆ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಹಾಗೂ ಬೆಂಗಳೂರಿನ ನಿರ್ಗಮನ ಸ್ಥಳದಲ್ಲಿ ಫ್ಲೈ ಓವರ್ ನಿರ್ಮಾಣ ಮಾಡಲಾಗುತ್ತಿದೆ. ಅಲ್ಲದೆ ಎಕ್ಸ್‌ಪ್ರೆಸ್ ಹೈವೆ ಮಧ್ಯೆ ಶೌಚಾಲಯ, ಹೋಟೆಲ್, ವಿಶ್ರಾಂತಿ ಕೊಠಡಿ, ಕುಡಿಯುವ ನೀರು ಸೇರಿದಂತೆ ಇತರೆ ಮೂಲಭೂತ ಸೌಕರ್ಯ ಕಲ್ಪಿಸಲು ಕೇಂದ್ರ ಸರ್ಕಾರ 688 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಈ ಸಂಬಂಧ ಟೆಂಡರ್ ಕರೆಯಲಿದ್ದು, ಶೀಘ್ರದಲ್ಲೆ ಕಾಮಗಾರಿ ಆರಂಭವಾಗಲಿದೆ ಎಂದು ಹೇಳಿದರು.

ಈ ಕಾಮಗಾರಿಗಾಗಿ ಭೂ ಸ್ವಾಧೀನಕ್ಕೂ ಕೂಡ ಹಣ ಬಿಡುಗಡೆಯಾಗಲಿದ್ದು, ಒಟ್ಟಾರೆ ಸುಮಾರು 1,200 ಕೋಟಿ ರೂಪಾಯಿ ವೆಚ್ಚವಾಗಲಿದೆ ಎಂದರು. ಈ ಮೂಲಕ ಎಕ್ಸ್‌ಪ್ರೆಸ್ ಹೈವೆ ಉದ್ಘಾಟನೆ ದಿನದಿಂದ ಎದುರಾಗಿದ್ದ ಎಲ್ಲಾ ರೀತಿಯ ಸಮಸ್ಯೆ ಸರಿಪಡಿಸಲಾಗುವುದು ಎಂದು ಪ್ರತಾಪ್ ಸಿಂಹ ಭರವಸೆ ನೀಡಿದರು.

ಮೈತ್ರಿ ಕುರಿತಂತೆ ಜೆಡಿಎಸ್ ಹಾಗೂ ಬಿಜೆಪಿ ನಡುವೆ ಯಾವುದೇ ಗೊಂದಲ ಅಥವಾ ಭಿನ್ನಾಭಿಪ್ರಾಯವಿಲ್ಲ. ಈ ಕ್ಷೇತ್ರದಲ್ಲಿ ನನ್ನ ಪರ ಎರಡು ಪಕ್ಷದ ನಾಯಕರ ಆಶೀರ್ವಾದವಿದೆ. ಹೀಗಿರುವಾಗ ನನ್ನ ಪ್ರತಿ ಸ್ಪರ್ಧಿಯಾಗಿ ಯಾರೇ ನಿಂತರೂ ನಾನು ಯೋಚನೆ ಮಾಡುವುದಿಲ್ಲ. ನಾನು ಎರಡು ಬಾರಿ ಬಿಜೆಪಿ ಅಭ್ಯರ್ಥಿಯಾದರೂ ಆಲ್ ಪಾರ್ಟಿ ಕ್ಯಾಂಡಿಡೇಟ್ ಆಗಿದ್ದೇನೆ. ಮೋದಿ ಬಗ್ಗೆ ಪ್ರೀತಿ ಇರುವವರು ಎಲ್ಲಾ ಪಕ್ಷದಲ್ಲೂ ಇದ್ದಾರೆ, ಎಲ್ಲರೂ ಬಿಜೆಪಿಗೆ ಓಟು ಹಾಕುತ್ತಾರೆ ಎಂದರು.

ನನ್ನ ಸಹೋದರನನ್ನು ರಾಜಕೀಯ ದುರುದ್ದೇಶದಿಂದ ಮರಗಳ್ಳತನ ಪ್ರಕರಣದಲ್ಲಿ ಸಿಲುಕಿಸಿದಾಗ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ದಾಖಲಾತಿ ಸಮೇತ ಸತ್ಯ ಹೊರಗಿಟ್ಟರು. ಈ ಹಿನ್ನೆಲೆಯಲ್ಲಿ ಅವರಿಗೆ ಕೃತಜ್ಞತೆ ತಿಳಿಸಿ ಆಶೀರ್ವಾದ ಪಡೆಯಲು ಭೇಟಿ ಮಾಡಿದ್ದೆ ಎಂದು ಪ್ರತಾಪ್ ಸಿಂಹ ಹೇಳಿದರು.

## ನನ್ನ ಮಗ ಡಾ.ಯತೀಂದ್ರ ಮೈಸೂರು–ಕೊಡಗು ಕ್ಷೇತ್ರದಿಂದ ಸ್ಪರ್ಧೆ ಬರೀ ಊಹಾಪೋಹ

● ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ● ನಾನಾಗಲೀ, ನನ್ನ ಮಗನಾಗಲೀ ಸ್ಪರ್ಧಿಸುವ ಸಂಬಂಧ ಎಲ್ಲಿಯೂ ಪ್ರಸ್ತಾಪಿಸಿಲ್ಲ ● ಸೋಲಿನ ಭಯದಿಂದ ಹಾಲಿ ಸಂಸದ ಪ್ರತಾಪ್ ಸಿಂಹ ಇಂತಹ ಹೇಳಿಕೆ ನೀಡುತ್ತಿದ್ದಾರೆ



ಬೆಂಗಳೂರು, ಜ.13(ಕೆಎಂಶಿ)–ಪುತ್ರ ಯತೀಂದ್ರ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದಿಂದ ಕಣಕ್ಕಿಳಿಯುತ್ತಾರೆ ಎಂಬುದು ಊಹಾಪೋಹ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನಾಗಲೀ, ಮಾಜಿ ಶಾಸಕ ಯತೀಂದ್ರ ಆಗಲಿ, ಲೋಕಸಭಾ ಚುನಾವಣೆಗೆ ಕಣಕ್ಕಿಳಿಯುವ ಸಂಬಂಧ ಎಲ್ಲಿಯೂ ಪ್ರಸ್ತಾಪಿಸಿಲ್ಲ ಎಂದರು.

ಕ್ಷೇತ್ರದ ಹಾಲಿ ಸಂಸದ ಪ್ರತಾಪ್ ಸಿಂಹ ಸೋಲಿನ ಭಯದಿಂದ ಇಂತಹ ಹೇಳಿಕೆಗಳನ್ನು ನೀಡಿ ಜನರ ದಾರಿ ತಪ್ಪಿಸಲು ಹೊರಟಿದ್ದಾರೆ ಎಂದು ದೂರಿದರು. ಮೈಸೂರು ಲೋಕಸಭಾ ಕ್ಷೇತ್ರದಿಂದ ಯಾರನ್ನು ಕಾಂಗ್ರೆಸ್ ಅಭ್ಯರ್ಥಿ ಮಾಡಬೇಕೆಂಬ ಬಗ್ಗೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ.

ಅವರು ಸ್ಥಳೀಯ ಸಚಿವರು, ಶಾಸಕರು, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಸಮಾಲೋಚಿಸಿ ವರದಿ ನೀಡುತ್ತಾರೆ, ಆ ವರದಿಗೆ ಮಾನ್ಯತೆ ದೊರೆಯಲಿದೆ ಎಂದರು.

ಅಯೋಧ್ಯೆಯಲ್ಲಿ ರಾಮಚಂದ್ರನ ಪ್ರತಿಮೆ ಸ್ಥಾಪನೆಗೆ ವಿರೋಧವಿಲ್ಲ, ಆದರೆ ರಾಜಕೀಯ ಮಾಡಬಾರದು, 22ರ ಉದ್ಘಾಟನಾ ಸಮಾರಂಭವನ್ನು ರಾಜಕೀಯಕ್ಕೆ ಬಳಸಲು ಹೊರಟಿದ್ದಾರೆ, ಅದನ್ನು ವಿರೋಧಿಸುತ್ತೇವೆಯೇ ಹೊರತು ರಾಮಚಂದ್ರನ ವಿರೋಧಿಗಳಲ್ಲ, ನಾನು ಎಲ್ಲಿಯೂ ಅಯೋಧ್ಯೆಗೆ ಹೋಗುತ್ತೇನೆ ಅಥವಾ ಹೋಗುವುದಿಲ್ಲ ಎಂದು ಹೇಳಿಲ್ಲ ಎಂದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಗೃಹಲಕ್ಷ್ಮೀ ಯೋಜನೆಯಡಿ ಕೊಡುವ 2,000 ರೂ. ಯಾವುದಕ್ಕೂ ಸಾಲುವುದಿಲ್ಲ ಎಂದಿರುವ ಬಗ್ಗೆ ಪ್ರತಿಕ್ರಿಯಿಸಿ, ಅವರು ಒಂದು ನೂರು ರೂ.ಗಳನ್ನಾದರೂ ಕೊಟ್ಟಿದ್ದರೆ? ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಯಂತೆ ಎಲ್ಲಾ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ.

ಜನರಿಗೆ ಕೊಟ್ಟ ಮಾತು ಉಳಿಸಿಕೊಳ್ಳುವುದು ಜನರಿಂದ ಆಯ್ಕೆಯಾದ ಸರ್ಕಾರದ ಕರ್ತವ್ಯ, ಈ ಯೋಜನೆಗಳು ದುರುಪಯೋಗ ಆಗದಂತೆ ಪೂರ್ಣ ಪ್ರಮಾಣದಲ್ಲಿ ಸದ್ಬಳಕೆ ಮಾಡಿಕೊಳ್ಳಬೇಕಿರುವುದು ಫಲಾನುಭವಿಗಳ ಕರ್ತವ್ಯ.

ಜನರ ತೆರಿಗೆ ಹಣ, ಜನರ ಕಲ್ಯಾಣ ಕಾರ್ಯಕ್ರಮಗಳು, ಇವು ಉಚಿತ ಯೋಜನೆಗಳು ಎಂಬ ತಪ್ಪು ಕಲ್ಪನೆ ಬೇಡ, ಗ್ಯಾರಂಟಿಗಳ ಪ್ರತಿ ಪೈಸೆಯೂ ಫಲಾನುಭವಿಗಳ ಬದುಕಿಗೆ ಸದುಪಯೋಗವಾಗಬೇಕು. ಚುನಾವಣಾ ಪ್ರಣಾಳಿಕೆಯನ್ನು, ಚುನಾವಣಾ ಪ್ರಚಾರಕ್ಕೆ ಸೀಮಿತಗೊಳಿಸದೆ ಕಾರ್ಯರೂಪಕ್ಕೆ ತಂದು, ಜನರ ಬದುಕಲ್ಲಿ ಅವುಗಳ ಪ್ರತಿಫಲ ಕಾಣಬೇಕು ಎಂಬುದು ಸರ್ಕಾರದ ಆಶಯ, ಸರ್ಕಾರದ ಸದಾಶಯಕ್ಕೆ ಎಲ್ಲರ ಬೆಂಬಲವಿರಲಿ ಎಂದು ಮನವಿ ಮಾಡಿದ್ದಾರೆ.

## ಮೈಸೂರಿನಿಂದ ಅಯೋಧ್ಯೆಗೆ ಫೆ.4, 18ರಂದು ಎರಡು ವಿಶೇಷ ರೈಲು ವ್ಯವಸ್ಥೆ



ಮೈಸೂರು, ಜ.13(ಬಿಎಲ್‌ಯು)– ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ರಾಮಮಂದಿರ ಲೋಕಾರ್ಪಣೆ ನಂತರ ಫೆಬ್ರವರಿ ತಿಂಗಳಲ್ಲಿ ಮೈಸೂರಿನಿಂದ ಎರಡು ವಿಶೇಷ ರೈಲು ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.

ಮೈಸೂರಿನಿಂದ ಅಯೋಧ್ಯೆಗೆ ಫೆ.4 ಮತ್ತು ಫೆ.18ರಂದು ವಿಶೇಷ ರೈಲುಗಳು ಸಂಚರಿಸಲಿವೆ. ಮೈಸೂರಿನಿಂದ ಫೆಬ್ರವರಿ 4ರಂದು ರಾತ್ರಿ 12.15 ಗಂಟೆಗೆ ಹೊರಡುವ ರೈಲು ಬೆಂಗಳೂರು, ತುಮಕೂರು, ಅರಸೀಕೆರೆ, ಕಡೂರು, ಬೀರೂರು, ಹೊಸಪೇಟೆ, ವಿಜಯಪುರ, ಸೋಲಾಪುರ್, ಭೂಸಾವಲ್, ಇಟರಾಸಿ, ಬಿನಾ, ಝಾನ್ಸಿ, ಪ್ರಯಾಗ್ ರಾಜ್ ಮೂಲಕ ಅಯೋಧ್ಯೆ ತಲುಪಲಿದೆ. ಮೈಸೂರಿನಿಂದ ಫೆಬ್ರವರಿ 18 ರಂದು ಹೊರಡುವ ಮತ್ತೊಂದು ರೈಲು ಸಹ ಇದೇ ಮಾರ್ಗದಲ್ಲಿ ಸಂಚರಿಸಲಿದೆ. ಇದೇ ರೀತಿ ಅಯೋಧ್ಯೆಯಿಂದ ಫೆಬ್ರವರಿ 7 ಮತ್ತು 21ರಂದು ಇದೇ ಮಾರ್ಗದಲ್ಲಿ ರೈಲುಗಳು ಮೈಸೂರಿಗೆ ಬರಲಿವೆ. ಮೈಸೂರಿನಿಂದ ಅಯೋಧ್ಯೆಗೆ 2,894 ಕಿಲೋಮೀಟರ್ ಅಂತರವಿದ್ದು, ಸುಮಾರು 60.40 ಗಂಟೆಗಳ ಪ್ರಯಾಣವಿರುತ್ತದೆ. 58.40 ಗಂಟೆ ಅವಧಿಯಲ್ಲಿ ಇವೆರಡೂ ರೈಲುಗಳು ಮೈಸೂರಿಗೆ ವಾಪಸ್ಸಾಗಲಿವೆ. ಮೈಸೂರಿನಿಂದ ಅಯೋಧ್ಯೆಗೆ ಸಂಚರಿಸುವ ರೈಲಿನಲ್ಲಿ 20 ಸ್ಲೀಪರ್ ಕೋಚ್ ಹಾಗೂ 2 ಗಾರ್ಡ್ ಕೋಚ್ ಸೇರಿದಂತೆ ಒಟ್ಟು 22 ಕೋಚ್‌ಗಳಿರಲಿವೆ. ಮೈಸೂರಿನಿಂದ ಅಯೋಧ್ಯೆ ಹಾಗೂ ಅಯೋಧ್ಯೆಯಿಂದ ಮೈಸೂರಿಗೆ ಫೆಬ್ರವರಿ ತಿಂಗಳಲ್ಲಿ ಎರಡು ವಿಶೇಷ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ಜನರು ಅಯೋಧ್ಯೆಗೆ ಭೇಟಿ ನೀಡಿ ರಾಮನ ದರ್ಶನ ಪಡೆಯಬಹುದು ಎಂದು ಸಂಸದ ಪ್ರತಾಪ್ ಸಿಂಹ ಮಾಹಿತಿ ನೀಡಿದ್ದಾರೆ.

## ಮೃಗಾಲಯದ ಬಳಿ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿದ ಸಂಸದ ಪ್ರತಾಪ್ ಸಿಂಹ

ಮೈಸೂರು, ಜ.13(ಬಿಎಲ್‌ಯು)– ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದ ಬಳಿ ಪ್ರವಾಸಿಗರ ಅನುಕೂಲಕ್ಕಾಗಿ ನಿರ್ಮಾಣ ಮಾಡಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಸಂಸದ ಪ್ರತಾಪ್ ಸಿಂಹ ಇಂದು ಉದ್ಘಾಟನೆ ಮಾಡಿದರು.

ಸಂಸದರ ಸ್ಥಳೀಯ ಪ್ರವೇಶಾಭಿವೃದ್ಧಿ ಅನುದಾನದಡಿ 7 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಶುದ್ಧ ಕುಡಿಯುವ ನೀರಿನ ಘಟಕ ಇಂದಿನಿಂದ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗಿದೆ. ಮೃಗಾಲಯಕ್ಕೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಇದನ್ನು ನಿರ್ಮಾಣ ಮಾಡಲಾಗಿದ್ದು, 2 ಲೀಟರ್‌ಗೆ ಎರಡು ರೂಪಾಯಿ ಹಾಗೂ 20 ಲೀಟರ್‌ಗೆ 5 ರೂಪಾಯಿ ನಿಗದಿ ಮಾಡಲಾಗಿದೆ. ಎರಡು ರೂಪಾಯಿ ಅಥವಾ 5 ರೂಪಾಯಿ ನಾಣ್ಯ ಹಾಕಿದ ಕೂಡಲೇ ನೀರು ದೊರೆಯಲಿದೆ.

ಇದೇ ರೀತಿ ಇಟ್ಟಿಗೆಗೂಡಿನ ಸರ್ಕಾರಿ ಆಸ್ಪತ್ರೆ ಬಳಿ 10 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಕುವೆಂಪುನಗರದಲ್ಲಿ 7 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಈ ಸಂದರ್ಭದಲ್ಲಿ ಪ್ರತಾಪ್ ಸಿಂಹ ಉದ್ಘಾಟನೆ ಮಾಡಿದರು.

ಇಟ್ಟಿಗೆಗೂಡಿನಲ್ಲಿ ನಿರ್ಮಾಣ ಮಾಡುತ್ತಿರುವ ವೆಲ್ಲಾಳ ಅಸೋಸಿಯೇಷನ್‌ನವರ ಸಮುದಾಯ ಭವನಕ್ಕೆ ಸಂಸದರ ಪ್ರವೇಶಾಭಿವೃದ್ಧಿ ಅನುದಾನದಿಂದ 10 ಲಕ್ಷ ರೂಪಾಯಿ ನೀಡಲಾಗುತ್ತಿದ್ದು, ಇದರ ಗುದ್ದಲಿ ಪೂಜೆಯನ್ನು ಈ ವೇಳೆ ಪ್ರತಾಪ್ ಸಿಂಹ ನೆರವೇರಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಮುಖಂಡರಾದ ಗೋಕುಲ್ ಗೋವರ್ಧನ್, ಜೋಗಿ ಮಂಜು, ಪ್ರಭಾಕರ್ ಹಾಜರಿದ್ದರು. ಈ ಎಲ್ಲಾ ಕಾರ್ಯಕ್ರಮದ ನಂತರ ಪ್ರತಾಪ್ ಸಿಂಹ, ಮೈಸೂರಿನ ತಿ.ನರಸೀಪುರ ರಸ್ತೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಕೈಗೆತ್ತಿಕೊಂಡಿರುವ ರಸ್ತೆ ಅಗಲೀಕರಣ ಕಾಮಗಾರಿಯನ್ನು ವೀಕ್ಷಣೆ ಮಾಡಿದರು. ಇನ್ನು 15 ದಿನದಲ್ಲಿ ಈ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಪ್ರತಾಪ್ ಸಿಂಹ ತಿಳಿಸಿದರು.




ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದ ಬಳಿ ಸಂಸದರ ಪ್ರವೇಶಾಭಿವೃದ್ಧಿ ಅನುದಾನದಲ್ಲಿ ನಿರ್ಮಾಣ ಮಾಡಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ ಸೇರಿದಂತೆ ಇತರರನ್ನು ಚಿತ್ರದಲ್ಲಿ ಕಾಣಬಹುದು.



ಈ ಬಾರಿಯ ದಸರಾ ವಸ್ತುಪ್ರದರ್ಶನದಲ್ಲಿ ಅತ್ಯುತ್ತಮ ಮಳಿಗೆ ವಿಭಾಗದಲ್ಲಿ ಅಂಚೆ ಇಲಾಖೆಯ ಮಳಿಗೆ ಪ್ರಥಮ ಬಹುಮಾನ ಪಡೆದಿದೆ. ಕಾರ್ಯಕ್ರಮದಲ್ಲಿ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರಿಂದ ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಡಾ.ಏಂಜಲ್ ರಾಜ್ ಅವರು ಸ್ಮರಣಿಕೆ ಮತ್ತು ಪ್ರಮಾಣ ಪತ್ರವನ್ನು ಸ್ವೀಕರಿಸಿದರು.

## ಬೆಂಗಳೂರು ಟ್ರಾಫಿಕ್ ನಿಯಂತ್ರಣಕ್ಕೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಳವಡಿಕೆ



ಬೆಂಗಳೂರು, ಜ.13(ಕೆಎಂಶಿ)–ನಗರದಲ್ಲಿ ಟ್ರಾಫಿಕ್ ಸಮಸ್ಯೆ ನಿಯಂತ್ರಣಕ್ಕೆ ಅಂತಾರಾಷ್ಟ್ರೀಯ ಮಟ್ಟದ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗುವುದು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ತಿಳಿಸಿದ್ದಾರೆ.

'ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ–2024' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿನ ಪ್ರಮುಖ ನಗರಗಳಿಗೆ ಹೋಲಿಸಿದರೆ ಬೆಂಗಳೂರಿನ ಟ್ರಾಫಿಕ್ ಸಮಸ್ಯೆ ಕಡಿಮೆ ಇದೆ, ಕಮಾಂಡ್ ಸೆಂಟರ್‌ನ ಅತ್ಯಾಧುನಿಕ ತಂತ್ರಜ್ಞಾನ ಸೌಲಭ್ಯದ ಮೂಲಕ ಟ್ರಾಫಿಕ್ ನಿಯಂತ್ರಿಸಲಾಗುತ್ತಿದೆ, ಮತ್ತಷ್ಟು ಸುರಕ್ಷಿತ ಸಂಚಾರ ದೃಷ್ಟಿಯಿಂದ ಜಾಗತಿಕ ಮಟ್ಟದ ತಂತ್ರಜ್ಞಾನ ಬಳಸಲಾಗುವುದು ಎಂದರು.

ವಾಹನ ಚಾಲನೆ ವೇಳೆ ಸುರಕ್ಷತೆ ಜೊತೆಗೆ ಬೇರೆಯವರ ಪ್ರಾಣ ರಕ್ಷಣೆ ಹೊಣೆಯೂ ಚಾಲಕರ ಮೇಲಿರುತ್ತದೆ, ಟ್ರಾಫಿಕ್ ನಿಯಮಗಳ ಕಡ್ಡಾಯ ಪಾಲನೆಯಿಂದ ಅನಾಹುತಗಳನ್ನು ತಪ್ಪಿಸಬಹುದು.

2023ರಲ್ಲಿ 900 ಜನ ರಸ್ತೆ ಅಪಘಾತದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ, ಸಾಮಾಜಿಕ ಜಾಲತಾಣದ ಮೂಲಕ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಟ್ರಾಫಿಕ್ ನಿಯಮಗಳ ಜಾಗೃತಿ ಮೂಡಿಸಲಾಗುತ್ತಿದೆ. ದೇಶದಲ್ಲೇ ಮೊದಲ ಬಾರಿಗೆ ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟಲಿಜೆನ್ಸ್) ಮೂಲಕ ಟ್ರಾಫಿಕ್ ನಿಯಂತ್ರಿಸುವ "ಬೆಂಗಳೂರು ಟ್ರಾಫಿಕ್ ಇಂಜಿನ್"ಗೆ ಚಾಲನೆ ನೀಡಲಾಗಿದ್ದು, ಈ ತಂತ್ರಜ್ಞಾನವು ತುರ್ತುಸೇವಾ ವಾಹನಗಳ ಸಂಚಾರಕ್ಕೆ ಹೆಚ್ಚು ಅನುಕೂಲವಾಗಲಿದೆ ಎಂದರು.

## ಹೆಬ್ಬಾಳು ಹಿರಿಯ ನಾಗರಿಕರ ಸಂಘದಿಂದ 'ಸಂಗೀತ ಲಹರಿ' ಭಾವಪೂರ್ಣ ಕಾರ್ಯಕ್ರಮ



ಮೈಸೂರು, ಜ.13–ಮೈಸೂರಿನ ಹೆಬ್ಬಾಳಿನ 2ನೇ ಹಂತ (ಸಂಕ್ರಾಂತಿ ವೃತ್ತದ ಹತ್ತಿರ) ದಲ್ಲಿರುವ ಹಿರಿಯ ನಾಗರಿಕರ ಸೇವಾ ಸಮಿತಿ ಹಾಗೂ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಹಯೋಗದಲ್ಲಿ ಶ್ರೀ ನಾರಾಯಣಾಮೃತ ಪ್ರತಿಷ್ಠಾನದ ಸಾಧನಾ ಪ್ರಾಂಗಣದಲ್ಲಿ ಇತ್ತೀಚೆಗೆ ನೂತನ ವರ್ಷಾಚರಣೆ ಹಾಗೂ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ 'ಸಂಗೀತ ಲಹರಿ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಯಾಗಿ ಮೈಸೂರಿನ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಹಾಗೂ ಕರ್ನಾಟಕ ಸುಗಮ ಸಂಗೀತ ಪರಿಷತ್‌ನ ಅಧ್ಯಕ್ಷ ನಾಗರಾಜ ವಿ.ಭೈರಿ ಭಾಗವಹಿಸಿದ್ದರು. ಮೈಸೂರಿನ ಎಸ್‌ಜೆಸಿಇ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಹಾಗೂ ಗಾಯಕರಾದ ಪ್ರೊ.ಕೆ.ಎಸ್.ಮಂಜುನಾಥ್, ಕಾರ್ಯದರ್ಶಿ ಹೆಚ್.ಎಲ್.ಇಂದಿರೇಶ್, ಬಿ.ಎನ್.ಶ್ರೀಕಂಠಯ್ಯ, ಶ್ವೇತ ದಿನೇಶ್, ಗುರುದತ್ ಪ್ರೊ.ಕೆ.ಎಸ್.ಮಂಜುನಾಥ್, ಶೀಲಾದತ್, ಖಜಾಂಚಿ ಬಿ.ಚೆನ್ನ ಬಸವಯ್ಯ, ರೂಪ ರಘುನಾಥ್ ಸಂಘದ ಅಧ್ಯಕ್ಷ ಎ.ಎಸ್.ದೇವರಾಜು ಮತ್ತಿತರರು ಉಪಸ್ಥಿತರಿದ್ದರು.

## ಆಟೋ ಡಿಕ್ಕಿ; ಬೈಕ್ ಸವಾರ ಸಾವು

ಮೈಸೂರು, ಜ.13–ಬೈಕ್‌ಗೆ ಆಟೋ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ಮೈಸೂರಿನ ಮಹದೇವಪುರ ಮುಖ್ಯ ರಸ್ತೆಯ ಜಲಪುರಿ ಕ್ರಾಸ್ ಅರಳೀಮರದ ಬಳಿ ಸಂಭವಿಸಿದೆ. ಗೌಸಿಯಾನಗರ ನಿವಾಸಿ ಸೈಯ್ಯದ್ ಯಾಸಿನ್(22) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಬಜಾಜ್ ಡಿಸ್ಕವರಿ ಬೈಕ್‌ನಲ್ಲಿ (ಕೆಎ 45–ಕ್ಯೂ 6202) ಉದಯಗಿರಿ ಕಡೆಯಿಂದ ಫೋರಂ ಮಾಲ್ ಕಡೆಗೆ ಜಲಪುರಿ ಕ್ರಾಸ್ ಅರಳೀಮರದ ಬಳಿ ಹೋಗುತ್ತಿದ್ದಾಗ ಎದುರುಗಡೆಯಿಂದ ಬಂದ ಆಟೋ (ಕೆಎ 09–ಎ 6922) ಬೈಕ್‌ಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಸೈಯ್ಯದ್ ಯಾಸಿನ್ ಅವರನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮೈಸೂರಿಗೆ ಸುಸಜ್ಜಿತ ಕಲಾ ಗ್ಯಾಲರಿ ಅಗತ್ಯವಿದೆ

### ಮೈಸೂರು ಆರ್ಟ್ ಗ್ಯಾಲರಿ ಸಂಸ್ಥಾಪಕ ಅಧ್ಯಕ್ಷ ಎಲ್.ಶಿವಲಿಂಗಪ್ಪ ಅಭಿಮತ

ಮೈಸೂರು,ಜ.13(ಆರ್‌ಕೆ)–ಸಾಂಸ್ಕೃತಿಕ ರಾಜಧಾನಿ ಎನಿಸಿಕೊಂಡಿರುವ ಮೈಸೂರು ನಗರಕ್ಕೆ ಒಂದು ಸುಸಜ್ಜಿತ ಕಲಾ ಗ್ಯಾಲರಿಯ ಅಗತ್ಯವಿದೆ ಎಂದು ಮೈಸೂರು ಆರ್ಟ್ ಗ್ಯಾಲರಿ ಸಂಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಇಂದು ಏರ್ಪಡಿಸಿದ್ದ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಿಕಾ ಛಾಯಾಗ್ರಾಹಕ ಅನುರಾಗ್ ಬಸವರಾಜ್ ಅವರನ್ನು ತಿಂಗಳ ಸಾಧಕರು ಶೀರ್ಷಿಕೆಯಡಿ ಅಭಿನಂದಿಸಿ ಅವರು ಮಾತನಾಡುತ್ತಿದ್ದರು. ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡ, ಕನ್ನಡ ಸಾಹಿತ್ಯ ಕಲಾ ಕೂಟ, ಕದಂಬ ರಂಗ ವೇದಿಕೆ ಹಾಗೂ ಸ್ನೇಹ ಸಿಂಚನ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅವರು, ಕಲಾಮಂದಿರದ ಸುಚಿತ್ರ ಕಲಾ ಗ್ಯಾಲರಿ ಇದ್ದರೂ ಕಲಾವಿದರ ಚಿತ್ರ ಪ್ರದರ್ಶಿಸಲು ಸೂಕ್ತ ವ್ಯವಸ್ಥೆ ಇಲ್ಲ ಎಂದರು.



ಸಂವಾದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಿಕಾ ಛಾಯಾಗ್ರಾಹಕ ಅನುರಾಗ್ ಬಸವರಾಜ್ ಅವರನ್ನು ತಿಂಗಳ ಸಾಧಕರು ಶೀರ್ಷಿಕೆಯಡಿ ಅಭಿನಂದಿಸಿದರು.

ಸುಚಿತ್ರ ಆರ್ಟ್ ಗ್ಯಾಲರಿಯನ್ನು ನವೀಕರಿಸಬಹುದು ಅಥವಾ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡಿರುವುದರಿಂದ ಕೆ.ಆರ್. ಆಸ್ಪತ್ರೆ ಎದುರು ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾವಾ ಕಾಲೇಜಿನ ಹಳೇ ಪಾರಂಪರಿಕ ಕಟ್ಟಡದಲ್ಲಿ ಸುಸಜ್ಜಿತ ಕಲಾ ಗ್ಯಾಲರಿ ಮಾಡಿ ಕಲಾ ಪ್ರದರ್ಶನಕ್ಕೆ ಬಳಸಬಹುದು. ಆದರೆ, ಸರ್ಕಾರ ಮೈಸೂರಂತಹ ನಗರದಲ್ಲಿ ಒಂದು ಸುಸಜ್ಜಿತ ಕಲಾ ಗ್ಯಾಲರಿ ಸೌಲಭ್ಯ ಒದಗಿಸದಿರುವುದು ದುರಾದೃಷ್ಟಕರ ಎಂದು ಕಲಾವಿದ ಶಿವಲಿಂಗಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಎಲೆಮರೆ ಕಾಯಿಯಂತಿರುವ ಸಾಹಿತಿಗಳು, ಕಲಾವಿದರು ಹಾಗೂ ವಿವಿಧ ಕ್ಷೇತ್ರದ ಸಾಧಕರನ್ನು ಗುರ್ತಿಸಿ ಸನ್ಮಾನಿಸುತ್ತಿರುವ ಆರ್ಟ್ ಗ್ಯಾಲರಿಯ ಸೇವೆ ಶ್ಲಾಘನೀಯ. ತಮ್ಮ ಮನೆಯ ಒಂದು ಭಾಗವನ್ನೇ ಕಲಾ ಸೇವೆಗೆ ಮುಡುಪಾಗಿಟ್ಟಿರುವ ಶಿವಲಿಂಗಪ್ಪ ಅವರ ಕಾರ್ಯ ಪ್ರಶಂಸನೀಯ ಎಂದರು.

ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಹಿರಿಯ ಪತ್ರಿಕಾ ಛಾಯಾಗ್ರಾಹಕ ಪ್ರಗತಿ ಗೋಪಾಲಕೃಷ್ಣ, ಪತ್ರಕರ್ತ ದೊಡ್ಡನಹುಂಡಿ ರಾಜಣ್ಣ, ಹಿರಿಯ ಕನ್ನಡ ಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಮೈಸೂರು ಆರ್ಟ್ ಗ್ಯಾಲರಿ ಕಾರ್ಯದರ್ಶಿ ಡಾ. ಜಮುನಾ ರಾಣಿ ಮಿರ್ಲೆ, ಸಂಚಾಲಕ ಶ್ರೀಕಂಠಮೂರ್ತಿ, ಕದಂಬ ರಂಗ ವೇದಿಕೆಯ ರಾಜಶೇಖರ್ ಕದಂಬ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದೇ ವೇಳೆ ಅನುರಾಗ್ ಬಸವರಾಜ್ ಅವರು ತೆಗೆದಿರುವ ಅಪರೂಪದ ವನ್ಯಜೀವಿ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿತ್ತು.

## ಮೋಡವಿದ್ದರೂ ಮಳೆ ಅನುಮಾನ

ಮೈಸೂರು, ಜ.13(ಎಸ್‌ಬಿಡಿ)– ಮೋಡ ಕವಿದ ವಾತಾವರಣವಿದ್ದರೂ ನಾಲ್ಕೈದು ದಿನಗಳ ಕಾಲ ಮಳೆ ಸಾಧ್ಯತೆ ಇಲ್ಲ ಎಂದು ಹವಾಮಾನ ವರದಿ ತಿಳಿಸಿದೆ.

ಭಾರತೀಯ ಹವಾಮಾನ ಇಲಾಖೆ ಪ್ರಕಾರ ಮೈಸೂರು, ಮಂಡ್ಯ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಜ.17ರವರೆಗೆ ಮೋಡ ಕವಿದ ವಾತಾವರಣವಿದ್ದರೂ ಮಳೆಯಾಗುವ ಸಾಧ್ಯತೆ ಇಲ್ಲ. ಹಾಗಾಗಿ ರೈತರು ಬೆಳೆಗಳ ಕಟಾವು ಹಾಗೂ ಒಕ್ಕಣೆ ಕಾರ್ಯಗಳನ್ನು ಮುಂದುವರೆಸಬಹುದು. ಭತ್ತದ ಕಟಾವಿನ ನಂತರ ಭೂಮಿಯಲ್ಲಿ ಕಡಿಮೆ ತೇವಾಂಶ ವಿದ್ದು, ಯಾವುದೇ ಬೆಳೆ ಬೆಳೆಯಲಾಗದ ಸ್ಥಿತಿಯಲ್ಲಿದ್ದರೆ, ಜಮೀನನ್ನು ಹಾಗೆಯೇ ಬಿಡದೆ ಮಾಗಿ ಉಳುಮೆ ಮಾಡಿ. ಇದರಿಂದ ಮುಂದಿನ ಬೆಳೆಗೆ ರೋಗ ಹಾಗೂ ಕೀಟಗಳ ಬಾಧೆ ಕಡಿಮೆಯಾಗುವುದರ ಜೊತೆಗೆ ಮಳೆಯ ನೀರು ಭೂಮಿಯಲ್ಲಿ ಇಂಗಲು ಸಹಕಾರಿಯಾಗುತ್ತದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.




ಮೈಸೂರಿನ ಮಾತೃ ಮಂಡಲಿ ವಿದ್ಯಾಸಂಸ್ಥೆಯ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಶುಕ್ರವಾರ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ವಿದ್ಯಾಸಂಸ್ಥೆ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್, ಮುಖ್ಯಶಿಕ್ಷಕಿ ಅನಿತಾ ಮತ್ತಿತರರು ಉಪಸ್ಥಿತರಿದ್ದರು.






ಕೊಡಗು ಪೊಲೀಸ್ ಇಲಾಖೆ ಮತ್ತು ವಿರಾಜಪೇಟೆ ನಗರ ಪೊಲೀಸ್ ಠಾಣೆ ವತಿಯಿಂದ ಮಾದಕ ವಸ್ತುಗಳ ಬಳಕೆಯ ಬಗ್ಗೆ ವಿರಾಜಪೇಟೆಯಲ್ಲಿ ಹಮ್ಮಿಕೊಂಡಿದ್ದ ಜನ ಜಾಗೃತಿ ಜಾಥಾಕ್ಕೆ ಶಾಸಕ ಪೊನ್ನಣ್ಣ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

# ವಿರಾಜಪೇಟೆಯಲ್ಲಿ ಜಾಗೃತಿ ಮೂಡಿಸಿದ ಮಾದಕ ವಸ್ತು ವಿರೋಧಿ ಜಾಥಾ

ವಿರಾಜಪೇಟೆ, ಜ.13– ಕೊಡಗು ಪೊಲೀಸ್ ಇಲಾಖೆ ಮತ್ತು ವಿರಾಜಪೇಟೆ ನಗರ ಪೊಲೀಸ್ ಠಾಣೆ ವತಿಯಿಂದ ಮಾದಕ ವಸ್ತುಗಳ ಬಳಕೆಯ ಬಗ್ಗೆ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಜನ ಜಾಗೃತಿ ಜಾಥಾಕ್ಕೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ತಾಲೂಕು ಮೈದಾನದಿಂದ ಹೊರಟ ಜಾಥಾ ನಗರದ ಗಡಿಯಾರ ಕಂಬದ ಬಳಿಯಿಂದ ಮುಖ್ಯ ರಸ್ತೆಯಲ್ಲಿ ಸಾಗಿ ಖಾಸಗಿ ಬಸ್ ನಿಲ್ದಾಣ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ದೊಡ್ಡಟ್ಟಿ ಚೌಕಿ ಮೂಲಕ ತೆಲುಗರ ಬೀದಿ, ದಕ್ಖನಿ ಮೊಹಲ್ಲಾ, ದೇವಾಂಗ ಬೀದಿ, ಶಾಂತ ಚಿತ್ರಮಂದಿರ ಮಾರ್ಗವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ತಾಲೂಕು ಮೈದಾನದಲ್ಲಿ ಬಂದು ಸೇರಿತು. ನಶೆ ಮುಕ್ತ ಕೊಡಗು ಜಿಲ್ಲೆ ಅಭಿಯಾನದ ಅಂಗವಾಗಿ ನಡೆದ ಜನ ಜಾಗೃತಿ ಜಾಥಾದಲ್ಲಿ ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ನಾಗರಿಕರು ಭಾಗವಹಿಸಿ ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಘೋಷಣೆ ಕೂಗಿ ಅರಿವು ಮೂಡಿಸಿದರು.

ಜಾಥಾದಲ್ಲಿ ಭಾಗವಹಿಸಿದ್ದ ಶಾಸಕ ಎ.ಎಸ್. ಪೊನ್ನಣ್ಣ ಅವರು ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ವ್ಯಸನ ಮುಕ್ತ ಸಮಾಜ ಮಾದಕ ವಸ್ತು ಬಳಕೆ ನಿರ್ಮೂಲನೆ ಬಗ್ಗೆ ಪ್ರತಿಜ್ಞಾವಿಧಿ ಬೋಧಿಸಿದರು. ಬಳಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಸಮಾಜದ ಪರಿವರ್ತನೆಗೆ ಪೊಲೀಸ್ ಇಲಾಖೆ ಸಕ್ರೀಯವಾಗಿ ಸ್ಪಂದಿಸುವ ಮೂಲಕ ಜನ ಮೆಚ್ಚುವಂತ ಉತ್ತಮವಾದ ಕಾರ್ಯವನ್ನು ನಡೆಸುತ್ತಿದೆ. ವಿದ್ಯಾರ್ಥಿಗಳು, ಯುವಕರು ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡಾಗ ಮಾತ್ರ ಮಾದಕ ವಸ್ತುಗಳ ಬಳಕೆಯಿಂದ ದೂರ ಉಳಿಯಬಹುದು. ಯಾವುದೇ ಕೆಲಸ ಮಾಡದೇ ಇರುವ ಹೇಡಿಗಳು ಮಾದಕ ವಸ್ತು ಸೇವನೆ ಮಾಡುತ್ತಾರೆ ಎಂದರು.

ಬದಲಾದ ಜೀವನ ಶೈಲಿಯಿಂದ ಯುವಕರಲ್ಲಿ ಮಾದಕ ವಸ್ತು ವ್ಯಸನಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಮಾದಕ ವಸ್ತುಗಳಿಗೆ ದಾಸರಾಗುವರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಯುವ ಪೀಳಿಗೆಯನ್ನು ಆವರಿಸಿರುವ ಮಾದಕ ವಸ್ತುಗಳಿಂದ ಮಾನಸಿಕ ಆರೋಗ್ಯವನ್ನು ಹಾಳುಮಾಡಿಕೊಂಡು ಅಪಾಯಕ್ಕೆ ಸಿಲುಕುತ್ತಿದ್ದಾರೆ. ಅದರಿಂದ ಮಾದಕ ವಸ್ತು ಸೇವನೆ ಮಾರಾಟ ಸೇರಿದಂತೆ ಇತರ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವವರಿಗೆ ಸಮಾಜ ಘಾತುಕ ವಿಚಾರಗಳಿಗೆ ನ್ಯಾಯಾಲಯ ಹೆಚ್ಚಿನ ಶಿಕ್ಷೆ ನೀಡುವಂತಾಗಬೇಕು ಎಂದರು.

ಕೊಡಗು ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಮಾತನಾಡಿ, ಮಾದಕ ವಸ್ತುಗಳ ಸೇವನೆ ಯುವ ಸಮಾಜಕ್ಕೆ ಅಂಟಿದ ಪಿಡುಗು. ಮಾದಕ ವಸ್ತುಗಳ ಸೇವನೆ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಸೇವನೆಯಿಂದ ಜ್ಞಾಪಕ ಶಕ್ತಿ, ಮಾನಸಿಕ ಗೊಂದಲ ಉಂಟಾಗಿ ಬದುಕನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅದರಿಂದ ಮಾದಕ ವಸ್ತು ಸಂಗ್ರಹ ಮಾರಾಟ ಮಾಡುವವರಿಗೆ ಕಠಿಣ ಶಿಕ್ಷೆಯಾಗಲಿದೆ, ಮಾದಕವಸ್ತು ಮಾರಾಟದ ಬಗ್ಗೆ ನಾಗರಿಕರು ಮಾಹಿತಿ ನೀಡಿದರೆ ಮಾರಾಟ ಜಾಲವನ್ನು ಭೇದಿಸಲು ಇಲಾಖೆಗೆ ಸಹಕಾರವಾಗುತ್ತದೆ ಎಂದರು.

ಜಾಥಾ ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೆ.ಎಸ್. ಸುಂದರ ರಾಜ್, ವಿರಾಜಪೇಟೆ ಡಿವೈಎಸ್‌ಪಿ ಮೋಹನ್ ಕುಮಾರ್, ವೃತ್ತ ನಿರೀಕ್ಷಕ ಬಿ.ಎಸ್. ಶಿವರುದ್ರ, ನಗರ ಮತ್ತು ಗ್ರಾಮಾಂತರ ಠಾಣಾಧಿಕಾರಿ ರವಿಂದ್ರ ಮತ್ತು ಮಂಜುನಾಥ್, ಪೊಲೀಸ್ ಸಿಬ್ಬಂದಿಗಳು, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್ ಹಾಗೂ ಸದಸ್ಯರು, ಕಾಂಚನ ಎ.ಎಸ್.ಪೊನ್ನಣ್ಣ, ಲಯನ್ಸ್ ಸಂಸ್ಥೆ ಪದಾಧಿಕಾರಿಗಳು, ರೋಟರಿ, ಪ್ರಗತಿ, ಎಸ್‌ಎಂಎಸ್ ಶಾಲೆಗಳ ವಿದ್ಯಾರ್ಥಿಗಳು ಹಾಗೂ ಸಂತ ಅನ್ನಮ್ಮ ಕಾಲೇಜು, ಕಾವೇರಿ ಕಾಲೇಜು, ಜೂನಿಯರ್ ಕಾಲೇಜು, ಲಿಟಲ್ ಸ್ಕಾಲರ್ಸ್ ಅಕಾಡೆಮಿ, ಕೊಡಗು ದಂತ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಮ್ಯಾಗ್ನೋಲಿಯಾ ರೆಸಾರ್ಟ್, ನಿಸರ್ಗ ಅಸೋಸಿಯೇಷನ್ ತಂಡ ಸೇರಿದಂತೆ ಹೆಚ್ಚಿನ ಜನರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ದ್ವೇಷ ಬಿಟ್ಟು ದೇಶ ಕಟ್ಟು ಪರಿಕಲ್ಪನೆಯೊಂದಿಗೆ ಮಡಿಕೇರಿ ಮುಸ್ಲಿಂ ಒಕ್ಕೂಟ ರಚನೆ



ಮಡಿಕೇರಿ,ಜ.13– 'ದ್ವೇಷ ಬಿಟ್ಟು ದೇಶ ಕಟ್ಟು' ಪರಕಲ್ಪನೆಯೊಂದಿಗೆ ಮಡಿಕೇರಿ ಮುಸ್ಲಿಂ ಒಕ್ಕೂಟ ರಚನೆಗೊಂಡಿದೆ. ಒಕ್ಕೂಟದ ಸಂಚಾಲಕರಾಗಿ ಲಿಯಾಖತ್ ಅಲಿ ಆಯ್ಕೆಯಾಗಿದ್ದಾರೆ. ಒಕ್ಕೂಟ ರಚನೆಯಾದ ಕುರಿತು ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಲಿಯಾಖತ್ ಅಲಿ, ಭಾವೈಕ್ಯತೆಯ ಬೀಡು ಕೊಡಗು ಜಿಲ್ಲೆಯಲ್ಲಿ ಎಲ್ಲರೂ ಸೌಹಾರ್ದತೆಯಿಂದ ಜೀವನ ಸಾಗಿಸಬೇಕು ಎನ್ನುವುದು ಒಕ್ಕೂಟದ ಉದ್ದೇಶ ಎಂದರು.

ಅಲ್ಪಸಂಖ್ಯಾತ ಸಮುದಾಯ ಶೈಕ್ಷಣಿಕವಾಗಿ ಹಿಂದುಳಿದಿದೆ, ಆದ್ದರಿಂದ ಒಕ್ಕೂಟ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಲಿದೆ. ರಾಜಕೀಯ ರಹಿತವಾದ ಈ ಸಂಘಟನೆ ವಿಚಾರವಂತಿಕೆಯಿಂದ ಕಾರ್ಯನಿರ್ವಹಿಸಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕಲ್ಲಡ್ಕ ಪ್ರಭಾಕರ್ ಭಟ್ ಅವರು ಮುಸ್ಲಿಂ ಮಹಿಳೆಯರ ಬಗ್ಗೆ ನೀಡಿರುವ ಹೇಳಿಕೆ ನಮಗೆ ನೋವುಂಟು ಮಾಡಿದೆ. ಆದರೆ ಶಾಂತಿಯುತ ಬದುಕಿಗೆ ಪೂರಕವಾಗಿ ನಡೆದುಕೊಳ್ಳುವುದೇ ಒಕ್ಕೂಟದ ಗುರಿಯಾಗಿದ್ದು, ಈ ರೀತಿಯ ಹೇಳಿಕೆಗಳಿಗೆ ಪ್ರತಿ ಹೇಳಿಕೆ ನೀಡುವುದು ನಮ್ಮ ಉದ್ದೇಶವಲ್ಲ ಎಂದು ಸ್ಪಷ್ಟಪಡಿಸಿದರು. ರಾಜಕೀಯ ರಹಿತವಾದ ಈ ಸಂಘಟನೆ ಅಲ್ಪಸಂಖ್ಯಾತರು ಮಾತ್ರವಲ್ಲದೆ ಎಲ್ಲಾ ಅಸಹಾಯಕರಿಗೂ ಸಹಾಯ ಮಾಡಲಿದೆ. ಶಿಕ್ಷಣ ಮತ್ತು ಸರ್ಕಾರದ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಲಿದೆ ಎಂದರು.

ಒಕ್ಕೂಟದ ಪ್ರಮುಖ ಎಸ್.ಐ.ಮುನೀರ್ ಅಹಮ್ಮದ್ ಮಾತನಾಡಿ 'ದ್ವೇಷ ಬಿಟ್ಟು ದೇಶ ಕಟ್ಟು' ಎನ್ನುವುದನ್ನು ಒಕ್ಕೂಟ ಪ್ರತಿಪಾದಿಸಲಿದೆ. ಇದರಲ್ಲಿರುವ ಪದಾಧಿಕಾರಿಗಳು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಲಿದ್ದಾರೆ ಎಂದರು.

ಅಲ್ಪಸಂಖ್ಯಾತರು ಮಾತ್ರವಲ್ಲದೆ ಎಲ್ಲಾ ಜನಾಂಗದ ಬಡವರಿಗೂ ಸೌಲಭ್ಯ ದೊರೆಯುವಂತೆ ಒಕ್ಕೂಟ ನೋಡಿಕೊಳ್ಳಲಿದೆ. ಮಾಹಿತಿಯ ಕೊರತೆಯಿಂದ ಸರ್ಕಾರಿ ಸೌಲಭ್ಯದಿಂದ ವಂಚಿತರಾಗುವವರನ್ನು ಗುರುತಿಸಿ ಸೌಲಭ್ಯ ತಲುಪಿಸುವ ಕೆಲಸ ಮಾಡಲಾಗುವುದು. ಸಮಾಜದ ಸ್ವಾಸ್ಥ್ಯ ಕೆಡದಂತೆ ಒಕ್ಕೂಟ ಎಚ್ಚರಿಕೆಯನ್ನು ವಹಿಸಲಿದೆ. ಚುನಾವಣೆ ಸಂದರ್ಭ ಕೆಲವು ವ್ಯಕ್ತಿಗಳು ನೀಡುವ ಹೇಳಿಕೆಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲೂ ಚಿಂತಿಸಲಾಗುವುದು. ಮುಸ್ಲಿಂ ಮಹಿಳೆಯರು ಮಾತ್ರವಲ್ಲ, ಯಾವುದೇ ಜನಾಂಗದ ಮಹಿಳೆಯರನ್ನು ಕೂಡ ಯಾರೂ ಅವಹೇಳನ ಮಾಡಬಾರದು ಎಂದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಪ್ರಮುಖರಾದ ಸಹ ಸಂಚಾಲಕ ಖಲೀಲ್ ಬಾಷಾ, ಜಹೀರ್ ಅಹಮ್ಮದ್, ಮಹಮ್ಮದ್ ಯಾಕುಬ್ ಹಾಗೂ ರೌವೂಫ್ ಎಂ.ಎನ್ ಉಪಸ್ಥಿತರಿದ್ದರು.

# ಬೇಸಿಗೆಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಬಾರದು

## ಟಾಸ್ಕ್ ಫೋರ್ಸ್ ಸಭೆಯಲ್ಲಿ ಸಿಎಂ ಕಾನೂನು ಸಲಹೆಗಾರ ಪೊನ್ನಣ್ಣ ಅಧಿಕಾರಿಗಳಿಗೆ ಸೂಚನೆ

**ಮಡಿಕೇರಿ:** ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಟಾಸ್ಕ್ ಫೋರ್ಸ್ ಸಭೆಯು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರ ಅಧ್ಯಕ್ಷತೆಯಲ್ಲಿ ಪೊನ್ನಂಪೇಟೆ ತಾಲೂಕು ಪಂಚಾಯ್ತಿಯ ಸಾಮರ್ಥ್ಯ ಸೌಧದಲ್ಲಿ ನಡೆಯಿತು.


ಸಭೆಯಲ್ಲಿ ಮಾತನಾಡಿದ ಶಾಸಕ ಎ.ಎಸ್.ಪೊನ್ನಣ್ಣ ಮುಂದೆ ಬೇಸಿಗೆ ಎದುರಾಗುತ್ತಿದ್ದು, ಕುಡಿಯುವ ನೀರಿನ ಪೂರೈಕೆಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ಗಮನ ಹರಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಜಲ ಜೀವನ್ ಮಿಷನ್ ಯೋಜನೆಯಡಿ ಬಾಕಿ ಇರುವ ಎಲ್ಲಾ ಕಾಮಗಾರಿಗಳು ತುರ್ತಾಗಿ ಪೂರ್ಣಗೊಳ್ಳಬೇಕು. ಯಾವುದೇ ಸಾರ್ವಜನಿಕ ದೂರುಗಳು ಬಾರದ ರೀತಿಯಲ್ಲಿ ಕ್ರಮವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಇದ್ದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಪಟ್ಟಿ ಮಾಡಿ ನೀಡುವಂತೆ ಶಾಸಕರು ಸೂಚಿಸಿದರು. ಬೋರ್‌ವೆಲ್, ಮೋಟಾರ್ ಪಂಪ್, ವಿದ್ಯುತ್, ನೀರಿನ ಟ್ಯಾಂಕರ್ ಹಾಗೂ ಇನ್ನಿತರ ಸಮಸ್ಯೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ವಿರಾಜಪೇಟೆ ತಹಶೀಲ್ದಾರ್ ರಾಮಚಂದ್ರ, ಪ್ರವೀಣ್ ಕುಮಾರ್, ತಾಪಂ ಕಾರ್ಯನಿರ್ವಹಣಾಧಿಕಾರಿ ಕೆ.ಸಿ.ಅಪ್ಪಣ್ಣ, ಶೇಖರ್, ವಿವಿಧ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

## ಜ.25, ಕೊಡಗು ಜಿಲ್ಲೆಗೆ ಸಿಎಂ ಸಿದ್ದರಾಮಯ್ಯ



**ಮಡಿಕೇರಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಜ.25 ರಂದು ಕೊಡಗು ಜಿಲ್ಲೆಗೆ ಭೇಟಿ ನೀಡಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ತಿಳಿಸಿದ್ದಾರೆ. ಮುಖ್ಯಮಂತ್ರಿಗಳಾದ ಬಳಿಕ ಇದೇ ಮೊದಲ ಬಾರಿಗೆ ಸಿದ್ದರಾಮಯ್ಯ ಅವರು ಕೊಡಗು ಜಿಲ್ಲೆಗೆ ಆಗಮಿಸುತ್ತಿದ್ದಾರೆ. ಜ.25 ರಂದು ಸಿಎಂ ಮಡಿಕೇರಿ ಮತ್ತು ವಿರಾಜಪೇಟೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

# ಅಭಿವೃದ್ಧಿ ಕೆಲಸಗಳಲ್ಲಿ ರಾಜಕೀಯ ಮಾಡುವುದಿಲ್ಲ

**ನಾಪೋಕ್ಲು:** ಅಭಿವೃದ್ಧಿ ಕೆಲಸಗಳಲ್ಲಿ ರಾಜಕೀಯ ಮಾಡುವುದಿಲ್ಲ, ಅಭಿವೃದ್ಧಿ ಕೆಲಸಗಳು ಜನರಿಗೋಸ್ಕರ ಹೊರತು ಯಾವುದೇ ಪಕ್ಷಗಳಿಗೆ ಅಥವಾ ಯಾವುದೇ ಪಕ್ಷದ ನಾಯಕರಿಗಾಗಿ ಅಲ್ಲ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ಶಾಸಕ ಶಾಸಕ ಎ.ಎಸ್. ಪೊನ್ನಣ್ಣ ತಿಳಿಸಿದರು.

ಬಲ್ಲಮಾವಟಿ ಗ್ರಾಮ ಪಂಚಾಯಿತಿಗೆ ವ್ಯಾಪ್ತಿಯ ಕಕ್ಕಬೆ–ನೆಲಜಿ ಮರು ಡಾಂಬರೀಕರಣಗೊಂಡ ರಸ್ತೆಯನ್ನು ಉದ್ಘಾಟಿಸಿ ಮಾತನಾಡಿದರು. ನಿಗದಿತ ಅವಧಿಯಲ್ಲಿ ಗುಣಮಟ್ಟದ ಕಾಮ ಗಾರಿಯನ್ನು ನಿರ್ವಹಿಸಿ ಪೂರ್ಣಗೊಂಡಿದೆ. ಇದೇ ರೀತಿ ಅಭಿವೃದ್ಧಿ ಕಾರ್ಯಗಳನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು. ಎರಡು ಮೂರು ತಿಂಗಳಲ್ಲಿ ಆರಂಭಿಸಿದ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿವೆ ಎಂದರು.

ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಶಾಸಕರು ನಾಪೋಕ್ಲು–ಭಾಗಮಂಡಲ ರಸ್ತೆಯ ಹಳೆ ತಾಲೂಕಿನಿಂದ ಪುಲಿಕೋಟು ವರೆಗಿನ ರಸ್ತೆ ದುರಸ್ತಿ ಕಾರ್ಯ ತಿಂಗಳ ಒಳಗೆ ಸರಿಪಡಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಸ್ಥಳದಲ್ಲಿದ್ದ ಲೋಕೋಪಯೋಗಿ ಇಲಾಖೆ ಸಹಾಯಕ ಅಭಿಯಂತರ ಸತೀಶ್ ಅವರಿಗೆ ಆದೇಶಿಸಿದರು.

# ಹನೂರಲ್ಲಿ ಜನತಾ ದರ್ಶನ: ದೂರುಗಳ ಸುರಿಮಳೆ

## ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ, ಅಧಿಕಾರಿಗಳಿಂದ ಸಮಸ್ಯೆ ಪರಿಹಾರದ ಭರವಸೆ



ಹನೂರಿನ ಡಾ. ಅಂಬೇಡ್ಕರ್ ಸಮುದಾಯ ಭವನದಲ್ಲಿ ತಾಲೂಕು ಮಟ್ಟದ ಜನತಾ ದರ್ಶನ ನಡೆಯಿತು

**ಹನೂರು:** ಶಾಸಕ ಎಂ.ಆರ್.ಮಂಜುನಾಥ್ ಹಾಗೂ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ನೇತೃತ್ವದಲ್ಲಿ ಶನಿವಾರ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ ಜನತಾ ದರ್ಶನದಲ್ಲಿ ಸಾರ್ವಜನಿಕರಿಂದ ಹಲವು ದೂರುಗಳು ಸಲ್ಲಿಕೆಯಾದವು.

ಜನತಾ ದರ್ಶನದಲ್ಲಿ ಮೊದಲಿಗೆ ಬೂದುಬಾಳು ನಿವಾಸಿ ಶ್ರೀನಿವಾಸ್ ಮಾತನಾಡಿ, ಕಳೆದ 10 ವರ್ಷದಿಂದ ಜಮೀನಿನ ಖಾತೆ ಮಾಡಿಕೊಡಲು ಅಧಿಕಾರಿಗಳು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ದೂರಿ ಖಾತೆ ಮಾಡಿಸಿಕೊಡಬೇಕು ಎಂದು ಮನವಿ ಸಲ್ಲಿಸಿದರು. ಈ ಬಗ್ಗೆ ಪರಿಶೀಲಿಸಿದ ಜಿಲ್ಲಾಧಿಕಾರಿಗಳು ಮೇಲ್ನೋಟಕ್ಕೆ ಜಮೀನಿನ ಖಾತೆ ಮಾಡಿಕೊಡಲು ಅವಕಾಶವಿದ್ದು, ಇನ್ನು 15 ದಿನದೊಳಗೆ ಸಮಸ್ಯೆ ಇತ್ಯರ್ಥಗೊಳಿಸಲು ಕ್ರಮ ವಹಿಸಬೇಕು ಎಂದು ತಹಸೀಲ್ದಾರ್‌ಗೆ ಸೂಚಿಸಿದರು.

ಚಂಗಡಿ ಕರಿಯಪ್ಪ ಮಾತನಾಡಿ, ಚಂಗಡಿ ಪುನರ್ವಸತಿ ಸೌಲಭ್ಯ ಕಲ್ಪಿಸಬೇಕು, ಕಾಡು ಪ್ರಾಣಿಗಳ ಹಾವಳಿ ತಡೆಗಟ್ಟಬೇಕು, ವಿದ್ಯುತ್, ಕುಡಿಯುವ ನೀರು, ಸಾರಿಗೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಬೇಕು ಎಂದು ಮನವಿ ಮಾಡಿದರು. ಈ ಬಗ್ಗೆ ಉತ್ತರಿಸಿದ ಜಿಲ್ಲಾಧಿಕಾರಿಗಳು ಚಂಗಡಿ ಪುನರ್ವಸತಿ ಸರ್ಕಾರದ ಹಂತದಲ್ಲಿದ್ದು, ಜನವನ ಸಾರಿಗೆ ವ್ಯವಸ್ಥೆ ಮತ್ತೆ ಪ್ರಾರಂಭಿಸಲಾಗಿದೆ ಎಂದರು.

ಶಾಸಕ ಮಂಜುನಾಥ್ ಮಾತನಾಡಿ, ಚಂಗಡಿ ಪುನರ್ವಸತಿ ಸೇರಿದಂತೆ ಕಾಡಂಚಿನ ಗ್ರಾಮಗಳಿಗೆ ವಿದ್ಯುತ್, ರಸ್ತೆ ಸೌಲಭ್ಯ ಕಲ್ಪಿಸಲು ಮುಖ್ಯಮಂತ್ರಿಗಳು ಹಾಗೂ ಹಿರಿಯ ಅಧಿಕಾರಿಗಳು ಅನುಮೋದನೆ ನೀಡಿದ್ದಾರೆ. ತಮಿಳುನಾಡಿನ ಜಾನುವಾರುಗಳಿಗೆ ಇಲ್ಲಿ ಅವಕಾಶ ನೀಡದಿರಲು ಪಶು ಇಲಾಖೆ ಗುರುತು ಪತ್ತೆ ಹಚ್ಚುವ ಮುದ್ರೆಗಳನ್ನು ಜಾನುವಾರುಗಳಿಗೆ ಅಳವಡಿಸಬೇಕು ಎಂದರು.

**ಸ್ಥಳದಲ್ಲೇ ಪರಿಹಾರ ನೀಡಿದ ಡಿಸಿ:** ಜನತಾ ದರ್ಶನದಲ್ಲಿ ಮಹಿಳೆಯೋರ್ವರು ಗೃಹಲಕ್ಷ್ಮೀ ಹಣ ಬಂದಿಲ್ಲ ಎಂದು ಅಳಲು ತೋಡಿಕೊಳ್ಳುತ್ತಿದ್ದಂತೆ ಸಿಡಿಪಿಓ ಕರೆಸಿಕೊಂಡ ಜಿಲ್ಲಾಧಿಕಾರಿಗಳು ಇವರಿಗೆ ಇಲ್ಲಿಯೇ ಅನುಕೂಲ ದೊರೆಯಲು ಕ್ರಮವಹಿಸಿ ಎಂದರು.

ಮತ್ತೋರ್ವ ಮಹಿಳೆ ತ್ರಿಚಕ್ರ ವಾಹನ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿ ಕರೆಸಿ ಆದ್ಯತೆ ಮೇರೆಗೆ ಸೌಕರ್ಯ ಒದಗಿಸಿ ಎಂದು ಒತ್ತಾಯಿಸಿದರು.

ಮಂಗಲ ಗ್ರಾಮದ ವಸಂತ ಮಾತನಾಡಿ, ಗ್ರಾಮದಲ್ಲಿ ಮಹಿಳಾ ಆರೋಗ್ಯ ಕೇಂದ್ರಕ್ಕೆ ಕಟ್ಟಡ ನಿರ್ಮಾಣ ಮಾಡಬೇಕು. ಮಂಗಲ ಗ್ರಾಮದ ಮೂಲಕ ಹಾದು ಹೋಗುವ ಸರ್ಕಾರಿ ಬಸ್‌ಗಳು ಗ್ರಾಮದ ಬಸ್ ನಿಲ್ದಾಣದಲ್ಲಿ ನಿಲ್ಲದೆ ಹೋಗುತ್ತಿದ್ದು ವಿದ್ಯಾರ್ಥಿಗಳು, ರೇಷ್ಮೆ ಮಾರಾಟಗಾರರು ಹಾಗೂ ಸಾರ್ವಜನಿಕರಿಗಾಗಿ ಬಸ್ ನಿಲುಗಡೆಯಾಗಬೇಕು. ಎಟಿಎಂ ಕೇಂದ್ರ ತೆರೆಯಬೇಕೆಂದು ಮನವಿ ಮಾಡಿದರು.

ಇದೇ ರೀತಿ ಪಶು, ವಿದ್ಯುತ್, ಕೃಷಿ, ತಾಪಂ, ಅರಣ್ಯ ಇತರೆ ಇಲಾಖೆಗಳಲ್ಲಿನ ಸಮಸ್ಯೆ ಹಾಗೂ ಪರಿಹಾರಕ್ಕೆ ಮನವಿ ಸಲ್ಲಿಸಿದರು. ಈ ವೇಳೆ ಎಸಿ ಮಹೇಶ್, ಮಲೆ ಮಹದೇಶ್ವರ ವನ್ಯಜೀವಿ ವಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್ ಕುಮಾರ್, ತಹಸೀಲ್ದಾರ್ ಗುರುಪ್ರಸಾದ್ ವಿವಿಧ ಇಲಾಖೆ ಅಧಿಕಾರಿಗಳಿದ್ದರು.

### 282 ಅರ್ಜಿ ಸ್ವೀಕಾರ

**ಹನೂರು:** ಹನೂರಿನಲ್ಲಿ ನಡೆದ ತಾಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ 282 ಸಾರ್ವಜನಿಕರ ಕುಂದುಕೊರತೆ ಅರ್ಜಿ ಸ್ವೀಕೃತಿಯಾಗಿದ್ದು, ಎಲ್ಲಾ ಆಹವಾಲುಗಳನ್ನು ಏಕೀಕೃತ ಸಾರ್ವಜನಿಕ ಕುಂದು ಕೊರತೆ ನಿವಾರಣೆ ವ್ಯವಸ್ಥೆ ತಂತ್ರಾಂಶದ ಮೂಲಕ ದಾಖಲು ಮಾಡಲಾಯಿತು.

ಸ್ಥಳದಲ್ಲಿಯೇ ಕೆಲವು ಅರ್ಜಿಗಳನ್ನು ಪರಿಹರಿಸಿ ವಿಲೇಗೊಳಿಸಿ ಬಾಕಿ ಉಳಿದ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಾಲಮಿತಿಯಲ್ಲಿ ಇತ್ಯರ್ಥ ಪಡಿಸಲು ಸೂಚನೆ ನೀಡಲಾಯಿತು.

# ಫಲಾನುಭವಿಗಳಿಗೆ ಮನೆ ಮಂಜೂರಾತಿ ಪತ್ರ ವಿತರಣೆ

ಚಾಮರಾಜನಗರ, ಜ.13– ತಾಲೂಕಿನ ಪುಣಜನೂರು ಗ್ರಾಪಂನಲ್ಲಿ ನಡೆದ ಆಶ್ರಯ ಮನೆ ಯೋಜನೆಯಡಿ ಮಂಜೂರಾತಿ ಆದೇಶ ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ 174 ಫಲಾನುಭವಿಗಳಿಗೆ ವಿವಿಧ ಯೋಜನೆಯಡಿ ಮನೆಗಳನ್ನು ನಿರ್ಮಿಸಿಕೊಳ್ಳಲು ಮಂಜೂರಾತಿ ಆದೇಶ ಪತ್ರ ವಿತರಿಸಿದರು.



ಪುಣಜನೂರು ಗ್ರಾಪಂನಲ್ಲಿ ನಡೆದ ಕಾರ್ಯಕ್ರಮದಲ್ಲಿ 174 ಫಲಾನುಭವಿಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಂಜೂರಾತಿ ಆದೇಶ ಪತ್ರ ವಿತರರಿಸಿದರು.

ಬಳಿಕ ಮಾತನಾಡಿದ ಶಾಸಕರು, ಅಂಬೇಡ್ಕರ್ ಯೋಜನೆಯಡಿ 140 ಹಾಗೂ ಬಸವ ವಸತಿ ಯೋಜನೆಯಡಿ 34 ಒಟ್ಟು 174 ಮನೆಗಳ ಮಂಜೂರಾತಿ ಆದೇಶ ಪತ್ರ ಪಡೆದ ಫಲಾನುಭವಿಗಳ ಖಾತೆಗಳಿಗೆ ಸರ್ಕಾರದಿಂದ ನೇರವಾಗಿ ಹಣ ಜಮೆಯಾಗಲಿದ್ದು, ನಿಗದಿತ ಅವಧಿಯೊಳಗೆ ಮನೆಗಳನ್ನು ನಿರ್ಮಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಅರ್ಧ ಕಾಮಗಾರಿ ಮಾಡಬೇಡಿ, ಮನೆಯನ್ನು ಪೂರ್ಣವಾಗಿ ಕಟ್ಟಿಕೊಳ್ಳುವ ಮೂಲಕ ಉತ್ತಮ ರೀತಿ ಜೀವನ ಸಾಗಿಸಬೇಕು ಎಂದರು. ಈ ಹಿಂದೆ ಸಿದ್ದರಾಮಯ್ಯ ಸರ್ಕಾರ ಇದ್ದಾಗ, ನಮ್ಮ ಕ್ಷೇತ್ರಕ್ಕೆ ಸಾಕಷ್ಟು ಆಶ್ರಯ ಮನೆಗಳನ್ನು ನೀಡಲಾಗಿತ್ತು. ಈ ಬಾರಿಯೂ ಕೂಡಾ ಸಿದ್ದರಾಮಯ್ಯನವರ ಸರ್ಕಾರ ಇರುವುದರಿಂದ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಆಶ್ರಯ ಯೋಜನೆಗಳು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲಾಗುವುದು ಎಂದರು.

**ಕೂಸಿನ ಮನೆ ಉದ್ಘಾಟನೆ:** ಇದೇ ವೇಳೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಕೂಸಿನ ಮನೆಯನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ನರೇಗಾ ಯೋಜನೆಯಡಿ ಉದ್ಯೋಗ ಹೆಚ್ಚು ಮಾಡಲಿದ್ದು, ಕೆಲಸಕ್ಕೆ ತೆರಳುವ ಕಾರ್ಮಿಕರು ತಮ್ಮ ಮಕ್ಕಳನ್ನು ಕೂಸಿನ ಮನೆಯಲ್ಲಿ ಬಿಟ್ಟು ಹೋಗುವ ಮೂಲಕ ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಇದಕ್ಕಾಗಿಯೇ ನಾಲ್ವರಿಗೆ ತರಬೇತಿ ನೀಡಲಾಗಿದ್ದು, ಅವರು ತಮ್ಮ ಮಕ್ಕಳನ್ನು ಉತ್ತಮ ರೀತಿಯಲ್ಲಿ ಹಾರೈಕೆ ಮಾಡಲಿದ್ದಾರೆ. ಇದರಿಂದ ಫಲಾನುಭವಿಗಳು ಆರ್ಥಿಕವಾಗಿ ಮುಂದೆ ಬರಲು ಸಹಕಾರಿಯಾಗಲಿದೆ ಎಂದರು.

ನಮ್ಮ ಸರ್ಕಾರದಿಂದ 5 ಗ್ಯಾರಂಟಿ ಯೋಜನೆಗಳನ್ನು ರೂಪಿಸಲಾಗಿದ್ದು, ಪ್ರತಿಯೊಬ್ಬರಿಗೂ ತಲುಪುವಂತಹ ಕೆಲಸ ಮಾಡಲಾಗುತ್ತಿದೆ ಇದರಿಂದ ಸಾಕಷ್ಟು ಬಡ ಕುಟುಂಬಗಳಿಗೆ ಅನುಕೂಲವಾಗುತ್ತಿದೆ. ಹಣ ತಮ್ಮ ಖಾತೆಗೆ ಜಮಾ ಆಗದೆ ಸಮಸ್ಯೆ ಎದುರಿಸುತ್ತಿರುವ ಫಲಾನುಭವಿಗಳಿಗೆ ಮುಂದಿನ ದಿನಗಳಲ್ಲಿ ಅದನ್ನು ಗ್ರಾಮ ಸಭೆಯ ಮೂಲಕ ಅಧಿಕಾರಿಗಳು ಸರಿಪಡಿಸಲಿದ್ದಾರೆ ಎಂದರು.

ಈ ವೇಳೆ ಗ್ರಾಪಂ ಆವರಣದಲ್ಲಿ 2024ರ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಲಾಯಿತು. ಗ್ರಾಪಂ ಅಧ್ಯಕ್ಷೆ ಶಿವಿಬಾಯಿ ಗಣೇಶ್, ತಾಪಂ ಮಾಜಿ ಸದಸ್ಯ ಪಿ.ಕುಮಾರನಾಯಕ್, ನೋಡಲ್ ಅಧಿಕಾರಿ ಸೋಮಣ್ಣೇಗೌಡ, ಗ್ರಾಪಂ ಉಪಾಧ್ಯಕ್ಷ ರಾಚಯ್ಯ, ಸದಸ್ಯರಾದ ಕುಮಾರಿ ಬಾಯಿ ಶಿವಾಜಿ ನಾಯಕ್, ಮಹೇಶ್, ಗೀತಾ ಸಿದ್ದರಾಜು, ಚಂದ್ರಶೇಖರ್, ಪಿ.ನಾಗನಾಯಕ, ಶಬೀನಾ ಬಾನು, ಶಾಮೀರ್‌ಪಾಷಾ, ಕುಮಾರ್, ಮಹೇಶ್ ನಾಯಕ, ಲಲಿತಾಬಾಯಿ, ಆರ್.ಮಣಿನಾಯಕ, ಬಸಮ್ಮ, ಮಮತಾ ಮುತ್ತುರಾಜ್, ಗಂಗಾಶಂಕರ್, ನಂಜುಂಡ, ಭಾಗ್ಯಬಾಯಿ, ರಂಗಸ್ವಾಮಿ, ಸುಶೀಲಾ, ಪಿಡಿಓ ವಿ.ಸಿದ್ದರಾಜು, ಲೆಕ್ಕ ಸಹಾಯಕ ಮಹದೇವಸ್ವಾಮಿ, ಬಿಲ್‌ಕಲೆಕ್ಟರ್ ಮಹದೇವನಾಯಕ ಸೇರಿದಂತೆ ಗ್ರಾಮಸ್ಥರು, ಮುಖಂಡರು ಇದ್ದರು.

# ಹಂಗಳ ಗ್ರಾಪಂನಲ್ಲಿ ಕೂಸಿನ ಮನೆ ಉದ್ಘಾಟನೆ



ಹಂಗಳದಲ್ಲಿ ಶಾಸಕ ಗಣೇಶ್ ಪ್ರಸಾದ್ ಕೂಸಿನ ಮನೆ ಉದ್ಘಾಟಿಸಿ ಮಾತನಾಡಿದರು.

ಗುಂಡ್ಲುಪೇಟೆ, ಜ.13– ಮುಖ್ಯಮಂತ್ರಿಗಳ ನಿಧಿಯಿಂದ ತಾಲೂಕಿನ 42 ಆಯ್ದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು.

ಶನಿವಾರ ತಾಲೂಕಿನ ಹಂಗಳ ಗ್ರಾಮ ಪಂಚಾಯಿತಿಯಲ್ಲಿ ಕೂಸಿನ ಮನೆ ಉದ್ಘಾಟಿಸಿ ಮಾತನಾಡಿದ ಅವರು, ಕೆಲಸಕ್ಕೆ ಹೋಗುವ ಕಾರ್ಮಿಕರ ಪುಟ್ಟ ಮಕ್ಕಳ ಪಾಲನೆಗೆ ಕೂಸಿನ ಮನೆ ಆರಂಭಿಸಲಾಗುತ್ತಿದ್ದು ಅರ್ಹರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಅಲ್ಲದೇ ಮುಖ್ಯಮಂತ್ರಿಗಳ ನಿಧಿಯಿಂದ ತಾಲೂಕಿನ 42 ಆಯ್ದ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು. ಇದರೊಂದಿಗೆ ವಿಶೇಷ ಅನುದಾನದಲ್ಲಿ ಹಂಗಳ ಗ್ರಾಮದಲ್ಲಿ 60 ಲಕ್ಷ ರೂ. ವೆಚ್ಚದಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗುವುದು. ಬಸವ ಭವನ, ವಾಲ್ಮೀಕಿ ಭವನ, ಬಾಬು ಜಗಜೀವನರಾಂ ಭವನ ಮುಂತಾದ ಸಮುದಾಯ ಭವನಗಳನ್ನು ನಿರ್ಮಿಸಲಾಗುವುದು ಎಂದು ಹೇಳಿದರು.

ಈ ವೇಳೆ ತಹಸೀಲ್ದಾರ್ ರಮೇಶ್ ಬಾಬು, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್. ನಂಜಪ್ಪ, ಗ್ರಾಪಂ ಅಧ್ಯಕ್ಷೆ ರೂಪ, ಉಪಾಧ್ಯಕ್ಷ ನಾಗರಾಜು ಇತರರಿದ್ದರು.

# ವರ್ಗ ರಹಿತ ಸಮಾಜ ನಿರ್ಮಾಣದಲ್ಲಿ ವಕೀಲರ ಪಾತ್ರ ಅಪಾರ

## ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಡಿ.ಭಾರತಿ

**ಚಾಮರಾಜನಗರ:** ಜಾತಿ ಹಾಗೂ ವರ್ಗ ರಹಿತ ಸಮಾಜ ನಿರ್ಮಾಣ ಮಾಡುವಲ್ಲಿ ವಕೀಲರ ಪಾತ್ರ ಮಹತ್ವದಾಗಿದೆ ಎಂದು ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಡಿ.ಭಾರತಿ ತಿಳಿಸಿದರು.

ನಗರದ ವಕೀಲರ ಸಂಘದ ಕಚೇರಿ ಎದುರು ಜಿಲ್ಲಾ ವಕೀಲರ ಸಂಘದ 2024ನೇ ಸಾಲಿನ ನೂತನ ಕ್ಯಾಲೆಂಡರ್, ಡೈರಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ವಕೀಲರು ಹಾಗೂ ನ್ಯಾಯಾಧೀಶರ ಬಾಂಧವ್ಯ ಉತ್ತಮವಾಗಿದ್ದರೇ, ಕಕ್ಷಿದಾರರಿಗೆ ತ್ವರಿತವಾಗಿ ನ್ಯಾಯ ಒದಗಿಸಬಹುದು. ವಕೀಲ ವೃತ್ತಿ ಶ್ರೇಷ್ಠ ವೃತ್ತಿಯಾಗಿದ್ದು, ಪ್ರತಿಯೊಬ್ಬರೂ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕು. ವಕೀಲರ ಸಮುದಾಯ ಒಂದು ಜಾತಿ ಇದ್ದಂತೆ. ವಕೀಲರಾಗಿ ಕಪ್ಪು ಕೋಟು ಧರಿಸಿ, ನ್ಯಾಯಾಲಯಕ್ಕೆ ಹಾಜರಾದಂತೆ ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಬೇಕು. ಸದಾ ಅಧ್ಯಯನಶೀಲರಾಗಿ ಕಕ್ಷಿದಾರರಿಗೆ ನ್ಯಾಯ ಒದಗಿಸಲು ಪ್ರಯತ್ನಿಸಬೇಕು ಎಂದರು.

ವಕೀಲರ ಸಂಘ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಮಾತಾಡಿ, ಸಂಘ ವಕೀಲರ ಹಿತ ಕಾಪಾಡುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಿಕೊಂಡು ಬರುತ್ತಿದೆ. ಹಿರಿಯ ವಕೀಲರ ಸಹಕಾರದಿಂದ ಕ್ಯಾಲೆಂಡರ್ ಹಾಗೂ ಡೇರಿ ಬಿಡುಗಡೆ ಮಾಡಲಾಗುತ್ತಿದೆ. ವಕೀಲರು ಸಮಾಜದ ತಪ್ಪುಗಳನ್ನು ತಿದ್ದುವಂತವರು. ಹೀಗಾಗಿ ವಕೀಲರು ಸದಾ ಅಧ್ಯಯನಶೀಲರಾಗಿ ಅಭಿವೃದ್ಧಿಯತ್ತ ಸಾಗಬೇಕು. ಕಕ್ಷಿದಾರರ ಪರ ಸೇವೆ ಮಾಡುವ ಮೂಲಕ ಸ್ವಾಸ್ಥ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದರು. ಕಾರ್ಯಕ್ರಮದಲ್ಲಿ ನಿವೃತ್ತ ಸಹಕಾರಿ ಅಭಿಯೋಜಕ ವಿ.ಬಿ.ನಾಯಕ್ ಹಾಗೂ ನೂತನ ಸರ್ಕಾರಿ ವಕೀಲ ಅರುಣ್ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಧೀಶ ಲೋಕಪ್ಪ, ಹಿರಿಯ ಸಿವಿಲ್ ನ್ಯಾಯಾಧೀಶ ಹೊನ್ನಪ್ಪ, ಜಿಲ್ಲಾ ಕಾನೂನು ಸೇವೆಗಳ ಸದಸ್ಯ ಕಾರ್ಯದರ್ಶಿ ಶ್ರೀಧರ್, ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ಚಂಪಕ, ಪ್ರಧಾನ ಸಿವಿಲ್ ನ್ಯಾಯಾಧೀಶ ಎನ್.ವೆಂಕಟೇಶ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶೆ ಎನ್.ನಿವೇದಿತಾ ಇತರರಿದ್ದರು.




2024ನೇ ಸಾಲಿನ ನೂತನ ಕ್ಯಾಲೆಂಡರ್ ಅನ್ನು ಶನಿವಾರ ಬಿಡುಗಡೆಗೊಳಿಸಲಾಯಿತು.




ಗುಂಡ್ಲುಪೇಟೆ ತಾಲೂಕಿನ ಬಂಡೀಪುರದಲ್ಲಿ ಅರಣ್ಯ ಇಲಾಖೆ ಕಾಡಂಚಿನ ಜನರ ತುರ್ತು ಸೇವೆಗಾಗಿ ನೀಡಿರುವ ಆಂಬುಲೆನ್ಸ್‌ಗೆ ಶನಿವಾರ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಚಾಲನೆ ನೀಡಿದರು. ಈ ವೇಳೆ ಹುಲಿ ಯೋಜನೆ ನಿರ್ದೇಶಕ ಡಾ.ರಮೇಶ್ ಕುಮಾರ್, ಎಸಿಎಫ್ ನವೀನ್, ಆರ್‌ಎಫ್‌ಓ ಗಳಾದ ದೀಪಾ, ನವೀನ್ ಕುಮಾರ್, ತಹಸೀಲ್ದಾರ್ ರಮೇಶ್‌ಬಾಬು ಮತ್ತು ಅರಣ್ಯ ಇಲಾಖೆ ನೌಕರರು ಮತ್ತು ಸಿಬ್ಬಂದಿ ಇದ್ದರು.

# ಜ.16, ಜಿಲ್ಲಾ ಮಟ್ಟದ ಜನತಾ ದರ್ಶನ

ಚಾಮರಾಜನಗರ, ಜ.13– ಜಿಲ್ಲೆಯ ಜನರ ಅಹವಾಲು ಆಲಿಸಿ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಒದಗಿಸುವ ಉದ್ದೇಶದಿಂದ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ನೇತೃತ್ವದಲ್ಲಿ ಜ.16ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ನಗರದ ಜಿಲ್ಲಾಡಳಿತ ಭವನದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ಚುನಾವಣೆ

**● 19 ನಿರ್ದೇಶಕ ಸ್ಥಾನ ● ಕಣದಲ್ಲಿ 41 ಅಭ್ಯರ್ಥಿಗಳು**

ಮೈಸೂರು,ಜ.13(ಪಿಎಂ)– ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್‌ನ 2024–28ನೇ ಅವಧಿಯ ಆಡಳಿತ ಮಂಡಳಿ ಚುನಾವಣೆ ಜ.14ರಂದು ಮೈಸೂರಿನ ಜೆಎಲ್‌ಬಿ ರಸ್ತೆಯ ರಾಮಸ್ವಾಮಿ ವೃತ್ತದ ಸಮೀಪದ ಹಾರ್ಡ್ವಿಕ್ ಹೈಸ್ಕೂಲ್‌ನಲ್ಲಿ ನಡೆಯಲಿದೆ.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯ ವಿವಿಧ ಕ್ಷೇತ್ರಗಳ 19 ನಿರ್ದೇಶಕ ಸ್ಥಾನಗಳಿಗೆ ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಚುನಾವಣೆ ನಡೆಯಲಿದೆ. ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷೆ ಡಾ.ಎಂ.ವಿ. ಬೃಹದಂಬ ಬಣ ಹಾಗೂ ಸಂಸ್ಥಾಪಕ ಮಾಜಿ ಉಪಾಧ್ಯಕ್ಷೆ ಡಿ.ಗೌರಮ್ಮ ಬಣದ ನಡುವೆ ನೇರ ಹಣಾಹಣಿ ನಡೆಯಲಿದೆ ಎನ್ನಲಾಗಿದೆ. ಮೂವರು ಸ್ವತಂತ್ರ ಅಭ್ಯರ್ಥಿಗಳೂ ಸೇರಿದಂತೆ ಒಟ್ಟು 41 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಬ್ಯಾಂಕಿನಲ್ಲಿ ಒಟ್ಟು 2,272 ಮತದಾರರು ಇದ್ದು, ಮತ ಚಲಾಯಿಸಲು ಬ್ಯಾಂಕ್ ನೀಡಿರುವ ಗುರುತಿನ ಚೀಟಿ ಕಡ್ಡಾಯವಾಗಿದೆ. ಸದಸ್ಯರು ಬ್ಯಾಂಕಿನ ಗುರುತಿನ ಚೀಟಿ ಹೊಂದಿಲ್ಲದಿದ್ದರೆ, 2 ಪಾಸ್ ಪೋರ್ಟ್ ಅಳತೆಯ ಫೋಟೋ ತಂದರೆ ಸ್ಥಳದಲ್ಲೇ ಗುರುತಿನ ಚೀಟಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

# ಇಂದು ಎಂಜಿಪಿ ಸರ್ವಸದಸ್ಯರ ಸಭೆ

**ನೂತನ ಕಾರ್ಯಕರ್ತರ ಸೇರ್ಪಡೆಗೆ ಅವಕಾಶ**


ಮೈಸೂರು, ಜ.13(ಎಸ್‌ಪಿಎನ್)– ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯಲ್ಲಿನ ಮೈಸೂರು ಗ್ರಾಹಕ ಪರಿಷತ್ ಸಂಘಟನೆಯನ್ನು ನೂತನ ಕಾರ್ಯಕರ್ತರ ಪಡೆಯನ್ನು ಕಟ್ಟಲು ಕಚೇರಿ ಆವರಣದಲ್ಲಿ ಸರ್ವ ಸದಸ್ಯರ ಸಭೆಯನ್ನು ನಾಳೆ(ಜ.14) ಸಂಜೆ 4ಗಂಟೆಗೆ ಆಯೋಜಿಸಲಾಗಿದೆ.

ಮೈಗ್ರಾಪ ಪುನರ್ ರಚನೆ ಸಂಬಂಧ ಸಾರ್ವಜನಿಕ ಸಲಹೆಗಳನ್ನು ಪಡೆಯುವ ಉದ್ದೇಶದಿಂದ ಈ ಸಭೆ ಕರೆಯಲಾಗಿದ್ದು, ಮೈಗ್ರಾಪದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಇಚ್ಛೆಯುಳ್ಳ ಸಾರ್ವಜನಿಕರು ಈ ಸಭೆಯಲ್ಲಿ ಪಾಲ್ಗೊಂಡು ಅಗತ್ಯ ಸಲಹೆಗಳನ್ನು ನೀಡಬಹುದಾಗಿದೆ ಎಂದು ಪರಿಷತ್‌ನ ಬಾಮೀ ವಿ.ಶೆಣೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳೆದ 34 ವರ್ಷಗಳಿಂದಲೂ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವ ಎಂಜಿಪಿ, ಆರಂಭದಿಂದ ಬೆಳ್ಳಿ ಹಬ್ಬದ ಸಂಭ್ರಮದವರೆಗೂ ಅತ್ಯಂತ ಸಾಮಾಜಿಕ ಕಾಳಜಿಯುಳ್ಳ ಮತ್ತು ಸಮರ್ಥ ಕಾರ್ಯಕರ್ತರ ಪಡೆಯನ್ನೇ ಹೊಂದಿತ್ತು. ಹಾಗಾಗಿ ಪ್ರತಿ ಮೂರು ವರ್ಷಕ್ಕೊಮ್ಮೆ ಹೊಸ ಕಾರ್ಯಕರ್ತರನ್ನು ಸಂಘಟನೆಯಲ್ಲಿ ತೊಡಗಿಸಿಕೊಳ್ಳುವುದು ಸುಲಭವಾಗಿತ್ತು. ಇತ್ತೀಚಿನ ದಿನಗಳಲ್ಲಿ ಗ್ರಾಹಕರ ಕ್ಷೇತ್ರದಲ್ಲಿ ಪರಿಣಿತಿ ಹಾಗೂ ಕಾಳಜಿಯುಳ್ಳ ಕಾರ್ಯಕರ್ತರನ್ನು ಪಡೆಯುವಲ್ಲಿ ಎಂಜಿಪಿ ಯಶಸ್ವಿಯಾಗದಿರುವುದಕ್ಕೆ ಬೇಸರವಿದೆ ಎಂದಿದ್ದಾರೆ.

ಆಹಾರ ಕಲಬೆರಕೆ ಪ್ರಾತ್ಯಕ್ಷಿಕೆಗೆ ಸಂಚಾಲಕರಾಗಿದ್ದ ಸಿ.ವಿ.ನಾಗರಾಜ್ ಅವರು 3,500ಕ್ಕೂ ಹೆಚ್ಚು ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟಿದ್ದರು. ಅಲ್ಲದೆ, ಮೈಸೂರಿನ ಕೆಲ ಬಡಾವಣೆಗಳಲ್ಲಿನ ನೀರಿನ ಸಮಸ್ಯೆ ನಿವಾರಣೆ ಕುರಿತು ಮತ್ತೊರ್ವ ಸದಸ್ಯ ಪ್ರೊ.ರಾಮಲಿಂಗಂ ಶ್ರಮಿಸಿದ್ದರು. ಇಂತಹ ಜನಪರವಾದ ಕೆಲಸಗಳನ್ನು ಪ್ರಾಮಾಣಿಕವಾಗಿ ಮುಂದುವರೆಸುವ ನಿಟ್ಟಿನಲ್ಲಿ ಜ.14ರಂದು ನಡೆಯುವ ಸಭೆ ನಿರ್ಣಾಯಕವಾಗಿದ್ದು, ಸಂಘಟನೆಯಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ ಹೊಂದಿರುವ ಸದಸ್ಯರು ಮತ್ತು ಸದಸ್ಯರಲ್ಲದವರೂ ಪಾಲ್ಗೊಂಡು ಎಂಜಿಪಿಯನ್ನು ಬಲಪಡಿಸಲು ಮತ್ತು ಉತ್ತಮ ಕಾರ್ಯ ನಿರ್ವಹಣೆಗೆ ಪುನರ್ ರಚನೆ ಸಂಬಂಧ ಸಲಹೆಗಳನ್ನು ನೀಡಬಹುದು ಎಂದು ಶೆಣೈ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ರಾಜ್ಯದಲ್ಲಿ ಶನಿವಾರ 119 ಮಂದಿಗೆ ಕೊರೊನಾ



ಬೆಂಗಳೂರು, ಜ.13–ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ಇಂದು ಕಡಿಮೆಯಾಗಿದ್ದು 119 ಮಂದಿಗೆ ಕೊರೊನಾ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 959ಕ್ಕೆ ಏರಿಕೆಯಾಗಿದೆ. ಕಳೆದ 24 ಗಂಟೆಗಳಲ್ಲಿ ಬೆಂಗಳೂರಿನಲ್ಲಿ 33 ಪಾಸಿಟಿವ್ ಪ್ರಕರಣ ಸೇರಿದಂತೆ ರಾಜ್ಯದಲ್ಲಿ 119 ಮಂದಿಗೆ ಪಾಸಿಟಿವ್ ದೃಢಪಟ್ಟಿದೆ. ಸೋಂಕಿನಿಂದ ಇಂದು ಇಬ್ಬರು ಮೃತಪಟ್ಟಿದ್ದಾರೆ.

ಒಂದನೇ ಪುಟದಿಂದ

# ಕಾವೇರಿ ಜಲ ಸಮಸ್ಯೆ ನೀಗ್ತಾರೆ

ತಮಿಳುನಾಡಿ ನವರಿಗೆ ಶಕ್ತಿ ಇದೆ. ಹೀಗಾಗಿ ನೀರು ತೆಗೆದುಕೊಂಡು ಹೋಗ್ತಿದ್ದಾರೆ. ಆದರೆ, ನ್ಯಾಯ ಕೊಡಬೇಕಾದ ಕಾವೇರಿ ಪ್ರಾಧಿಕಾರ ನಮಗೆ ಅನ್ಯಾಯ ಮಾಡುತ್ತಿದೆ ಎಂದರು.

**ಪ್ರಧಾನಿ ಗಮನಕ್ಕೆ ತಂದಿದ್ದೇನೆ:** ಕಾವೇರಿ ವಿಷಯದಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯದ ಪ್ರತಿಯೊಂದು ಅಂಶವನ್ನು ನಾನು ಮೋದಿ ಅವರ ಗಮನಕ್ಕೆ ತಂದಿದ್ದೇನೆ. ಮೋದಿ ಅವರಿಗೆ ಕೂಡಲೇ ಎಲ್ಲಾ ಮಾಡಲು ಆಗುವುದಿಲ್ಲ. ನಾವೆಲ್ಲರೂ ಈ ಬಗ್ಗೆ ಹೋರಾಟ ಮಾಡುತ್ತೇವೆ. ಮಳೆ ಇಲ್ಲದೆ ಹೋದರೂ ನೀರು ಬಿಡಿ ಎಂದು ಆದೇಶ ಮಾಡುವುದು ಸರಿಯಲ್ಲ. ನಮಗೆ ನಿರಂತರ ಅನ್ಯಾಯ ಆಗಿದೆ ಎಂದು ಅವರು ನೊಂದು ಹೇಳಿದರು. ಕೇಂದ್ರ ಜಲಶಕ್ತಿ ಸಚಿವಾಲಯದ ಜಲಸಂಪನ್ಮೂಲ ಸ್ಥಾಯಿ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದೆ, ಹೈಡ್ರೋ ಪವರ್ ಜನರೇಷನ್, ಕುಡಿಯುವ ನೀರಿನ ಬಗ್ಗೆಯೂ ಚರ್ಚೆ ಮಾಡಿದ್ದೇವೆ.

**ಕಾವೇರಿಗೆ ಯಾವುದೇ ಹಣ ಬಂದಿಲ್ಲ:** ಈ ಸಭೆಯಲ್ಲಿ ಕೊಡಗು ಸೇರಿ ಕಾವೇರಿ ಜಲಾಶಯದ ಹತ್ತು ಜಿಲ್ಲೆಗಳಲ್ಲಿ ರೈತರಿಗೆ ಉಂಟಾಗಿರುವ ಅನ್ಯಾಯದ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ನಮ್ಮ ರಾಜ್ಯಕ್ಕೆ 8 ಸಾವಿರ ಕೋಟಿ ರೂ. ಕೃಷ್ಣ ಜಲಾನಯನ ಪ್ರದೇಶದ ಯೋಜನೆಗಳಿಗೆ ಕೇಂದ್ರದಿಂದ ಹಣ ಬಂದಿತ್ತು. ಆದರೆ, ಕಾವೇರಿ ಜಲಾನಯನ ಯೋಜನೆಗೆ ಯಾವುದೇ ಹಣ ಬಂದಿಲ್ಲ. ಈ ಬಗ್ಗೆ ಸಮಿತಿ ಕೇಂದ್ರದ ಗಮನಕ್ಕೆ ತರಬೇಕು. ಇದರ ಬಗ್ಗೆ ಅವರ ಗಮನಕ್ಕೆ ತಂದಿದ್ದೇವೆ ಎಂದು ವಿವರ ನೀಡಿದರು.

ಮೇಕೆದಾಟು ಯೋಜನೆಗೆ ಕೂಡಲೇ ಅನುಮತಿ ಕೊಡುವಂತೆ ಮನವಿ ಮಾಡಿದ್ದೇವೆ, ಬೆಂಗಳೂರು ವೇಗವಾಗಿ ಬೆಳೆಯುತ್ತಿರುವ ನಗರ, ದೇಶದ ಎಲ್ಲ ಜನರಿಗೆ ಉದ್ಯೋಗ, ಜೀವನೋಪಾಯ ನೀಡಿ ಸಲಹುತ್ತಿದೆ, ಮೇಕೆದಾಟು ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ತಂದರೆ ಮಾತ್ರ ನಗರದ ನೀರಿನ ಬವಣೆ ತಪ್ಪಿಸಬಹುದು, ಇಲ್ಲವಾದರೆ, ಬೆಂಗಳೂರು ನಗರ ಅತೀ ದೊಡ್ಡ ಜಲ ಸಂಕಷ್ಟಕ್ಕೆ ಸಿಲುಕಿಕೊಳ್ಳಲಿದೆ ಎಂದು ತೀವ್ರ ಆತಂಕ ವ್ಯಕ್ತಪಡಿಸಿದರು. ತಮಿಳುನಾಡಿಗೆ ದೈತ್ಯ ರಾಜಕೀಯ ಶಕ್ತಿ ಇದೆ. ಅವರಿಗೆ ಎಷ್ಟು ನೀರು ಕೊಟ್ಟರೂ ಸಾಲದು. ತಮಿಳುನಾಡಿನಲ್ಲಿ ಎಲ್ಲಾ ಕಡೆ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿದ್ದಾರೆ, ಅವರಿಗೆ ಸಮೃದ್ಧವಾಗಿ ಮಳೆ ಬಂದರೂ ನೀರು ಬೇಕು ಎಂದು ಕೇಳುತ್ತಾರೆ.

ತಮಿಳುನಾಡಿನ ನೀರಾವರಿ ಬಗ್ಗೆ ಕೃಷಿ ವಿಜ್ಞಾನಿ ಸ್ವಾಮಿನಾಥನ್ ವರದಿ ಕೊಟ್ಟಿದ್ದಾರೆ, ಅವರು ವಾರ್ಷಿಕ 3 ಬೆಳೆ ಆರಾಮವಾಗಿ ಬೆಳೆಯುತ್ತಾರೆ. ನಮಗೆ ಒಂದು ಬೆಳೆ ಬೆಳೆಯುವುದಕ್ಕೂ ಕೂಡ ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

**ತಮಿಳುನಾಡಿನವರು 3 ಬೆಳೆ ಬೆಳೀತಾರೆ:** ತಮಿಳುನಾಡಿನಲ್ಲಿ ಕುರುವೈ, ಸಾಂಬಾ, ತಾಲಾಡಿ ಹಾಗೂ ಇನಾ ಬೇಸಾಯ ಸೇರಿದಂತೆ ಒಟ್ಟು 24.71 ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಕರ್ನಾಟಕದಲ್ಲಿ ಎಲ್ಲಾ ವಿದಧ ಬೆಳೆಗಳನ್ನು ಸೇರಿಸಿದರೂ 18.85 ಲಕ್ಷ ಎಕರೆ ಮೀರುವುದಿಲ್ಲ ಎಂದು ಅಂಕಿ–ಅಂಶ ನೀಡಿದರು. ಕಾವೇರಿ ಜಲ ವಿವಾದ ಮಂಡಳಿ ಏಕಪಕ್ಷೀಯವಾಗಿ 1991ರಲ್ಲಿ ಮಧ್ಯಂತರ ಆದೇಶ ನೀಡಿ, ಕರ್ನಾಟಕ ರಾಜ್ಯ ತನ್ನ ನೀರಾವರಿ ಅಚ್ಚುಕಟ್ಟನ್ನು 11.20 ಲಕ್ಷ ಹೆಕ್ಟೇರ್‌ಗೆ ಸೀಮಿತಗೊಳಿಸುವಂತೆ ಮತ್ತು ತಮಿಳುನಾಡಿನ 205 ಟಿಎಂಸಿ ನೀರನ್ನು ಬಿಡುಗಡೆ ಮಾಡುವಂತೆ ಆದೇಶಿಸಿರುವುದರಿಂದ ರಾಜ್ಯಕ್ಕೆ ಅನ್ಯಾಯ ಆಗಿದೆ ಎಂದು ದೇವೇಗೌಡರು ಬೇಸರ ವ್ಯಕ್ತಪಡಿಸಿದರು.

# ಇಬ್ಬರ ಬಂಧನ

ತಿಳಿದುಕೊಂಡಿದ್ದರಾದರೂ, ಆತ ಅವರಿರುವಲ್ಲಿಗೇ ಸೋಪ್‌ಗಳನ್ನು ಡೆಲಿವರಿ ಕೊಟ್ಟ ಕಾರಣ ಕಾರ್ಯಾಚರಣೆ ವಿಫಲವಾಗಿತ್ತು. ಕೆಲ ದಿನಗಳು ಕಳೆದು ಕೆಎಸ್‌ಡಿಎಲ್ ಸಿಬ್ಬಂದಿಯು ಸಕ್ರಾಂತಿ ಹಬ್ಬದ ಪ್ರಯುಕ್ತ ತಮಗೆ 25 ಲಕ್ಷ ರೂ. ಮೌಲ್ಯದ ಸೋಪ್‌ಗಳು ಬೇಕಾಗಿವೆ. ಅದನ್ನು ತಮ್ಮ ವಾಹನದಲ್ಲೇ ಕೊಂಡೊಯ್ಯುವುದಾಗಿ ತಿಳಿಸಿದ್ದಾರೆ. ಇದನ್ನು ನಂಬಿದ ಮಧ್ಯವರ್ತಿ ಕೆಎಸ್‌ಡಿಎಲ್ ಸಿಬ್ಬಂದಿಯನ್ನು ನಕಲಿ ಸೋಪ್ ತಯಾರಿಕಾ ಘಟಕಕ್ಕೆ ಕರೆದೊಯ್ಯಲು ಸಮಯ ಮತ್ತು ದಿನಾಂಕ ನಿಗದಿಪಡಿಸುತ್ತಿದ್ದಂತೆಯೇ ಕೆಎಸ್‌ಡಿಎಲ್ ಅಧಿಕಾರಿಗಳು ಹೈದರಾಬಾದ್ ಹಿರಿಯ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತಂದು ನಿಗದಿತ ದಿನಾಂಕದಂದು ನಕಲಿ ಸೋಪ್ ತಯಾರಿಕಾ ಘಟಕದ ಮೇಲೆ ದಾಳಿ ನಡೆಸಿ, ಹೈದರಾಬಾದ್‌ನ ರಾಕೇಶ್ ಜೈನ್ ಮತ್ತು ಮಹಾವೀರ್ ಜೈನ್ ಎಂಬುವರನ್ನು ಬಂಧಿಸಿದ್ದಾರೆ. ದಾಳಿ ವೇಳೆ 75 ಗ್ರಾಂ ತೂಕದ 47 ಕರ್ಟನ್ ಬಾಕ್ಸ್‌ಗಳಲ್ಲಿ 9,400 ಸೋಪ್‌ಗಳು ಮತ್ತು 150 ಗ್ರಾಂ ತೂಕದ ತಲಾ 3 ಸಾಬೂನುಗಳಿರುವ 20 ಕರ್ಟನ್ ಬಾಕ್ಸ್‌ಗಳಲ್ಲಿ 1800 ಸೋಪ್‌ಗಳು, 75 ಗ್ರಾಂ ತೂಕದ ಸಾಬೂನಿನ 400 ಖಾಲಿ ಕರ್ಟನ್ ಬಾಕ್ಸ್‌ಗಳು, 150 ಗ್ರಾಂ ತೂಕದ ಸಾಬೂನಿನ 400 ಖಾಲಿ ಕರ್ಟನ್ ಬಾಕ್ಸ್‌ಗಳನ್ನು ವಶಪಡಿಸಿ ಕೊಳ್ಳಲಾಗಿದೆ. ಅಲ್ಲದೇ ನಕಲಿ ಸೋಪ್ ತಯಾರಿಕೆಗೆ ಬಳಸುತ್ತಿದ್ದ ಪರಿಕರಗಳನ್ನು ಕೂಡ ಪೊಲೀಸರು ವಶಪಡಿಸಿಕೊಂಡಿದ್ದು, ಕೆಎಸ್‌ಡಿಎಲ್ ಸಿಕಂದರಾಬಾದ್ ಕಚೇರಿ ಅಧಿಕಾರಿ ನೀಡಿದ ದೂರಿನನ್ವಯ ಹೈದರಾಬಾದ್‌ನ ಮಾಲಕಾಪೇಟ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

# ಗೌರಿಸತ್ಯರ 'ಗೌರಿಯ ನಂಟು ಈ ಮನೆತನಕ್ಕೆ' ಕೃತಿ ಬಿಡುಗಡೆ

**ಸಾಂಪ್ರದಾಯಿಕ ಗೌರಿ ಹಬ್ಬ ಆಚರಣೆ ಭಕ್ತಿ, ಧಾರ್ಮಿಕತೆಯೊಂದಿಗೆ ಕಟ್ಟಿಕೊಟ್ಟ ಶ್ರೀಯುತರ ಪ್ರಯತ್ನಕ್ಕೆ ಪ್ರಶಂಸೆ**





ಮೈಸೂರಿನ ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನ ಎಸ್.ಪಿ.ಭಟ್ ಸಭಾಂಗಣದಲ್ಲಿ ಬೆಂಗಳೂರಿನ ಸುಂದರ ಪ್ರಕಾಶನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಾದ ಗೌರಿ ಸತ್ಯ ಅವರ 'ಗೌರಿಯ ನಂಟು ಈ ಮನೆತನಕ್ಕೆ' ಕೃತಿಯನ್ನು ನಾಡೋಜ ಪ್ರೊ. ಟಿ.ವಿ. ವೆಂಕಟಾಚಲಶಾಸ್ತ್ರಿ ಮತ್ತು ಖ್ಯಾತ ವಿದ್ವಾಂಸರಾದ ಡಾ. ಎನ್.ಎಸ್.ತಾರಾನಾಥ್ ಶನಿವಾರ ಬಿಡುಗಡೆಗೊಳಿಸಿದರು. ಈ ವೇಳೆ ಹಿರಿಯ ಪತ್ರಕರ್ತ ಮತ್ತು ಲೇಖಕರೂ ಆದ ಗೌರಿ ಸತ್ಯ ಉಪಸ್ಥಿತರಿದ್ದರು.

> ಪ್ರೊ ಟಿ.ವಿ.ವೆಂಕಟಾಚಲಶಾಸ್ತ್ರಿ ಡಾ. ಎನ್.ಎಸ್.ತಾರಾನಾಥ್ ಅವರ ಪ್ರೋತ್ಸಾಹದಿಂದ ಮನೆತನದ ಬಗ್ಗೆ ಬರೆದಿದ್ದು, ಮೊದಲು ನನಗೆ ನಮ್ಮ ತಾತನ ಹೆಸರೇ ತಿಳಿದಿರಲಿಲ್ಲ. ಇದರ ಜಾಡು ಹಿಡಿದು ಹೊರಟಾಗ ಕೆಲವರು ಮಾಹಿತಿ ನೀಡಿದರು. ಅದನ್ನು ಬರೆದುಕೊಂಡಿದ್ದೆ. ಆಗ ತಂದೆ ಕಡೆಯ ಮಾಹಿತಿ ಕಲೆಹಾಕಲು ಸಾಧ್ಯವಾಯಿತು. ಆದರೆ, ತಾಯಿಯ ಕಡೆಯ ಮಾಹಿತಿ ಇರಲಿಲ್ಲ. ಅದನ್ನು ಪತ್ತೆ ಮಾಡಲು ಆರಂಭಿಸಿದ್ದೆ. ನಮ್ಮ ಸೋದರ ಮಾವ ಅವರ ಬಳಿ ಇದ್ದ ದಾಖಲೆಗಳನ್ನು ನೀಡಿದ್ದರು. ಅದನ್ನು ಬಳಸಿಕೊಂಡು ತಾಯಿಯ ಬಗ್ಗೆಯೂ ಬರೆಯಲು ಸಾಧ್ಯವಾಯಿತು. ಸುದೀರ್ಘ 25 ವರ್ಷಗಳು ಸಂಶೋಧನೆ ನಡೆಸಿದೆ. ನಾಡೋಜ ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರ 'ಮುಲಕನಾಡು ಬ್ರಾಹ್ಮಣರು' ಆಧರಿಸಿ ಪುಸ್ತಕ ಬರೆದೆ. ಒಟ್ಟಾರೆ ಕೃತಿ ಬಿಡುಗಡೆ ತೃಪ್ತಿ ನೀಡಿದೆ.

ಮೈಸೂರು, ಜ.13(ಜಿಎ)–ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನ ಎಸ್.ಪಿ. ಭಟ್ ಸಭಾಂಗಣದಲ್ಲಿ ಬೆಂಗಳೂರಿನ ಸುಂದರ ಪ್ರಕಾಶನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಾದ ಗೌರಿ ಸತ್ಯ ಅವರ 'ಗೌರಿಯ ನಂಟು ಈ ಮನೆತನಕ್ಕೆ' ಕೃತಿಯನ್ನು ನಾಡೋಜ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ ಮತ್ತು ಖ್ಯಾತ ವಿದ್ವಾಂಸರಾದ ಡಾ.ಎನ್.ಎಸ್.ತಾರಾನಾಥ್ ಶನಿವಾರ ಬಿಡುಗಡೆಗೊಳಿಸಿದರು.

ನಂತರ ಕೃತಿ ಕುರಿತು ಡಾ.ಎನ್.ಎಸ್. ತಾರಾನಾಥ್ ಮಾತನಾಡಿ, ಗೌರಿ ಸತ್ಯ ಅವರು 'ಗೌರಿಯ ನಂಟು ಈ ಮನೆತನಕ್ಕೆ' ಕೃತಿಯಲ್ಲಿ ಜನರಿಗೆ ಹೆಚ್ಚು ತಿಳಿಯದೆ ಅಜ್ಞಾತವಾಗಿದ್ದ ಗೌರಿ ಹಬ್ಬದ ಆಚರಣೆಯನ್ನು ಅದ್ಭುತವಾಗಿ ನಿರೂಪಿಸಿದ್ದಾರೆ. ಈ ಪುಸ್ತಕದಲ್ಲಿ 13 ವಿಭಾಗಗಳಿದ್ದು, ಮೊದಲ ಆರು ಭಾಗದಲ್ಲಿ ಗೌರಿ ಹಬ್ಬ, ಅರಮನೆಯ ನಂಟು, ಗೌರಿ ಪೂಜೆಯನ್ನು ಕೇಂದ್ರವಾಗಿಟ್ಟುಕೊಂಡು ಬರೆದಿದ್ದಾರೆ ಎಂದರು.

ಅರಸು ಸಮುದಾಯ ಮತ್ತು ಅರಮನೆಯಲ್ಲಿ ಗೌರಿ ಹಬ್ಬ ಹೇಗೆ ಆಚರಿಸುತ್ತಾರೆ ಎಂಬುದನ್ನು ವಿವರಿಸಿ, ಗೌರಿ ಪೂಜೆಗೂ ಮುನ್ನ ಬಳೆ ಮಲಾರ ಪೂಜೆ ಹೇಗೆ ನಡೆಯುತ್ತದೆ ಎಂಬುದನ್ನು ತಿಳಿಸಿದ್ದಾರೆ. ಗೌರಿಯ ಪ್ರಾಣ ಪ್ರತಿಷ್ಠಾನೆಯಾಗುತ್ತಿದ್ದದ್ದು ಗೌರಿ ಸತ್ಯ ಅವರ ಮನೆಯಲ್ಲಿ. ಆ ಮೇಲೆ ಗೌರಿಯನ್ನು ಮೆರವಣಿಗೆ ಮೂಲಕ ಅರಮನೆಗೆ ತೆಗೆದುಕೊಂಡು ಹೋಗಲಾಗುತ್ತಿದ್ದು, ಈ ಮೆರಣಿಗೆಯೂ ದಸರಾ ಮಾದರಿಯಲ್ಲಿಯೇ ಅದ್ದೂರಿಯಾಗಿ ನಡೆಯುತಿತ್ತು. ಗೌರಿ ಹಬ್ಬದ ಆಚರಣೆಯಲ್ಲಿ ಗೌರಿ ಸತ್ಯ ಅವರ ಕುಟುಂಬದ ಪಾತ್ರವೇನು ಎಂಬುದನ್ನು ದಶಕಗಳ ಹಿನ್ನೆಲೆಯ ಪುರಾವೆ ಸಹಿತ ವಿವರಿಸಿದ್ದು, ಇದನ್ನು ಓದುತ್ತಿದ್ದರೆ, ಒಂದು ಸಾಕ್ಷ್ಯ ಚಿತ್ರವನ್ನು ನೋಡಿದಂತೆ ಭಾಸವಾಗುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

1930ರ ಸಂದರ್ಭದಲ್ಲಿ ಅರಮನೆಯಲ್ಲಿ ಒಂದು ಬಾರಿ ಕೃಷ್ಣರಾಜ ಒಡೆಯರ್ ಪ್ರವಾಸಕ್ಕೆ ತೆರಳಿದ್ದರು.ಈ ವೇಳೆ ಬೆಂಗಳೂರಿನ ಅರಮನೆಯಲ್ಲಿ ಆಚರಣೆ ಮಾಡಲಾಗಿತ್ತು. ಈ ಕುರಿತು ಪತ್ರಾಗಾರ ವಿಭಾಗದ ಪತ್ರವೂ ಇದೆ. ಮತ್ತೊಂದೆಡೆ 1936ರಲ್ಲಿ ಅರಮನೆಯ ಎಲ್ಲಾ ಭಾಗದಲ್ಲಿ ಗೌರಿ ಪೂಜೆ ಆಚರಿಸಿದ ಬಗ್ಗೆ ಸವಿವರವಾಗಿ ತಿಳಿಸಿದ್ದು, 'ಗೌರಿಯ ನಂಟು ಈ ಮನೆತನಕ್ಕೆ' ಕೃತಿ ಓದುತ್ತಿದ್ದರೆ, ಗೌರಿ ಸತ್ಯ ಅವರು ಸಂಶೋಧಕರಂತೆ ಕಾಣಿಸಿಕೊಳ್ಳುತ್ತಾರೆ ಎಂದರು.

ಕೃತಿಯ ಪೂರ್ವಾರ್ಧದಲ್ಲಿ ಗೌರಿ ಹಬ್ಬ ಕುರಿತು ತಿಳಿಸಿದ್ದಾರೆ. ಕೃತಿಯ ಉತ್ತರಾರ್ಧದಲ್ಲಿ ತಮ್ಮ ಮನೆತನದ ಚರಿತ್ರೆಯನ್ನು ತಿಳಿಸಿದ್ದಾರೆ. ತಮ್ಮ ಮೂಲದ ಬಗ್ಗೆ ಹುಡುಕಾಟ ನಡೆಸಿದ್ದಾರೆ. ಪೂರ್ವಿಕರನ್ನು ನೆನೆದಿದ್ದಾರೆ. ಸ್ಪಷ್ಟವಾಗಿ ಎಲ್ಲವನ್ನು ದಾಖಲೆ ಮಾಡಿದ್ದಾರೆ ಎಂದು ತಿಳಿಸಿದರು.

ಗೌರಿ ಸತ್ಯ ಅವರ ತಂದೆ ಜಿ.ಎಲ್. ಸ್ವಾಮಿ ಅವರ 'ಸಮಾಚಾರ್' ದೈನಿಕ ಪತ್ರಿಕೆ ಮೈಸೂರಿನ ಮೊಟ್ಟ ಮೊದಲ ಇಂಗ್ಲಿಷ್ ಪತ್ರಿಕೆ. ಇದು ಸುದೀರ್ಘ 50 ವರ್ಷ ನಡೆದುಕೊಂಡು ಬಂದಿತ್ತು. ಅದಕ್ಕೂ ಮೊದಲು 'ಕಲ್ಕತ್ತಾ ಮುನಿಸಿಪಲ್ ಜನರಲ್' ಪತ್ರಿಕೆಯಂತೆ 'ಮೈಸೂರು ಮುನಿಸಿಪಲ್ ಜನರಲ್' ಪತ್ರಿಕೆ ನಡೆಸುತ್ತಿದ್ದರು. ಅದರಲ್ಲಿ ನಗರ ಸಭೆಯಲ್ಲಿ ನಡೆಯುವ ಕಲಾಪಗಳನ್ನು ಪ್ರತಿ ತಿಂಗಳು ಪ್ರಕಟ ಮಾಡುತ್ತಿದ್ದರು. ಅಂದು ಅದರ ಬೆಲೆ ಒಂದು ಆಣೆಯಾಗಿತ್ತು ಎಂದು ವಿವರಿಸಿದ್ದಾರೆ ಎಂದರು.

ಮೈಸೂರು ನಗರ ಮಾತ್ರವಲ್ಲದೆ ಇಡೀ ಕರ್ನಾಟಕದಲ್ಲಿಯೇ ಪ್ರವಾಸೋದ್ಯಮ ಆರಂಭಿಸಿದ್ದವರು ಗೌರಿ ಸತ್ಯ ಅವರ ತಂದೆ. ಅವರ ಅಣ್ಣ ರಾಮಕೃಷ್ಣ, ದೆಹಲಿಯ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾಗಿದ್ದರು. ಈ ವೇಳೆ ಮೈಸೂರಿನ ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನ ಮೇಲ್ಭಾಗದ ಕೊಠಡಿಯಲ್ಲಿ 'ಟೂರಿಸ್ಟ್ ಸರ್ವಿಸ್ ಬ್ಯೂರೋ', 'ಟ್ಯೂರಿಸ್ಟ್ ಬ್ಯೂರೋ' ಎಂಬ ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಮಹಾಯುದ್ಧಗಳು ಮುಕ್ತಾಯವಾದ ನಂತರ 1944ರ ಸಂದರ್ಭದಲ್ಲಿ ಬ್ರಿಟಿಷ್ ಸೈನಿಕರನ್ನು ಬೇರೆ ತಾಲೂಕುಗಳಿಗೆ ಪ್ರವಾಸಕ್ಕೆ ಕರೆದುಕೊಂಡು ಹೋಗಲು ತಾಲೂಕು ಕೈಪಿಡಿಗಳನ್ನು ನಿರ್ಮಿಸಿದ್ದರು. ಹಾಗೇ ಮೊಟ್ಟ ಮೊದಲ ಬಾರಿಗೆ ಟೂರಿಸ್ಟ್ ಗೈಡ್ ಅನ್ನು ಪರಿಚಯಿಸಿದ್ದರು. ಇದನ್ನು ಗಮನಿಸಿದ್ದ ಡಾ.ಸರ್.ಎಂ.ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಅವರು ಮೆಚ್ಚಿಕೊಂಡು ನೀವು ಮೈಸೂರು ಪ್ರಾಂತ್ಯವನ್ನು ಸುತ್ತಿ ಮಾಹಿತಿಯನ್ನು ಸಂಗ್ರಹಿಸಿ ಎಂದು ರೈಲ್ವೇನಲ್ಲಿ ಉಚಿತ ಪಾಸ್ ನೀಡಿದ್ದರು. ವಿದೇಶಿ ಪ್ರವಾಸಿಗರಿಗೆ ಟೂರಿಸ್ಟ್ ಗೈಡ್ ಪರಿಚಯಿಸಿದವರು ಅವರ ತಂದೆ ಹೀಗೆ ಅವರ ಕುಟುಂಬ ಕುರಿತು ದಾಖಲೆ ಸಮೇತ ಸಾಕ್ಷ್ಯ ಅಂಶಗಳನ್ನು ತಿಳಿಸಿರುವ ಈ ಕೃತಿ ಗಮನ ಸೆಳೆಯುತ್ತದೆ ಎಂದು ಪ್ರಶಂಸಿಸಿದರು.

ನಂತರ ನಾಡೋಜ ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಮಾತನಾಡಿ, ಮೊದಲು ನಾನು ಮುಲಕನಾಡು ಸಮುದಾಯದ ಕುರಿತು ಕೃತಿಯನ್ನು ಬರೆಯಲು ಮುಂದಾದಾಗ ಮಾಹಿತಿಗಾಗಿ ಅನೇಕರನ್ನು ಸಂಪರ್ಕಿಸಿದ್ದು ಉಂಟು. ವಿವಿಧ ಆತ್ಮಕಥನ, ಜೀವನ ವೃತ್ತಾಂತ, ಸಂವಾದ, ಸಂದರ್ಶನ, ಸಂಪರ್ಕದಿಂದ ಒಂದು ಹೊಸ ಜಗತ್ತನ್ನು ಕಂಡುಕೊಂಡೆ. ನಾವು ಈಗ ಏನಾಗಿದ್ದೇವೋ ಅದಕ್ಕೆ ನಮ್ಮ ಹಿರಿಯರ ಸಾಧನೆ, ಕಷ್ಟ, ಶ್ರಮ ಎಲ್ಲವೂ ಕಾರಣವಾಗಿದ್ದು ಅವರು ಇಲ್ಲದಿದ್ದರೆ ನಾವು ಇರುತ್ತಿರಲಿಲ್ಲ ಎಂಬುದು ತಿಳಿಯಿತು ಎಂದು ಹೇಳಿದರು.

# ಜ.28, ಚಿತ್ರದುರ್ಗದಲ್ಲಿ ಶೋಷಿತರ ಜಾಗೃತಿ ಸಮಾವೇಶ



ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿದರು. ಚಿತ್ರದಲ್ಲಿ ವಿವಿಧ ಪದಾಧಿಕಾರಿಗಳನ್ನು ಕಾಣಬಹುದು

ಮೈಸೂರು,ಜ.13(ಜಿಎ)–ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಹಾಗೂ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ವತಿಯಿಂದ ಜ.28 ರಂದು ಚಿತ್ರದುರ್ಗದ ಬಸವಮೂರ್ತಿ ಮಾದಾರ ಚನ್ನಯ್ಯ ಪೀಠದ ಬಳಿಯ ಮೈದಾನದಲ್ಲಿ ಶೋಷಿತರ ಜಾಗೃತಿ ಸಮಾವೇಶ ಆಯೋಜಿಸಲಾಗಿದೆ ಎಂದು ಸಂಚಾಲಕ ಮಾವಳ್ಳಿ ಶಂಕರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯದ ಶೋಷಿತ ಸಮುದಾಯಗಳ ಸಚಿವರು, ಮುಖಂಡರು ಪಾಲ್ಗೊಳ್ಳಲಿದ್ದಾರೆ. ಸಮಾವೇಶದಲ್ಲಿ ಐದು ಲಕ್ಷಕ್ಕೂ ಹೆಚ್ಚು ಜನರು ರಾಜ್ಯದ ವಿವಿಧೆಡೆಯಿಂದ ಆಗಮಿಸಲಿದ್ದಾರೆ ಎಂದರು.

ಎಚ್.ಕಾಂತರಾಜು ವರದಿಯನ್ನು ರಾಜ್ಯ ಸರ್ಕಾರ ಸ್ವೀಕರಿಸಿ ಯಥಾವತ್ತಾಗಿ ಅಂಗೀಕರಿಸಿ ಜಾರಿಗೊಳಿಸಬೇಕು, ಕೇಂದ್ರ ಸರ್ಕಾರ ಜಾತಿವಾರು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ನಡೆಸಬೇಕು, ಇಡಬ್ಲುಎಸ್ ಶೇ.10ರ ಮೀಸಲಾತಿಯನ್ನು ಕೂಡಲೇ ರದ್ದು ಪಡಿಸಬೇಕು, ಮಹಿಳಾ ರಾಜಕೀಯ ಮೀಸಲಾತಿ ಅಡಿಯಲ್ಲಿ ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಹಿಂದುಳಿದ ಜಾತಿಗಳು ಮತ್ತು ಅಲ್ಪಸಂಖ್ಯಾತರಿಗೆ ಅವಕಾಶ ಕಲ್ಪಿಸಬೇಕು, ಜನಸಂಖ್ಯೆಗೆ ಅನುಗುಣವಾಗಿ ಶೇಕಡಾವಾರು ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು, ಖಾಸಗೀ ಕ್ಷೇತ್ರಕ್ಕೂ ಮೀಸಲಾತಿ ವಿಸ್ತರಿಸಬೇಕೆಂದು ಸಮಾವೇಶದಲ್ಲಿ ಒತ್ತಾಯಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಹಾ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ, ಕೆ. ವೆಂಕಟಸುಬ್ಬರಾಜು, ಕೃಷ್ಣಮೂರ್ತಿ, ರಾಮಕೃಷ್ಣಪ್ಪ, ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಉಪಸ್ಥಿತರಿದ್ದರು.

# ಇಂದು ಬಸವ ಮಾರ್ಗ ಫೌಂಡೇಷನ್ ವಾರ್ಷಿಕೋತ್ಸವದ ಸಮಾರೋಪ



ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಸವ ಮಾರ್ಗ ಫೌಂಡೇಷನ್ ಸುಸ್ಥಾಪಕ ಎಸ್.ಬಸವರಾಜು ಮಾತನಾಡಿದರು. ಚಿತ್ರದಲ್ಲಿ ರಾಕೇಶ್, ಮನೋಜ್ ಅವರನ್ನು ಕಾಣಬಹುದು

ಮೈಸೂರು,ಜ.13(ಜಿಎ)–ಮೈಸೂರಿನ ಬಸವಮಾರ್ಗ ಫೌಂಡೇಷನ್ ಸಂಸ್ಥೆಯ 4ನೇ ವರ್ಷದ ವಾರ್ಷಿಕೋತ್ಸವದ ಸಮಾರೋಪ ಸಮಾರಂಭದ ಕಾರ್ಯಕ್ರಮವನ್ನು ಜ.14ರಂದು ಸಂಸ್ಥೆ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆ ಸಂಸ್ಥಾಪಕ ಎಸ್. ಬಸವರಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 4ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಸಂಸ್ಥೆ ವತಿಯಿಂದ ಜ.5ರಿಂದ 10 ದಿನಗಳ ಉಚಿತ ಕುಡಿತ ಬಿಡಿಸುವ ಶಿಬಿರವನ್ನು ಆಯೋಜಿಸಲಾಗಿತ್ತು. ಇದರಲ್ಲಿ 200ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಪ್ರಯೋಜನ ಪಡೆದಿದ್ದಾರೆ. ಇದಕ್ಕೂ ಮೊದಲು ಸಂಸ್ಥೆ 35 ಯಶಸ್ವಿ ಶಿಬಿರಗಳನ್ನು ಆಯೋಜನೆ ಮಾಡಿದ್ದು, 4000ಕ್ಕೂ ಹೆಚ್ಚು ಮಂದಿ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದು, ವ್ಯಸನ ಮುಕ್ತರಾಗಿದ್ದಾರೆ ಎಂದು ತಿಳಿಸಿದರು.

ಜ. 14 ರಂದು ಬೆಳಗ್ಗೆ 11ಕ್ಕೆ ಸಂಸ್ಥೆಯ ಆವರಣದಲ್ಲಿ ಸಮಾರೋಪ ಸಮಾರಂಭ ಏರ್ಪಡಿಸಿದ್ದು, ಶಾಸಕ ಕೆ. ಹರೀಶ್ ಗೌಡ, ಕೆ.ಆರ್. ಆಸ್ಪತ್ರೆಯ ಮನೋವೈದ್ಯ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಎನ್. ರವೀಶ್, ವಿಜಯನಗರದ ಬ್ರಹ್ಮಕುಮಾರಿ ಈಶ್ವರಿ ವಿದ್ಯಾಲಯದ ರಾಜಯೋಗ ಉಪನ್ಯಾಸಕರಾದ ಬಿ.ಕೆ. ಸಂಧ್ಯಾ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ರಾಕೇಶ್, ಮನೋಜ್ ಉಪಸ್ಥಿತರಿದ್ದರು.

# ರೈತ ಮಹಿಳೆಯರ ಸರ, ಉಂಗುರ ದೋಚಿದ ಖದೀಮರು

**ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದವರಿಗೆ ಕಾಫಿ ಕೊಡಲು ಹೋಗುತ್ತಿದ್ದ ಇಬ್ಬರು ಮಹಿಳೆಯರಿಗೆ ಚಾಕು ತೋರಿಸಿ ಬೆದರಿಕೆ; ಸುಲಿಗೆ**



ಸರ ಕಳೆದುಕೊಂಡ ಮಹಿಳೆಯರು

ಬೆಟ್ಟದಪುರ, ಜ.13– ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದವರಿಗೆ ಕಾಫಿ ಕೊಂಡೊಯ್ಯುತ್ತಿದ್ದ ಮಹಿಳೆಯರಿಬ್ಬರನ್ನು ನಾಲ್ವರು ಅಪರಿಚಿತರು ತಡೆದು ಚಾಕುವಿನಿಂದ ಹಲ್ಲೆ ನಡೆಸಿ ಬಂಗಾರದ ಮಾಂಗಲ್ಯ ಸರ ಮತ್ತು ಉಂಗುರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಪೊಲೀಸ್ ಠಾಣೆ ವ್ಯಾಪ್ತಿಯ ಸಂಗರಶೆಟ್ಟಿಹಳ್ಳಿ–ಅತ್ತಿಗೋಡು ಮುಖ್ಯ ರಸ್ತೆಯಲ್ಲಿ ನಡೆದಿದೆ.

ಸಂಗರಶೆಟ್ಟಿಹಳ್ಳಿ ಗ್ರಾಮದ ವಾಸಿಗಳಾದ ಸ್ವಾತಿ ಮತ್ತು ರಮ್ಯಾ ಒಡವೆಗಳನ್ನು ಕಳೆದುಕೊಂಡವರಾಗಿದ್ದಾರೆ. ಚಾಕುವಿನಿಂದ ಹಲ್ಲೆ ನಡೆಸಿದ್ದರಿಂದ ಇಬ್ಬರಿಗೂ ಸಣ್ಣಪುಟ್ಟ ಗಾಯಗಳಾಗಿವೆ.

ಶುಕ್ರವಾರ ಸಂಜೆ 6 ಗಂಟೆ ಸಮಯದಲ್ಲಿ ಗದ್ದೆ ಕೊಯ್ಲು ಕೆಲಸ ಮಾಡುತ್ತಿದ್ದ ಕುಟುಂಬದವರಿಗೆ ಕಾಫಿ ಕೊಡಲು ನಡೆದುಕೊಂಡು ಹೋಗುತ್ತಿದ್ದ ಸಂಗರ ಶೆಟ್ಟಹಳ್ಳಿಯ ಸ್ವಾತಿ ಮತ್ತು ರಮ್ಯಾ ಅವರನ್ನು ಹೆಲ್ಮೆಟ್ ಧರಿಸಿ ಎರಡು ದ್ವಿಚಕ್ರ ವಾಹನದಲ್ಲಿ ಬಂದ ನಾಲ್ವರು ಅಪರಿಚಿತರು, ಅಡ್ಡಗಟ್ಟಿ ವಿಳಾಸವನ್ನು ಕೇಳುವ ನೆಪದಲ್ಲಿ ಅವರ ಕುತ್ತಿಗೆಯಲ್ಲಿದ್ದ 60 ಗ್ರಾಂನ ಮಾಂಗಲ್ಯ ಸರ ಹಾಗೂ ಕೈಯ್ಯಲ್ಲಿದ್ದ 9 ಗ್ರಾಂನ ಉಂಗುರ ಕಿತ್ತುಕೊಂಡು ಪರಾರಿಯಾಗಲೆತ್ನಿಸಿದರು.

ಇದಕ್ಕೆ ಪ್ರತಿರೋಧ ತೋರಿದ ಹಿನ್ನೆಲೆಯಲ್ಲಿ ಚಾಕುವಿನಿಂದ ಹಲ್ಲೆ ಮಾಡಿ, ಅವರನ್ನು ಗಾಯಗೊಳಿಸಿ ಪರಾರಿಯಾಗಿದ್ದಾರೆ. ಗಲಾಟೆ ನೋಡಿ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದವರು ಬಂದು ಹುಡುಕಾಡಿದರೂ ಅಷ್ಟರಲ್ಲಿ ಖದೀಮರು ಪರಾರಿಯಾಗಿದ್ದರು. ಈ ಸಂಬಂಧ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶನಿವಾರ ಡಿವೈಎಸ್ಪಿ ಗೋಪಾಲಕೃಷ್ಣ, ಸಿಪಿಐ ದೀಪಕ್, ಪಿಎಸ್‌ಐ ಪ್ರಕಾಶ್ ಎಂ ಎತ್ತಿನಮನಿ ಸ್ಥಳಕ್ಕೆ ಆಗಮಿಸಿ, ಪರಿಶೀಲನೆ ನಡೆಸಿದರು. ಜನವರಿ ತಿಂಗಳಲ್ಲಿ ರೈತರು ಬೆಳೆದ ರಾಗಿ ಮತ್ತು ಭತ್ತ ಕಟಾವಿಗೆ ಬರಲಿದ್ದು, ಪ್ರತಿದಿನ ರೈತ ಮಹಿಳೆಯರು ಸಂಜೆ ಆರೇಳು ಗಂಟೆಯವರೆಗೂ ಜಮೀನಿನಲ್ಲಿ ಕೆಲಸ ಮಾಡಬೇಕಾದ ಪರಿಸ್ಥಿತಿ ಇದೆ. ಈ ಘಟನೆಯಿಂದಾಗಿ ಗ್ರಾಮದ ಮಹಿಳೆಯರು ಆತಂಕಗೊಂಡಿದ್ದಾರೆ.

ಕೂಡಲೇ ಪೊಲೀಸ್ ಗಸ್ತು ವ್ಯವಸ್ಥೆ ಮಾಡಬೇಕೆಂದು ರೈತ ಮಹಿಳೆಯರು ಆಗ್ರಹಿಸಿದ್ದಾರೆ. ಮಹಿಳೆಯರು ಅಪರಿಚಿತ ವ್ಯಕ್ತಿಗಳು ಬಂದು ವಿಳಾಸ ಕೇಳುವ ನೆಪದಲ್ಲಿ ನಿಮ್ಮ ಬೆಲೆಬಾಳುವ ಒಡವೆಗಳನ್ನು ದೋಚುವ ಸಾಧ್ಯತೆ ಇರುವುದರಿಂದ ಬೆಲೆಬಾಳುವ ಆಭರಣ ಧರಿಸಿ ಹೊಲದಲ್ಲಿ ಕೆಲಸಕ್ಕೆ ಹೋಗದಂತೆ ಪೊಲೀಸರು ಮನವಿ ಮಾಡಿದ್ದಾರೆ.

# ನಾಳೆ ಮಕರ ಸಂಕ್ರಾಂತಿಯ ಅಂಗವಾಗಿ ಲಕ್ಷ ದೀಪೋತ್ಸವ



ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪೂಜಾ ಸಮಿತಿ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿದರು. ಚಿತ್ರದಲ್ಲಿ ಸಮಿತಿಯ ಪದಾಧಿಕಾರಿಗಳನ್ನು ಕಾಣಬಹುದು

ಮೈಸೂರು, ಜ.13(ಜಿಎ)–ಮಕರ ಸಂಕ್ರಾತಿಯ ಅಂಗವಾಗಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶಬರಿ ಮಲೈ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಜ. 15 ರ ಸಂಜೆ 6.30ಕ್ಕೆ ಲಕ್ಷ ದೀಪೋತ್ಸವ ಆಯೋಜಿಸಲಾಗಿದೆ ಎಂದು ಪೂಜಾ ಸಮಿತಿ ಅಧ್ಯಕ್ಷ ಶ್ರೀನಿವಾಸ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಬರಿ ಮಲೆಯಲ್ಲಿ ಮಕರ ಜ್ಯೋತಿ ದರ್ಶನವಾದ ನಂತರ ದೇವಾಲಯದಲ್ಲಿ ಲಕ್ಷ ದೀಪೋತ್ಸವ ಆರಂಭವಾಗಲಿದ್ದು, ಶಾಸಕರಾದ ಟಿ.ಎಸ್. ಶ್ರೀವತ್ಸ, ಜಿ.ಟಿ. ದೇವೇಗೌಡ, ಕೆ.ಹರೀಶ್‌ಗೌಡ, ಸಂಸದ ಪ್ರತಾಪ್‌ಸಿಂಹ ಆಗಮಿಸಲಿದ್ದಾರೆ. ದೀಪದ ವ್ಯವಸ್ಥೆ ದೇವಸ್ಥಾನವೇ ಮಾಡಲಿದ್ದು, ಭಕ್ತಾಧಿಗಳು ಆಗಮಿಸಿ ದೀಪ ಹಚ್ಚ ಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪೂಜಾ ಸಮಿತಿಯ ಆರ್. ಹರಿದಾಸ್, ಕೃಷ್ಣೋಜಿರಾವ್, ಇಎನ್. ಸುರೇಂದ್ರ್, ಕೆಎಂ. ಬಸವಾರಾಧ್ಯ ಸುನಿಲ್ ಕುಮಾರ್ ಉಪಸ್ಥಿತರಿದ್ದರು.

# ಮೈಸೂರಲ್ಲಿ ಸುಗಮವಾಗಿ ನಡೆದ ಕೆ–ಸೆಟ್ ಪರೀಕ್ಷೆಗಳು



ಶನಿವಾರ ನಡೆದ ಕೆ–ಸೆಟ್ ಪರೀಕ್ಷೆ ಬರೆಯುತ್ತಿರುವ ಪರೀಕ್ಷಾರ್ಥಿಗಳು

ಮೈಸೂರು, ಜ. 13(ಆರ್‌ಕೆ)– ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಹತೆ ಪಡೆಯಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ–ಸೆಟ್)ಯು ಇಂದು ಮೈಸೂರಲ್ಲಿ ಸುಗಮವಾಗಿ ನಡೆಯಿತು.

ಮೈಸೂರಿನ 23 ಕೇಂದ್ರಗಳಲ್ಲಿ ನಡೆದ ಪರೀಕ್ಷೆಗೆ 10,246 ಮಂದಿ ನೋಂದಣಿ ಮಾಡಿಕೊಂಡಿದ್ದರಾದರೂ, 9243 ಮಂದಿ ಅಭ್ಯರ್ಥಿಗಳು ಮಾತ್ರ ಹಾಜರಾಗಿ ಪರೀಕ್ಷೆ ಬರೆದಿದ್ದು, 1003 ಮಂದಿ ಗೈರಾದರು. ಬೆಳಗ್ಗೆ 10ರಿಂದ 11 ಮತ್ತು ಮಧ್ಯಾಹ್ನ 12 ರಿಂದ 1 ಗಂಟೆವರೆಗೆ ಎರಡು ಸೆಷನ್‌ಗಳಲ್ಲಿ ಕೆ–ಸೆಟ್ ಪರೀಕ್ಷೆ ನಡೆಯಿತು. ಬೆಳಗ್ಗೆ 9,242 ಮಂದಿ ಹಾಜರಾದರೆ, ಮಧ್ಯಾಹ್ನದ ಸೆಷನ್‌ನಲ್ಲಿ 9,239 ಅಭ್ಯರ್ಥಿಗಳು ಹಾಜರಾಗಿ ಪರೀಕ್ಷೆ ಎದುರಿಸಿದರು.

ಟೆರಿಷಿಯನ್, ಸೆಂಟ್ ಫಿಲೋಮಿನಾಸ್, ವಿಭಜಿತ ಮಹಾರಾಜ, ಪೀಪಲ್ ಪಾರ್ಕ್‌ನ ಸರ್ಕಾರಿ ಬಾಲಕಿಯರ ಕಾಲೇಜು, ಡಿ. ಬನುಮಯ್ಯ, ಗೋಪಾಲಸ್ವಾಮಿ ಶಿಶು ವಿಹಾರ, ಶಾರದಾ ವಿಲಾಸ, ನಟರಾಜ, ಜ್ಞಾನ ಗಂಗಾ, ಕಾವೇರಿ, ಸರ್ಕಾರಿ ಪಿಯು ಕಾಲೇಜು, ಎಸ್‌ಡಿಎಂ, ಜ್ಞಾನೋದಯ, ವಿಜಯ ವಿಠಲ, ದೇವರಾಜ ಅರಸ್ ಬಾಲಕಿಯರ ಕಾಲೇಜು, ಮಹಾರಾಣಿ, ಮರಿಮಲ್ಲಪ್ಪ, ಮಹಾರಾಜ, ಮಾತೃ ಮಂಡಳಿ, ಮಹಾಜನ, ವಿವೇಕಾನಂದ ಹಾಗೂ ಎಂಜಿ ಕೊಪ್ಪಲು ಸರ್ಕಾರಿ ಪಿಯು ಕಾಲೇಜುಗಳಲ್ಲಿ ಕೆ–ಸೆಟ್ ಪರೀಕ್ಷೆಗಳು ಸುಲಲಿತವಾಗಿ ನಡೆದವು.

ಎಲ್ಲಾ ಕಾಲೇಜು ಕೇಂದ್ರಗಳಲ್ಲಿ ನೋಂದಣಿ ಸಂಖ್ಯೆಗಳನ್ನು ನಮೂದಿಸಿ ಗೊಂದಲವಾಗದಂತೆ ಸಿದ್ಧತೆ ಮಾಡಲಾಗಿತ್ತಲ್ಲದೇ, ಕುಡಿಯುವ ನೀರು, ಶೌಚಾಲಯ, ಮಾರ್ಗಸೂಚಿಗಳು ಸೇರಿದಂತೆ ಅಭ್ಯರ್ಥಿಗಳಿಗೆ ಅನುಕೂಲವಾಗುವಂತೆ ಸರ್ವ ರೀತಿಯಲ್ಲಿ ಸಿದ್ಧತೆ ಮಾಡಲಾಗಿತ್ತು.

ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ನೇತೃತ್ವದಲ್ಲಿ ನಡೆದ ಪರೀಕ್ಷೆಗಳನ್ನು ಪದವಿ ಪೂರ್ವ ಶಿಕ್ಷಣ ಮತ್ತು ವೃತ್ತಿ ತರಬೇತಿ ಇಲಾಖೆ ಮೈಸೂರು ಜಿಲ್ಲಾ ಉಪನಿರ್ದೇಶಕ ಎಂ. ಮರಿಸ್ವಾಮಿ ಜಿಲ್ಲಾ ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳನ್ನು ತಲುಪಿಸಿ ವಾಪಸ್ ತರುವ ಮತ್ತು ಯಾವುದೇ ತೊಂದರೆ ಇಲ್ಲದಂತೆ ಪರೀಕ್ಷಾ ಪ್ರಕ್ರಿಯೆ ಪೂರ್ಣಗೊಳಿಸುವಲ್ಲಿ ಸಮರ್ಥವಾಗಿ ಮೇಲ್ವಿಚಾರಣೆ ನಡೆಸಿದರು.

ಜಿಪಿಎಸ್ ಅಳವಡಿಸಿದ್ದ ವಾಹನಗಳಲ್ಲಿ ಶಸ್ತ್ರಸಜ್ಜಿತ ಪೊಲೀಸ್ ಸಿಬ್ಬಂದಿಗಳ ಭದ್ರತೆಯಲ್ಲಿ ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳನ್ನು ತಲುಪಿಸಿ ಸುರಕ್ಷಿತವಾಗಿ ಖಜಾನೆಗೆ ತಲುಪಿಸುವಲ್ಲಿ ಅಧಿಕಾರಿಗಳು ಸಮರ್ಥವಾಗಿ ಕೆಲಸ ಮಾಡಿದ್ದಾರೆ.

ಪ್ರತೀ ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತಲ್ಲದೆ, ಸುತ್ತಲಿನ 200 ಮೀ. ಸರಹದ್ದಿನಲ್ಲಿ ನಿಷೇಧಾಜ್ಞೆ ಜಾರಿ ಮಾಡಿ ಪರೀಕ್ಷೆ ನಡೆಯುವ ಅವಧಿಯಲ್ಲಿ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಿಸಿ ಪರೀಕ್ಷಾ ಅಕ್ರಮ ನಡೆಯದಂತೆ ಎಚ್ಚರ ವಹಿಸಲಾಗಿತ್ತು.

ಕರ್ನಾಟಕ ರಾಜ್ಯದಾದ್ಯಂತ 1,17,302 ಅಭ್ಯರ್ಥಿಗಳು ಕೆ–ಸೆಟ್ ಪರೀಕ್ಷೆಗೆ ಹಾಜರಾಗಿದ್ದರು. ಎಲ್ಲಿಯೂ ಗೊಂದಲ, ಪರೀಕ್ಷಾ ಅಕ್ರಮಗಳು ನಡೆದ ಬಗ್ಗೆ ವರದಿಯಾಗಿಲ್ಲ.

ಈ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೆ–ಸೆಟ್ ಪರೀಕ್ಷೆ ನಡೆಯುತ್ತಿತ್ತಾದರೂ, ಕೆಲ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ಸರ್ಕಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ಕ್ಕೆ ಈ ಜವಾಬ್ದಾರಿ ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

# ಸಮೃದ್ಧಿ ಸಂಕೇತ ಸಂಕ್ರಾಂತಿ







ಬನ್ನೂರು ಕೆ.ರಾಜು
ಮೊ. 9481533167

“ಸಂಭ್ರಮದ ಸಂಕೇತವಾಗಿರುವ ಮಕರ ಸಂಕ್ರಾಂತಿಯನ್ನು ಅರ್ಥಪೂರ್ಣವಾಗಿ ಆಚರಿಸೋಣ. ಜೀವನ ಮೌಲ್ಯಗಳುಳ್ಳ ಪುಣ್ಯಕಾರ್ಯಗಳನ್ನೇ ಮಾಡೋಣ. ಪರಿಶುದ್ಧ ಬದುಕನ್ನು ಬಾಳೋಣ. ಲೋಕವನ್ನು ಬೆಳಕಿನೆಡೆಗೆ ನಡೆಸೋಣ. ಸಾರ್ಥಕ ಜೀವನ ನಡೆಸೋಣ, ಸಂಪದ್ಭರಿತ ಬದುಕನ್ನು ಕಟ್ಟೋಣ, ಸರ್ವರಲ್ಲೂ ಸಹಬಾಳ್ವೆಯನ್ನು ಮೆರೆಯೋಣ.



ಹಬ್ಬ-ಹರಿದಿನ, ಆಚರಣೆಗಳು ನಮ್ಮ ಭವ್ಯ ಭಾರತದ ಸಂಸ್ಕೃತಿ-ಪರಂಪರೆಯ ಅವಿಭಾಜ್ಯ ಅಂಗಗಳು. ಐತಿಹಾಸಿಕ, ಪೌರಾಣಿಕ ಹಾಗೂ ಧಾರ್ಮಿಕ ವಿಶ್ವಾಸದ ತಳಹದಿಯುಳ್ಳ ನಮ್ಮ ಹಬ್ಬಗಳ ಆಚರಣೆ ಸಂಸ್ಕೃತಿಯ ದೀಪಮಾಲೆಗಳೂ ಹೌದು. ಹಬ್ಬಗಳೆಂದರೆ ಅದೇನೋ ಸಂತಸ, ಉಲ್ಲಾಸ, ಸಡಗರ, ಸಂಭ್ರಮ. ಹಬ್ಬಗಳು ಮಾನವನ ಬದುಕಿನ ಹರ್ಷೋಲ್ಲಾಸಗಳ ರಸಪೂರ್ಣ ಸಂದರ್ಭ. ನೊಂದ ಜೀವಿಗಳ ಪಾಲಿಗಂತೂ ನಲಿವಿನ ಕ್ಷಣಗಳನ್ನು ಕಿಂಚಿತ್ತಾದರೂ ಅನುಭವಿಸುವ ಬದುಕಿನ ಸುಸಂದರ್ಭ. ಹಬ್ಬಗಳು ನಮ್ಮ ದೇಹ ಮತ್ತು ಮನಸ್ಸುಗಳಿಗೆ ಪುನಶ್ಚೇತನ ನೀಡುವ 'ಸಂಜೀವಿನಿ' ಎಂದರೂ ಅತಿಶಯವಾಗದು. ನಮ್ಮ ಸಾಮಾಜಿಕ ಬದುಕಿಗೆ ಹೊಸ ಆಯಾಮಗಳನ್ನು ನೀಡುವ ಚೇತೋಹಾರಿ ಸತ್ವ ಹಬ್ಬಗಳಲ್ಲಿದೆ. ಈ ದಿಸೆಯಲ್ಲಿ ಹಬ್ಬಗಳ ಆಚರಣೆಯ ಹಿನ್ನೆಲೆಯ ಒಳನೋಟ ಅರಿತರೆ ಆಚರಣೆ ಅರ್ಥಪೂರ್ಣವೆನಿಸುತ್ತದೆ.

ನಮ್ಮ ದಿವ್ಯ ಭಾರತದ ಹಬ್ಬಗಳ ಸಾಲಿನಲ್ಲಿ 'ಸಂಕ್ರಾಂತಿ' ಪ್ರಮುಖವಾದ ಹಬ್ಬಗಳಲ್ಲೊಂದು. ವಿಶೇಷವಾಗಿ ರೈತಾಪಿ ಬಂಧುಗಳಿಗೆ, ಕೃಷಿಕರಿಗೆ ಇದು ತುಂಬಾ ಮಹತ್ವದ ಹಬ್ಬ. ಹೊಲ-ಗದ್ದೆಗಳ ಬೆಳೆ ಫಸಲಾಗಿ, ದವಸ-ಧಾನ್ಯಗಳು ಮನೆ ಸೇರಿ ಸುಗ್ಗಿಯ ಸಡಗರದಲ್ಲಿ ಹರ್ಷೋಲ್ಲಾಸ ಗರಿಗೆದರಿ ನರ್ತಿಸುವ ಸಂಭ್ರಮದ ಹಬ್ಬವೇ ಸಂಕ್ರಾಂತಿ. ನಮ್ಮ ನಾಡಿನ ಕವಿಗಳು ತಮ್ಮ ಕವಿತೆಗಳ ಮೂಲಕ ಸಂಕ್ರಾಂತಿಗೆ ಸಂಭ್ರಮದ ಸ್ವಾಗತಕೋರಿ, ಜನಮನವನ್ನು ಮುದಗೊಳಿಸಿದ್ದಾರೆ. ಸುಗ್ಗಿಯನ್ನು ಒಂದು ಚೇತನವಾಗಿ ಕಾಣುವ ಮಹಾಕವಿ ಕುವೆಂಪು ಅವರ 'ಸುಗ್ಗಿ ಬರುತಿದೆ' ಕವನ, ಕಣ್ಣಿಗೆ ಕಟ್ಟುವ ಚಿತ್ರಗಳಿಂದ ಹೊಸ ಚೈತನ್ಯ ನೀಡುತ್ತದೆ. ಕವಿ ಕುವೆಂಪು ಸುಗ್ಗಿಯನ್ನು ಕವಿತೆಯಲ್ಲೇ ಸಂಭ್ರಮದಿಂದ ಕುಣಿಸುತ್ತಾರೆ.

“ಅಡಿಯ ಗೆಜ್ಜೆ ನಡುಗೆ ಹೆಜ್ಜೆಯಿಡುತ
ಸುಗ್ಗಿ ಬರುತಿದೆ!
ಸುಗ್ಗಿ ಬರೆ ಹಿಗ್ಗಿತಿರೆ ಸಗ್ಗ
ಸೊಗವ ತರುತಿದೆ!
ಕಣೆವೆಯಿಳಿದು ತೆಮರನೇರಿ
ತರುಗಳಲ್ಲಿ ತಳಿರ ಹೇರಿ
ಹೊಸತು ಜೀವ ಕಳೆಯ ಬೀರಿ
ಸುಗ್ಗಿ ಮೂಡುತಿರುವುದು
ಬನದ ಬಿನದದಿನಿದು ನಿನದು
ಮನದೊಳಾಡುತಿರುವುದು!”

ಮಕರ ಸಂಕ್ರಾಂತಿ ಆಚರಣೆಯ ಸುಸಂದರ್ಭದಲ್ಲಿ ಸಂಕ್ಷಿಪ್ತವಾಗಿ ಅದರ ಹಿನ್ನೆಲೆ ನೋಡೋಣ. 'ಶಬ್ದಕಲ್ಪದ್ರುಮ'ದಲ್ಲಿ ಹೇಳಲಾಗಿರುವಂತೆ ಗ್ರಹಗಳು ರಾಶಿಯಿಂದ ಮತ್ತೊಂದು ರಾಶಿಗೆ ಹೋಗಿ ಸೇರುವುದಕ್ಕೆ 'ಸಂಕ್ರಾಂತಿ' ಎಂದು ಹೆಸರು. ಹಾಗೆಯೇ ಸೂರ್ಯನು ಮೇಷ, ವೃಷಭ ಮುಂತಾದ ಹನ್ನೆರಡು ರಾಶಿಗಳಲ್ಲಿ ಸಂಚರಿಸುವ ಹನ್ನೆರಡು ತಿಂಗಳು ಸಂಕ್ರಾಂತಿಯೆನಿಸುತ್ತವೆ. ಸೂರ್ಯನು ಪ್ರತಿ ತಿಂಗಳು ಬೇರೆ ಬೇರೆ ರಾಶಿಯನ್ನು ಪ್ರವೇಶಿಸುವುದರಿಂದ ಆಯಾಯ ತಿಂಗಳನ್ನು ಸಂಕ್ರಾಂತಿ ಎಂದು ಕರೆಯುತ್ತಾರೆ. ಸೂರ್ಯನು ಬೇರೆ ರಾಶಿಯನ್ನು ಪ್ರವೇಶಿಸುವ ಕಾಲವನ್ನು 'ಸಂಕ್ರಮಣ ಕಾಲ' ಎಂದಿದ್ದಾರೆ. ಹನ್ನೆರಡು ಸಂಕ್ರಮಣಗಳು ವರ್ಷದಲ್ಲಿವೆ. ದಕ್ಷಿಣಾಯಣ, ಉತ್ತರಾಯಣಗಳಿಗೆ ಅನುಸಾರವಾಗಿ ಒಂದೊಂದು ಆಯನಕ್ಕೆ ಆರು ಸಂಕ್ರಮಣಗಳನ್ನು ಹಂಚಿದ್ದಾರೆ. ಹೀಗೆ ಮಕರದಿಂದ ಹಿಡಿದು ಮಿಥುನದವರೆಗಿನ ಆರು ಸಂಕ್ರಾಂತಿಗಳು ಉತ್ತರಾಯಣದಲ್ಲಿ ಬರುತ್ತವೆ. ಕಟಕದಿಂದ ಹಿಡಿದು ಧನಸ್ಸಿನವರೆಗೆ ಆರು ಸಂಕ್ರಾಂತಿಗಳು ದಕ್ಷಿಣಾಯಣದಲ್ಲಿ ಬರುತ್ತವೆ.

ಸೂರ್ಯನು ಬೇರೆ ರಾಶಿಯನ್ನು ಪ್ರವೇಶಿಸುವುದರ ಜೊತೆಗೆ ಅವನ ಗತಿಯೂ ಬದಲಾಗುವುದು ಮಕರ ಹಾಗೂ ಕಟಕ ರಾಶಿಗಳಲ್ಲಿ. ಕಟಕ ರಾಶಿ ಪ್ರವೇಶಿಸಿದಾಗ ಸೂರ್ಯನು ದಕ್ಷಿಣ ದಿಕ್ಕಿನಲ್ಲಿ ಸಂಚರಿಸಲು ಆರಂಭಿಸುತ್ತಾನೆ. ಅದೇ ಮಕರ ರಾಶಿ ಪ್ರವೇಶಿಸಿದಾಗ ಅವನ ಗತಿ ಉತ್ತರಕ್ಕೆ ಸಂಚರಿಸುವುದು. ಹೀಗಾಗಿ ಈ ಎರಡು ಕಾಲಗಳನ್ನು 'ಪುಣ್ಯಕಾಲ'ಗಳೆಂದು ಕರೆಯುತ್ತಾರೆ. ಕಟಕದಿಂದ ಧನಸ್ಸಿನವರೆಗೆ ಸೂರ್ಯನು ದಕ್ಷಿಣ ದಿಕ್ಕಿಗೆ ಸಂಚರಿಸುವುದು ದಕ್ಷಿಣಾಯಣ. ಇದನ್ನು ಪಿತೃಯಾನ ಎನ್ನುತ್ತಾರೆ. ದಕ್ಷಿಣಾಯಣದಲ್ಲಿ ಪಿತೃಗಳಿಗೆ ಪ್ರಾಧಾನ್ಯತೆ. ಅದೇ ಸೂರ್ಯನು ಮಕರದಿಂದ ಮಿಥುನದವರೆಗೆ ಉತ್ತರ ದಿಕ್ಕಿಗೆ ಸಂಚರಿಸುವಾಗ ಉತ್ತರಾಯಣ. ಇದನ್ನು ದೇವಯಾನ ಎನ್ನುತ್ತಾರೆ. ಉತ್ತರಾಯಣದಲ್ಲಿ ದೇವತೆಗಳಿಗೆ ಪ್ರಾಧಾನ್ಯತೆ.

**ಸಂಕ್ರಾಂತಿ ದೈವ ಸೂರ್ಯ:** ಸಂಕ್ರಾಂತಿ ಹಬ್ಬಕ್ಕೆ ಸೂರ್ಯದೇವನೇ ಕೇಂದ್ರ ಬಿಂದು. ಸೂರ್ಯ ಭಾರತೀಯ ಆಧ್ಯಾತ್ಮಿಕ ಚಿಂತನೆಯ ಮಹತ್ತು. ವೇದೋಪನಿಷತ್ತುಗಳಲ್ಲಿ ಅನಂತರದ ಕಾವ್ಯ ಪುರಾಣಗಳಲ್ಲಿ ಸೂರ್ಯ ಕಲ್ಪನೆ ಬೆಳೆದು ಸಾಗಿ ಬಂದ ರೀತಿಯನ್ನು ಅರಿಯುವುದೇ ಒಂದು ವಿಸ್ಮಯದೋಪಾದಿಯ ಅನುಭವ. ಆದಿತ್ಯ, ಸವಿತೃ ಭಾಸ್ಕರ, ರವಿ, ಸಹಸ್ರರಶ್ಮಿ, ಅಂಶುಮಾಲಿ- ಈ ರೀತಿ ಕರೆಸಿಕೊಳ್ಳುವ ಸೂರ್ಯನ ನಾಮಾಂಕಿತಗಳಲ್ಲಿ ಸೂರ್ಯ ಚಿಂತನೆಯ ವಿವಿಧ ಮುಖಗಳು ತೆರೆದುಕೊಳ್ಳುತ್ತವೆ. ಚಲನೆಯ ಸಂಕೇತವಾಗಿ ನಿತ್ಯ ನಡೆಯುತ್ತಿರುವುದರಿಂದ ಹಾಗೂ ಸೃಷ್ಟಿಯ ಸಂಕೇತವಾಗಿ ಸಕಲ ಜೀವಿಗಳ ಜನ್ಮಕ್ಕೆ ಕಾರಣನಾಗಿರುವುದರಿಂದ ಸೌರ ಮಂಡಲದ ಕೇಂದ್ರವಾಗಿರುವ ಈ ತೇಜೋಗೋಲವನ್ನು 'ಸೂರ್ಯ' ಎನ್ನಲಾಗುತ್ತದೆಂದು ಯಾಸ್ಕರು ನಿರ್ವಚಿಸಿದ್ದಾರೆ. ಜಗತ್ತಿಗೆ ಮೊದಲ ಮಹಾಮಾತೆ ಅದಿತಿಯ ಸುಪುತ್ರನಾಗಿ ಹುಟ್ಟಿ ಸೂರ್ಯ ಬ್ರಹ್ಮಾಂಡದ ಮೊದಲಿಗನಾದುದರಿಂದ ಆತ 'ಆದಿತ್ಯ'. ಹಾಗೆಯೇ ಇಲ್ಲಿರುವ ಎಲ್ಲ ಜೀವಿಗಳನ್ನೂ ವಿಕಾಸದತ್ತ ಕರೆದೊಯ್ಯುವುದರಿಂದ ಆತ 'ಸವಿತೃ'. ವಿದ್ವಾಂಸ, ಚಿಂತಕ ದೇವುಡು ನರಸಿಂಹ ಶಾಸ್ತ್ರಿಗಳು ಸೂರ್ಯನನ್ನು ಕುರಿತು “ಈ ಸವಿತೃ ದೇವನು ತನ್ನ ದಿವಾಕಿರಣದಿಂದ ಸೂರ್ಯನಾಗಿ, ನಿಶಾಕಿರಣದಿಂದ ಚಂದ್ರನಾಗಿ, ಸ್ಥಿರಾಕಿರಣದಿಂದ ಭೂಮಿಯಾಗಿ, ರಸಕಿರಣದಿಂದ ಜಲವಾಗಿ, ತೇಜಃ ಕಿರಣದಿಂದ ಅಗ್ನಿಯಾಗಿ, ಪ್ರಾಣಕಿರಣದಿಂದ ವಾಯುವಾಗಿ, ಶೂನ್ಯಕಿರಣದಿಂದ ಆಕಾಶವಾಗಿ ಈ ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿರುವನು” ಎಂದಿದ್ದಾರೆ. ಬಹುಶಃ ಇವು ಸೂರ್ಯನ ರಥಕ್ಕೆ ಏಳು ಕುದುರೆಗಳಿವೆ ಎನ್ನುವುದನ್ನು ಪ್ರತಿನಿಧಿಸುತ್ತವೆ. ಅರ್ಥಾತ್ ಈ ಏಳು ಕಿರಣಗಳು ಆ ಏಳು ಕುದುರೆಗಳನ್ನು ಸಂಕೇತಿಸುತ್ತವೆ.

ಈ ಚರಾಚರ ಜಗತ್ತಿನ ಪಾಲಿಗೆ ಕಾಲವನ್ನು ಅಳೆಯುವ ಒಂದು ಖಗೋಳ ಗಡಿಯಾರವೇ ಸೂರ್ಯ. ಸೂರ್ಯನ ಚಲನೆಯೇ ಕಾಲದ ಗಣನೆಗೆ ಬಹು ಮುಖ್ಯ ಆಧಾರ. ಸೌರವ್ಯೂಹದಲ್ಲಿ ಬದುಕಿರುವ ಎಲ್ಲ ಜೀವಿಗಳ ಆಯುಷ್ಯವನ್ನು ನಿಯಂತ್ರಿಸುವವನೂ ಸೂರ್ಯನೇ. ನಮ್ಮ ಪೂರ್ವಿಕರು ಸೂರ್ಯನನ್ನು ಯಮನ ತಂದೆ ಅರ್ಥಾತ್ ಕಾಲನ ತಂದೆಯೆಂದು ಕರೆದಿದ್ದಾರೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಸತ್ಯಸ್ಯಸತ್ಯವಿದು. “ಸೂರ್ಯ ಆತ್ಮಾ ಜಗತಃ ತಸ್ಥುಪಶ್ಚ” ಎನ್ನುತ್ತದೆ ವೇದ. ಸ್ಥಾವರ ಜಂಗಮಗಳೆಲ್ಲದ್ದಕ್ಕೂ ಸೂರ್ಯನೇ ಆತ್ಮಶಕ್ತಿ. ಈ ಜಗತ್ತಿನಲ್ಲಿರುವ ತೇಜಸ್ಸು ಸೂರ್ಯನಿಂದಲೇ ಪ್ರಾಪ್ತವಾಗಿರುವಂತದ್ದು. ಸೂರ್ಯ ಚಲನೆಯಿಂದಾಗುವ ಪ್ರಾತಃ ಸಂಧ್ಯೆ ಮತ್ತು ಸಾಯಂ ಸಂಧ್ಯೆಗಳು ಅತ್ಯಂತ ಪವಿತ್ರ ಕ್ಷಣಗಳೆಂದು ಪ್ರಾಚೀನ ಕಾಲದಿಂದಲೂ ಹಿರಿಯರು ಭಾವಿಸಿದ್ದಾರೆ. ಪ್ರಾತಃ ಸಂಧ್ಯೆ ಜೀವ ಜಗತ್ತಿನ ಬಹಿರ್ಮುಖ ಚಟುವಟಿಕೆಗಳಿಗೆ ಕಾರಣವಾದರೆ ಸಾಯಂಸಂಧ್ಯೆ ಅಂತರ್ಮುಖೀ ಪ್ರೇರಣೆಗೆ ಕಾರಣವಾಗುತ್ತದೆ.

ಈ ಸೌರಮಂಡಲದಲ್ಲಿ ಸೂರ್ಯನೇ ಸರ್ವ ಶಕ್ತಿಯ ಮೂಲ. ಈ ಬ್ರಹ್ಮಾಂಡ ನಿರ್ಮಾಣವಾಗಿರುವುದು ಪಂಚಭೂತಗಳಿಂದ. ಆದ್ದರಿಂದಲೇ ನಾವು ಜೀವಿಸುತ್ತಿರುವ ಈ ಭೂಗೋಳಕ್ಕೆ ಪ್ರಪಂಚ ಎಂಬ ಹೆಸರು. ಈ ಪಂಚಭೂತಗಳಲ್ಲಿ ಅಗ್ನಿಯೇ ಪ್ರಧಾನ. ಅದೇ ಈ ಬ್ರಹ್ಮಾಂಡದ ಶಕ್ತಿಯ ಮೂಲ. ಅಂತಹ ಅಮೋಘ, ಅಪೂರ್ವ, ಅದ್ವಿತೀಯ ಶಕ್ತಿಯ ಮೂಲವೇ ಚಕ್ಷುಗೋಚರನಾದ ಸೂರ್ಯ ಭಗವಾನ್. ಗೆಲಾಕ್ಸಿ ಆಕಾಶಗಂಗೆ, ಕ್ಷೀರಪಥ ಎಂದು ಕರೆಯಲ್ಪಡುವ ಈ ಸೌರ ಮಂಡಲದಲ್ಲಿರುವ ಅಗಣಿತ ತಾರೆಗಳು, ನಕ್ಷತ್ರಗಳು, ಊಹೆಗೆ ನಿಲುಕದಷ್ಟಿರುವ ಗ್ರಹಗಳು, ಕ್ಷುದ್ರ ಗ್ರಹಗಳು, ಉಲ್ಕೆಗಳು, ಧೂಮಕೇತುಗಳ ನಿಯಂತ್ರಕ ಶಕ್ತಿ ಹಾಗೂ ಇವುಗಳೆಲ್ಲದರ ಕೇಂದ್ರ ಬಿಂದು ಸೂರ್ಯನೇ ಆಗಿದ್ದಾನೆ. ನವಗ್ರಹಗಳ ರಾಜ ಸೂರ್ಯನನ್ನು ಆತ್ಮಕಾರಕ ಎಂದು ಕರೆಯಲಾಗಿದೆ. ಅಷ್ಟೇ ಅಲ್ಲ ಸೂರ್ಯನನ್ನು ನಭದ ಸ್ವರ್ಣಾಭರಣ ಎನ್ನುವುದುಂಟು. ಸೂರ್ಯಾರಾಧನೆ, ಸೂರ್ಯನಮಸ್ಕಾರ, ಸಂಧ್ಯಾವಂದನೆ, ಸೂರ್ಯ ಸ್ನಾನ ಇವೆಲ್ಲ ಆಯುರಾರೋಗ್ಯ ದೃಷ್ಟಿಯಿಂದ ಅತಿ ಮಹತ್ವವಾದದ್ದು, ಅದಕ್ಕಾಗಿಯೇ “ಆರೋಗ್ಯಂ ಭಾಸ್ಕರಾಧಿಚ್ಛೇತ್” ಎನ್ನಲಾಗಿದೆ. ಸಪ್ತಾಶ್ವ ರಥಾರೂಢನಾಗಿ ಅರುಣನನ್ನು ಸಾರಥಿಯಾಗಿರಿಸಿಕೊಂಡು ಇಡೀ ಜಗತ್ತನ್ನೇ ಬೆಳಗುವತ್ತ ಸಾಗುವ ಜಗದ್ರಕ್ಷಕ ಸೂರ್ಯನ ಸಂಕ್ರಮಣದ ಮಕರ ಸಂಕ್ರಾಂತಿ ಸರ್ವರಿಗೂ ಶುಭಕರವಾದುದು. ಹಾಗಾಗಿ ಸಂಕ್ರಾಂತಿಯಂದು ಸೂರ್ಯ ದೇವನಿಗೆ ಅಗ್ರಪೂಜೆ ಸಲ್ಲುತ್ತದೆ. ಇದು ಸಂಕ್ರಾಂತಿಯ ಸಂದರ್ಭಕ್ಕೆ ಸೂರ್ಯೋಪಾಸನೆಯ ಮೂಲಕ ಭವ್ಯ ಭಾಸ್ಕರನಿಗೆ ಮಾನವ ಸಲ್ಲಿಸುವ ಕೃತಜ್ಞತೆಯ ಸಂಕೇತ.

**ಸಂಕ್ರಾಂತಿಗೆ ಎಳ್ಳು ಬೀರುವುದೇಕೆ?:** ಸಂಕ್ರಾಂತಿ ಕುರಿತಂತೆ ಒಂದು ಪುರಾಣ ಕಥೆ ಹೀಗಿದೆ. ಬ್ರಹ್ಮನ ವರಬಲದಿಂದ ಉನ್ಮತ್ತನಾಗಿ ಲೋಕ ಕಂಟಕನಾಗಿದ್ದ ತಿಲಾಸುರನೆಂಬ ರಾಕ್ಷಸನ ಪೀಡೆಯನ್ನು ತಾಳಲಾರದೆ ಎಲ್ಲರೂ ಸೂರ್ಯ ದೇವನಲ್ಲಿ ಮೊರೆ ಇಡುತ್ತಾರೆ. ಆಗ ಸೂರ್ಯನು ಕರ್ಕ ದೇವಿ ಹಾಗೂ ಮಕರ ದೇವಿ ಎಂಬ ಇಬ್ಬರು ಮಹಿಳೆಯರನ್ನು, ಜೊತೆಗೆ ಅವರ ಸಹಾಯಕ್ಕಾಗಿ ಪರಿವಾರವನ್ನು ಸೃಷ್ಟಿಸಿ ಕಳುಹಿಸುತ್ತಾನೆ. ಒಂದು ದಿನ ಇವರಿಗೂ ತಿಲಾಸುರ ರಾಕ್ಷಸನಿಗೂ ಭಯಂಕರ ಯುದ್ಧವಾಗಿ ಕೊನೆಗೆ ಮಕರದೇವಿ ತನ್ನ ಭರ್ಜಿಯಿಂದ ತಿಲಾಸುರನ ಹೊಟ್ಟೆಗೆ ತಿವಿಯಲು ಅವನ ಹೊಟ್ಟೆಯಲ್ಲಿದ್ದ ಎಳ್ಳಿನ ಸಂಗ್ರಹವು ಕಂಡು ಬರುತ್ತದೆ. ಆ ಎಳ್ಳನ್ನು ಹೊರತೆಗೆದಾಗ ತಿಲಾಸುರ ರಾಕ್ಷಸನ ಪ್ರಾಣ ಹೋಗಿ ಪೀಡೆ ತೊಲಗುತ್ತದೆ. ಆಗ ಸೂರ್ಯ ದೇವನು ಸಂತುಷ್ಟನಾಗಿ “ಮಕರ ದೇವಿ, ನಿನ್ನನ್ನು ಭಕ್ತಿಯಿಂದ ಪೂಜಿಸಿದವರಿಗೆ ಸರ್ವಾಭೀಷ್ಟ ಸಿದ್ಧಿಸಲಿ. ನೀನು ಶೋಧಿಸಿದ ಎಳ್ಳು ಅಮೃತದಂತೆ ಸವಿಯಾಗಿರಲಿ, ಆರೋಗ್ಯಕಾರಕವಾಗಿರಲಿ. ನಾನಿರುವತನಕ ನಿನ್ನ ಕೀರ್ತಿ ಉಳಿಯಲಿ” ಎಂದು ಹರಸಿದ. ಅಂದಿನಿಂದ ಪೀಡಾಪರಿಹಾರಕ್ಕಾಗಿ ಎಳ್ಳು ಹಂಚುವ ಪರಿಪಾಠ ಬೆಳೆದು ಬಂತಂತೆ. ಅಂತೆ, ಕಂತೆ ಪುರಾಣ ಏನೇ ಇರಲಿ ಸಂಕ್ರಾಂತಿಯಂದು ಎಳ್ಳು ಬೀರುವುದು ಒಂದು ಸತ್ಸಂಪ್ರದಾಯ. ಧಾರ್ಮಿಕವಾಗಷ್ಟೇ ಅಲ್ಲದೆ ವೈಜ್ಞಾನಿಕವಾಗಿಯೂ ಇದೊಂದು ಆರೋಗ್ಯವರ್ಧಕ ಹಬ್ಬವಾಗಿದೆ. ಬಿಸಿಲಿನ ತಾಪಕ್ಕೆ ಉಂಟಾಗುವ ಚರ್ಮರೋಗಗಳಿಗೆ ಎಳ್ಳು ಚಮತ್ಕಾರದ ಔಷಧ. ಎಳ್ಳು ವಾತಾ ಪರಿಹಾರವಾದರೆ ಇದರೊಡನೆ ಬೆರೆಸಿ ಬೀರುವ ಬೆಲ್ಲ ಕಫ ನಿವಾರಕ. ಮಕರ ಸಂಕ್ರಾಂತಿ ದಿನದಿಂದ ಉತ್ತರಾಯಣವು ಆರಂಭವಾಗುವುದರಿಂದ ದಕ್ಷಿಣಾಯಣದಲ್ಲಿ ಹೆಚ್ಚಿಗೆ ವಿಸರ್ಜಿಸಲ್ಪಟ್ಟಿರುವ ದೇಹದ ಉಷ್ಣದ ಕೊರತೆಯನ್ನು ನಿವಾರಿಸಲು ಉಷ್ಣ ಪದಾರ್ಥಗಳನ್ನು ತೆಗೆದುಕೊಳ್ಳಬೇಕಾದ್ದರಿಂದ ಎಳ್ಳಿನ ಸೇವನೆ ಹೆಚ್ಚು ಸೂಕ್ತ. ವೈದ್ಯಶಾಸ್ತ್ರ ಮತ್ತು ಆಹಾರಶಾಸ್ತ್ರಗಳ ಪ್ರಕಾರ ದೇಹದ ಚರ್ಮ, ಕಣ್ಣು ಮತ್ತು ಎಲುಬು ಇವುಗಳ ಬೆಳವಣಿಗೆಗೆ ಹಾಗೂ ಇವುಗಳು ಸರಿಯಾದ ಸ್ಥಿತಿಯಲ್ಲಿರುವುದಕ್ಕೆ 'ಎ' ಮತ್ತು 'ಬಿ' ಅನ್ನಾಂಗಗಳು ಅತ್ಯವಶ್ಯಕ. ಎಣ್ಣೆ ಅಂಶವುಳ್ಳ ಧಾನ್ಯವಾದ ಎಳ್ಳಿನಲ್ಲಿ ಈ ಅಂಶಗಳ ಹೇರಳವಾಗಿವೆ. ಆಯುರ್ವೇದದ ಪ್ರಕಾರ ಎಳ್ಳು ಉಷ್ಣ ಗುಣವುಳ್ಳದ್ದು. ವಾತ, ವ್ರಣ ಮತ್ತು ಚರ್ಮರೋಗಗಳನ್ನು ಗುಣಪಡಿಸುತ್ತದೆ.



ಎಲ್ಲಕ್ಕಿಂತ ಮಿಗಿಲಾಗಿ ರಕ್ತವೃದ್ಧಿ ಮಾಡುತ್ತದೆ. ಈ ಕಾರಣಕ್ಕಾಗಿಯೇ ಹೆಣ್ಣು ಮಕ್ಕಳು ಋತುಮತಿಯರಾದಾಗ ಎಳ್ಳಿನ ಚಿಗಳಿ ಕೊಡಲಾಗುತ್ತದೆ. ಎಳ್ಳು ಎಣ್ಣೆಯ ಅಂಶದಿಂದ ಚರ್ಮದ ನಾವೀನ್ಯತೆ ಹೆಚ್ಚುತ್ತದೆ. ಕೋಮಲತೆಯನ್ನು ಕಾಪಾಡುತ್ತದೆ. ಎಳ್ಳಿನೊಡನೆ ಸೇರಿಸಿ ಬೀರುವ ಕಡಲೆ ಬೀಜ, ಕೊಬ್ಬರಿ ಚೂರುಗಳಲ್ಲೂ ಎಣ್ಣೆಯ ಎಳೆ ಜಿಡ್ಡಿನ ಅಂಶ ಇದ್ದೇ ಇರುತ್ತದೆ. ಹೀಗಿರುವಾಗ ಎಳ್ಳು-ಬೆಲ್ಲ ಬೀರಲು ಬಂದವರು ಹೇಳುವಂತೆ ಇದನ್ನು ತಿಂದವರಿಗೆ ಖಂಡಿತವಾಗಿ ಆರೋಗ್ಯದಾಯಕವಾಗುತ್ತದೆ.

ಮಕರ ಸಂಕ್ರಾಂತಿಯಿಂದಾಗಿ ಸೂರ್ಯನ ಪ್ರಭಾವವು ಹೆಚ್ಚಾಗುವುದರಿಂದ ಈ ಹವಾಮಾನ ಬದಲಾವಣೆಯ ಪರಿಣಾಮ ಎಳೆ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ಹಾಗಾಗಿ ಮಕ್ಕಳ ಹೃದಯ ಬಡಿತ ಮತ್ತು ರಕ್ತ ಚಲನೆಯನ್ನು ಜೀವನಾಡಿಯು ಚುರುಕುಗೊಳಿಸುತ್ತದೆ. ಇದನ್ನು ಹತೋಟಿಯಲ್ಲಿಡಲು ಮತ್ತು ಶೈಶವಕ್ಕೆ ಸಂಬಂಧಿಸಿದ ಗ್ರಹಚಾರ, ಪೀಡೆಗಳು, ಎಲಚಿಹಣ್ಣು (ಬೋರೆಹಣ್ಣು) ಹಾಗೂ ಎಳ್ಳಿನ ಸ್ಪರ್ಶದಿಂದ ಕಳೆಯುತ್ತವೆ. ಮಕ್ಕಳ ಬೆಳವಣಿಗೆಗೆ ಬೇಕಾದ ಕೇಂದ್ರಗಳು ವಿಕಾಸಗೊಳ್ಳುತ್ತದೆ. ಆದುದರಿಂದ ಸಂಕ್ರಾಂತಿಯಂದು ಮಕ್ಕಳನ್ನು ಹಸೆ ಮೇಲೆ ಕೂರಿಸಿ, ಆರತಿ ಮಾಡಿ ಎಳ್ಳು, ಬೆಲ್ಲ, ಎಲಚಿಹಣ್ಣು, ಕಬ್ಬಿನ ಚೂರುಗಳು ಮತ್ತು ನಾಣ್ಯಗಳನ್ನು ಅವರ ತಲೆ ಮೇಲೆ ಅಭಿಷೇಕದ ರೀತಿ ಎರೆಯುತ್ತಾರೆ. ಎಲಚಿ ಹಣ್ಣಿನಲ್ಲಿ ಅನುದ್ವೇಗಪಡಿಸುವ ಗುಣವಿದೆ. ಇದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಂರಕ್ಷಣೆಯಾಗುತ್ತದೆ. ಸಂಕ್ರಾಂತಿಯ ಹೆಸರಿನಲ್ಲಿ ಹೀಗೆ ಎಳ್ಳು ಬೀರುವುದರಿಂದ ಇಷ್ಟೆಲ್ಲಾ ಉಪಯೋಗವಿದೆ ಎಂಬುದನ್ನು ನಮ್ಮ ಹಿರಿಯರು ಅನಾದಿಕಾಲದಲ್ಲೇ ಅರಿತಿದ್ದು ಅದನ್ನು ಈಗಲೂ ಮುಂದುವರೆಸಿಕೊಂಡು ಬರುತ್ತಿರುವುದೇ ಸಂಕ್ರಾಂತಿಯ ವಿಶೇಷ.

**ಗೋಪೂಜೆ-ಕಿಚ್ಚು ಹಾಯಿಸುವ ಸಡಗರ:** ಹೇಳಿ ಕೇಳಿ ಸಂಕ್ರಾಂತಿ ಸುಗ್ಗಿ ಹಬ್ಬ, ರೈತಾಪಿಗಳ ಹಿಗ್ಗಿನ ಹಬ್ಬ. ಇಂಥ ಸುಗ್ಗಿಗೆ-ಹಿಗ್ಗಿಗೆ ಆತ ಆಶ್ರಯಿಸಿರುವ ಜಾನುವಾರುಗಳೇ ಮೂಲ ಕಾರಣ. ಹಾಗಾಗಿ ಹೊಲ-ಗದ್ದೆಗಳಲ್ಲಿ ಬೆಳೆ ಬೆಳೆದು ಫಸಲೆಲ್ಲಾ ಮನೆ ತುಂಬಿ ತುಳುಕುವಾಗ ತನ್ನ ಸಮಕ್ಕೆ ದುಡಿದ ಜಾನುವಾರುಗಳನ್ನು ಅಂದು ವಿಶೇಷವಾಗಿ ಬಹಳ ಕಾಳಜಿಯಿಂದ, ಪ್ರೀತಿಯಿಂದ ಕಾಣುವುದು ಸಂಕ್ರಾಂತಿ ಕೊಟ್ಟ ಉಡುಗೊರೆ. ಅಂದು ವಿಶೇಷವಾಗಿ ಹಳ್ಳಿಗಾಡುಗಳಲ್ಲಿ ಗೋಪೂಜೆ ಮಾಡಿ ಸಂಭ್ರಮಿಸುತ್ತಾರೆ. ಅಂದು ಮುಂಜಾನೆಯೇ ಅವುಗಳನ್ನೆಲ್ಲಾ ಕೆರೆಕಟ್ಟೆಗಳಲ್ಲಿ ಮೀಯಿಸಿ, ಚೆನ್ನಾಗಿ ತೊಳೆಯುತ್ತಾರೆ. ನಂತರ ಮೈಗೆಲ್ಲಾ ಅರಿಶಿಣ ಬಳಿಯುತ್ತಾರೆ. ಕೊಂಬುಗಳಿಗೆ ಬಣ್ಣ ಬಳಿದು ವಿವಿಧ ರೀತಿಯಿಂದ ಅಲಂಕಾರ ಮಾಡಿ ಊರಿನಲ್ಲೆಲ್ಲಾ ಮೆರವಣಿಗೆ ಮಾಡುತ್ತಾರೆ. ನಂತರ ಬೀದಿಯಲ್ಲಿ ಭತ್ತದ ಹುಲ್ಲನ್ನು ಹರಡಿ ಅದಕ್ಕೆ ಬೆಂಕಿ ಹಾಕಿ ಹಸು-ಎತ್ತುಗಳನ್ನು ಅದರ ಮೇಲೆ ಹಾರಿಸುತ್ತಾರೆ. ಇದನ್ನೇ ಕಿಚ್ಚುಹಾಯಿಸುವುದು ಎನ್ನುವುದು. ಜಾನುವಾರುಗಳಿಗೆ ಹೀಗೆ ಮಾಡುವುದರಿಂದ ಚಳಿಯಲ್ಲಿ ಜಡ್ಡುಗಟ್ಟಿದ ಅವುಗಳು ಕ್ರಿಯಾಶೀಲಗೊಳ್ಳುತ್ತವೆ. ಜೊತೆಗೆ ಅವುಗಳ ಮೈಗಳಲ್ಲಿರುವ ಕ್ರಿಮಿಗಳೆಲ್ಲಾ ಕಿಚ್ಚು ಹಾಯವುದರಿಂದ ಎಲ್ಲವೂ ಬೆಂಕಿಯಲ್ಲಿ ಸುಟ್ಟು ನಾಶವಾಗುತ್ತವೆ. ಹೀಗೆ ಸಂಕ್ರಾಂತಿ ಹಿನ್ನೆಲೆಯಲ್ಲಿ ಹಲವಾರು ಆರೋಗ್ಯಕರ ಆಚರಣೆಗಳಿದ್ದು ವಿಶೇವಾಗಿ ರೈತರು ಸಂಭ್ರಮಿಸುತ್ತಾರೆ.

ಸಂಕ್ರಾಂತಿ ಕಾಲದಲ್ಲಿ ಸ್ನಾನ, ದಾನ, ತಪಸ್ಸು, ಹೋಮ, ಪಿತೃತರ್ಪಣ, ದೇವತಾಪೂಜೆ ಇವುಗಳನ್ನು ಆಚರಿಸಿದಲ್ಲಿ ಅದು ಪುಣ್ಯಕರವಾದುದು ಎಂದು ಬ್ರಹ್ಮ ಪುರಾಣದಲ್ಲಿ ಹೇಳಲಾಗಿದೆ. ಮಕರ ಸಂಕ್ರಮಣದಿಂದ ದೇವತೆಗಳಿಗೆ ಹಗಲು, ರಾಕ್ಷಸರಿಗೆ ರಾತ್ರಿ ಆಗುವುದೆಂದು ಪುರಾಣ ಪ್ರತೀತಿಯಿದೆ. ಮಕರ ಸಂಕ್ರಾಂತಿಯ ಆಚರಣೆಯಲ್ಲಿ ಪಾಪ ನಿವಾರಣೆಯ ಕಲ್ಪನೆಯ ಜೊತೆ ಜೊತೆಗೆ ಭೌಗೋಳಿಕ ಮಹತ್ವವೂ ಇದೆ. ಮಕರ ಸಂಕ್ರಮಣದ ಕಾಲದಿಂದ ದಿನಮಾನ ದೊಡ್ಡದಾಗುವುದರ ಜೊತೆಗೆ ಸೃಷ್ಟಿಯಲ್ಲಿ ನವಚೇತನ ತುಂಬಿಕೊಳ್ಳುತ್ತದೆ. ಸೃಷ್ಟಿಯಲ್ಲಿ ಸೊಬಗು ಮೈದುಂಬಿಕೊಳ್ಳುತ್ತದೆ.



## ವಾರಭವಿಷ್ಯ

14.01.2024 ರಿಂದ 20.01.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಧನುಸ್ಸು, ಮಕರ, ಚಂದ್ರ-ಕುಂಭ, ಮೀನ, ಮೇಷ, ಕುಜ-ಧನುಸ್ಸು, ಬುಧ-ಧನುಸ್ಸು, ಗುರು-ಮೇಷ, ಶುಕ್ರ-ವೃಶ್ಚಿಕ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

### ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ರಾಹು ಗ್ರಹ ವ್ಯಯಭಾವಕ್ಕೆ ಪಲ್ಲಟವಾಗಿದೆ. 'ಧರ್ಮೋ ರಕ್ಷತಿ ರಕ್ಷತಃ' ಎಂಬ ವೇದ ವಾಕ್ಯದಂತೆ ಧರ್ಮ ಮಾರ್ಗವನ್ನು ಬಿಡಬೇಡಿ. ನಿಮ್ಮವರೇ ನಿಮ್ಮನ್ನು ಸಂಶಯ ದೃಷ್ಟಿಯಿಂದ ನೋಡುವರು. ಇಷ್ಟ ಬಂಧುಗಳ ಆಗ್ರಹಕ್ಕೆ ಗುರಿಯಾಗುವ ಸಾಧ್ಯತೆ. ವಾರ ಮಧ್ಯೆ ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು. ನೂತನ ಉಪಭೋಗ ವಸ್ತುಗಳನ್ನು ಖರೀದಿಸುವಿರಿ. ಶ್ರೀಮತಿಯ ಅನುರಾಗ ದೊರೆಯುವುದು.

ಶ್ರೀನಾಗಪೂಜೆ. ಶುಭ ಸಂಖ್ಯೆ-5

### ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

'ಬಿತ್ತಿದ್ದನ್ನು ಬೆಳೆದುಕೊ' ಎಂಬ ನಾಣ್ಣುಡಿಯಂತೆ ಫಲಾಫಲಗಳು ಈಶ್ವರಾಜ್ಞೆಯಂತೆ ನಡೆಯುವುದು. ವಾರದ ಆದಿಗೆ ವ್ಯಾಪಾರ ವ್ಯವಹಾರಗಳಲ್ಲಿ ಚೇತರಿಕೆ ಬಂದರೂ ಲಾಭಾಂಶ ಅಷ್ಟಕ್ಕಷ್ಟೆ. ಬೆಳೆದು ನಿಂತ ಮಕ್ಕಳ ಚಲನ-ವಲನದ ಮೇಲೆ ನಿಗಾವಹಿಸಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಆಸಕ್ತಿ ಕುಂಠಿತವಾಗುವುದು. ಖಯಾಲಿ ಓಡಾಟಗಳನ್ನು ತ್ಯಜಿಸಿ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-3

### ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದ ಆದಿಗೆ ವಿವಿಧ ರೀತಿಯಲ್ಲಿ ಧನಾಗಮ. ಪ್ರಕಾಶಕರಿಗೆ ಹಾಗೂ ಪುಸ್ತಕ ವ್ಯಾಪಾರಿಗಳಿಗೆ ಉತ್ತಮ ವರಮಾನವಾಗುವುದು. ವಿದ್ಯಾರ್ಥಿಗಳಿಗೆ ಜಡತ್ವ ನಿವಾರಣೆಯಾಗಿ ಅಭ್ಯಾಸಕ್ಕೆ ಉಂಟಾಗಿದ್ದ ವಿಘ್ನಗಳು ನಿವಾರಣೆಯಾಗುವುದು. ಮನೆಗೆ ನೆಂಟರಿಷ್ಟರ ಆಗಮನದಿಂದ ಮನಸ್ಸು ಪ್ರಫುಲ್ಲವಾಗಿರುತ್ತದೆ. ಆಸ್ತಿ ಸಂಬಂಧಿ ವಿಷಯಗಳು ನಿಮಗೆ ಅನುಕೂಲಕರವಾಗಿರುತ್ತದೆ. ಪಿತ್ತ ಜನಿತ ಕಾಯಿಲೆ ಕಾಡಬಹುದು.

ಶ್ರೀ ವಿಷ್ಣುನಾಮಸ್ತುತಿ. ಶುಭ ಸಂಖ್ಯೆ-4.

### ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಮನೆಯವರೊಂದಿಗೆ ಹರ್ಷದಾಯಕ ಸಮಯವನ್ನು ಕಳೆಯುತ್ತೀರಾದರೂ, ವ್ಯಾಪಾರ ವ್ಯವಹಾರಗಳಲ್ಲಿ ಸುಖವಿಲ್ಲ. ಪ್ರಯತ್ನಕ್ಕೆ ತಕ್ಕ ಫಲ ನೀಡಲು ಗ್ರಹಗಳ ಬೆಂಬಲವಿಲ್ಲ. ವಾರದ ಉತ್ತರಾರ್ಧಕ್ಕೆ ಸರ್ಕಾರಿ ಕೆಲಸಗಳು ನಿಮ್ಮ ಆಶಯದಂತೆ ನಡೆಯುವುದು. ವೃತ್ತಿ ಸ್ಥಳದಲ್ಲಿ ಹಿತಕರ ವಾತಾವರಣ ಉಂಟಾಗುವುದು. ವಾಹನ ನಿಧಾನವಾಗಿ ಚಲಿಸಿ ಕ್ಷೇಮವಾಗಿ ಮನೆ ತಲುಪಿ.

ಶ್ರೀ ದುರ್ಗಾಪರಮೇಶ್ವರಿ ಪೂಜೆ. ಶುಭ ಸಂಖ್ಯೆ-1.

### ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಗುರುಕೃಪೆಯಿಂದ ಹೊಸ ಜನರ ಭೇಟಿ, ಹೊಸ ಚಟುವಟಿಕೆಗಳ ಪ್ರಾರಂಭ. ನೂತನ ಆವಿಷ್ಕಾರಗಳಿಂದ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವ ಅವಕಾಶ. ಬಂಧು ಬಾಂಧವರಲ್ಲಿ ಸಂತಸವನ್ನು ಹಂಚಿಕೊಳ್ಳಿ, ನ್ಯಾಯಾಲಯ ವಿಚಾರಗಳಲ್ಲಿ ಹಿನ್ನಡೆಯನ್ನು ಅನುಭವಿಸಬೇಕಾದೀತು. ಅಷ್ಟಮ ರಾಹುವಿನ ಪರಿಣಾಮ ಸ್ವೇಚ್ಛಾಚಾರಗಳಿಂದ ತೊಂದರೆಯನ್ನು ಅನುಭವಿಸುವಿರಿ. ನಿಮ್ಮ ಗೌರವಕ್ಕೆ ಧಕ್ಕೆ ಆಗಬಹುದು.

ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-6.

### ಕನ್ಯಾ (ಟೊ.ಪ.ಪಿ.ಪು.ಘ.ಣ.ಠ.ಪೆ.ಪೊ)

ಈ ವಾರವೆಲ್ಲಾ ಬ್ಯುಸಿಯಾಗಿರುತ್ತೀರಿ. ಆದರೆ, ಕೆಲವೊಮ್ಮೆ ವಿವೇಚನಾ ಹೀನ ನಿರ್ಧಾರಗಳಿಂದ ನಿಮಗೆ ನಷ್ಟವಾಗುವ ಸಾಧ್ಯತೆ ಇದೆ. ಇತರರ ನಿಂದನೆಗೂ ಗುರಿಯಾಗುವಿರಿ. ಶನಿ ದೇವನ ಅನುಗ್ರಹದಿಂದ ಕಟ್ಟಡ ಸಾಮಗ್ರಿ ವ್ಯವಹಾರಸ್ಥರಿಗೆ, ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಹೇರಳ ಧನಾದಾಯ ಆಗುವುದು. ನಂಬಿಸಿ ಮೋಸ ಮಾಡುವವರಿಂದ ಜಾಗ್ರತರಾಗಿರಿ.

ಶ್ರೀ ಅಷ್ಟಾಕ್ಷರೀ ಮಂತ್ರ ಜಪಿಸಿ. ಶುಭ ಸಂಖ್ಯೆ-9

### ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಹರ್ಷ ಉಲ್ಲಾಸಗಳ ವಾತಾವರಣದಲ್ಲಿ ವಾರಕ್ಕೆ ಸ್ವಾಗತ. ಮಿತ್ರ ಜನರ ಸಮಾಗಮದಿಂದ ಮುದಿತವಾದ ಮನಸ್ಸು. ಧನ-ಕನಕ ನೂತನ ವಸ್ತ್ರ ಪ್ರಾಪ್ತಿಯೂ ಉಂಟು. ನಿಮ್ಮ ಪರೋಪಕಾರ ಬುದ್ಧಿಯಿಂದ ಜನ ಮಾನ್ಯತೆಯನ್ನು ಗಳಿಸುವಿರಿ. ಗುರು ಕೃಪೆಯಿಂದ ಸತ್ಪುರುಷರ ಭೇಟಿ, ಆಶೀರ್ವಾದಗಳು ದೊರೆಯುವುದು. 'ಸಜ್ಜನರ ಸಂಗ ಹೆಜ್ಜೇನು ಸವಿದಂತೆ'.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-2.

### ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ನಿಮ್ಮ ನಿರಂತರ ಪರಿಶ್ರಮಕ್ಕೆ ಫಲ ದೊರಕಲು ಇನ್ನೂ ಕೊಂಚ ಸಮಯ ಕಾಯಬೇಕಿದೆ. ನೀವು ತಾಳ್ಮೆಗೆಡುವ ಅಗತ್ಯವಿಲ್ಲ. ಆದಾಯ ಚೆನ್ನಾಗಿದ್ದರೂ ದುಂದು ವೆಚ್ಚಗಳಿಂದ ಪರ್ಸ್ ಖಾಲಿ. ನಿಮ್ಮ ಸುತ್ತ ಅಸೂಯಾಪರರು ಇದ್ದಾರೆ. ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿ. ಹಿಂದಾಗಿದ್ದಕ್ಕೆ ಚಿಂತಿಸುತ್ತಾ ಕೂರಬೇಡಿ, ಮುಂದಾಗಬೇಕಾದ ಸಾಧನೆ ಯತ್ನ ನೋಡಿ.

ಶ್ರೀ ಗಣೇಶ ಸ್ತುತಿ. ಶುಭ ಸಂಖ್ಯೆ-7

### ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಗುರು-ಶನಿ ಗ್ರಹಗಳು ಶುಭ ಸ್ಥಾನದಲ್ಲಿ ಸ್ಥಿತರಿದ್ದಾರೆ. ಹಳೆಯ ಸಮಸ್ಯೆಗಳು ಪರಿಹಾರವಾಗಿ ಮನಸ್ಸು ಹಗುರವಾಗುತ್ತದೆ. ಮನೆಯಲ್ಲಿ ಪೂಜೆ-ಪುನಸ್ಕಾರಗಳು ನಡೆದು ಸಂತಸದ ವಾತಾವರಣ. ದೂರ ಸರಿದವರು ಹತ್ತಿರವಾಗುವರು. ಬೃಹತ್ ಉದ್ಯಮಿಗಳಿಗೆ ದೊಡ್ಡ ಆರ್ಡರ್‌ಗಳು ದೊರೆಯುವುದು. ಮನೆಯಲ್ಲಿ ಹಿರಿಯರ ಆರೋಗ್ಯದ ಬಗ್ಗೆ ಕಳವಳಕಾರಿ ಎನಿಸಬಹುದು.

ಶ್ರೀರಾಯರ ಸೇವೆ. ಶುಭ ಸಂಖ್ಯೆ-8.

### ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ನಿಮ್ಮ ನಿಕಟ ಸಂಬಂಧಿಗಳು ನಿಮ್ಮಿಂದ ಸಾಲವನ್ನು ಕೇಳಬಹುದು. ಮನೆಯಲ್ಲಿ ವನಿತಾಮಣಿಯರು ಹೆಚ್ಚಿನ ಶಾಪಿಂಗ್ ಮಾಡುವ ಕಾರಣ ನಿಮ್ಮ ಪರ್ಸ್ ಖಾಲಿಯಾಗುವುದು. ನಿಮ್ಮ ಕೆಲವು ಪ್ರಮುಖ ಕೆಲಸಗಳು ಅಪೂರ್ಣವಾಗಿ ಮಾನಸಿಕ ಒತ್ತಡ ಹೆಚ್ಚಬಹುದು. ಯಾವುದೇ ಬದಲಾವಣೆಗೆ ಕೈ ಹಾಕುವ ಮುನ್ನ ತಜ್ಞರ ಸಲಹೆ ಪಡೆಯುವುದು ಅವಶ್ಯಕ. ವಾರದ ಕಡೆಗೆ ನಿರೀಕ್ಷಿತ ಹಣಕ್ಕೆ ಸೇರಿ ಗೆಲುವಿನ ವಾತಾವರಣ.

ಶ್ರೀ ನಾರಾಯಣ ಮಂತ್ರ ಜಪಿಸಿ. ಶುಭ ಸಂಖ್ಯೆ-3.

### ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ನಿಮ್ಮ ಮಹತ್ವದ ಕೆಲಸ ಕಾರ್ಯಗಳಿಗೆ ಹಿರಿಯರ ಸಲಹೆ ಸರಿ ಸಮಯಕ್ಕೆ ಒದಗುತ್ತದೆ. ನಿಮ್ಮ ಕಾರ್ಯ ಕಲಾಪಗಳಿಗೆ ಸಾಧು ಸಂತರ ಆಶೀರ್ವಾದ ದೊರಕುವುದು. ಪಾಲುದಾರಿಕೆಗಿಂತ ಸ್ವಂತ ಉದ್ಯಮ-ವ್ಯಾಪಾರ ಮಾಡುವುದರಿಂದ ಹೆಚ್ಚಿನ ಲಾಭಾಂಶಗಳಿಸುವಿರಿ. ಚಂದ್ರಗ್ರಹದ ಶುಭ ಸಂಚಾರ ನಿಮ್ಮ ಮೈಮನಗಳಲ್ಲಿಯೂ ಹರುಷ ಸಂಚಾರ ಮೂಡುವುದು. ದೀರ್ಘ ಪ್ರಯಾಣಗಳನ್ನು ಅವಾಯ್ಡ್ ಮಾಡಿ.

ಶ್ರೀ ಶ್ರೀನಿವಾಸ ದರ್ಶನ. ಶುಭ ಸಂಖ್ಯೆ-5.

### ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ನಿಮ್ಮ ನಿರಂತರ ಪರಿಶ್ರಮಕ್ಕೆ ಈಗ ಗುರುಕೃಪೆಯ ಪರಿಣಾಮ ಶುಭ ಫಲ ನೀಡುವ ಸಮಯ ಬಂದಿದೆ. ಸರಿ ಮಾರ್ಗ ತೋರುವ ಗುರು ದೊರಕುವರು. ಕಛೇರಿ ಕೆಲಸಗಳಲ್ಲಿ ಸಹೋದ್ಯೋಗಿಗಳ ಸಹಕಾರ ದೊರಕುವುದು. ನಿಮ್ಮ ಆತ್ಮ ವಿಶ್ವಾಸದ ಮಟ್ಟ ಉತ್ತಮವಾಗಿರುತ್ತದೆ. ಮಕ್ಕಳ ವಿಶೇಷ ಸಾಧನೆಯಿಂದ ಹರ್ಷಿತರಾಗುವಿರಿ. ರಾಹು-ಕೇತು ಕರ್ತರಿಯೋಗವಿದ್ದು ರೇಸು, ಜೂಜುಗಳಿಂದ ದೂರವಿರಿ.

ಶ್ರೀ ಕುಲದೇವತಾ ದರ್ಶನ. ಶುಭ ಸಂಖ್ಯೆ-2.

# ಸುತ್ತೂರು ಶ್ರೀಮಠದಿಂದ ಮೌಲ್ಯಾಧಾರಿತ ಶಿಕ್ಷಣ

## ವಸತಿ ಶಾಲೆಯ ಮಕ್ಕಳಿಗೆ ಶ್ರೀಮತಿ ಸುಧಾಮೂರ್ತಿ ನುಡಿಮುತ್ತುಗಳು




ಇನ್ಫೋಸಿಸ್ ಫೌಂಡೇಶನ್‌ನ ಸುಧಾಮೂರ್ತಿ ಅವರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಸುತ್ತೂರು ಮಠಕ್ಕೆ ಭೇಟಿ ನೀಡಿ, ಸುತ್ತೂರು ವಸತಿ ಶಾಲೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ನಂಜನಗೂಡು, ಜ.13– ಸುತ್ತೂರು ಶ್ರೀಮಠವು ಸಹಸ್ರಾರು ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡುವ ಮೂಲಕ ಸದೃಢ ದೇಶ ಕಟ್ಟುವ ಕಾಯಕ ಮಾಡುತ್ತಿದೆ ಎಂದು ಇನ್ಫೋಸಿಸ್ ಫೌಂಡೇಶನ್‌ನ ಶ್ರೀಮತಿ ಸುಧಾಮೂರ್ತಿ ಅವರು ಬಣ್ಣಿಸಿದ್ದಾರೆ.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಬುಧವಾರ ಸಂಜೆ ಸುತ್ತೂರು ಮಠಕ್ಕೆ ಭೇಟಿ ನೀಡಿದ ಬಳಿಕ ಸುತ್ತೂರು ವಸತಿ ಶಾಲೆಯ ಸಹಸ್ರಾರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಜೀವನದಲ್ಲಿ ಗುರುವಿನ ಮಾರ್ಗದರ್ಶನ ತುಂಬಾ ಅವಶ್ಯಕ. ಆದ್ದರಿಂದಲೇ ಗುರುವನ್ನು ಆಚಾರ್ಯ ದೇವೋಭವ ಎಂದು ದೇವರಿಗೆ ಹೋಲಿಸುತ್ತಾರೆ. ಶ್ರೀಕ್ಷೇತ್ರದ ಪುಣ್ಯಭೂಮಿಯಲ್ಲಿ ಸಹಸ್ರಾರು ವಿದ್ಯಾರ್ಥಿಗಳನ್ನು ಯಾವುದೇ ಭೇದ ಭಾವವಿಲ್ಲದೆ ಎಲ್ಲರನ್ನೂ ಸಮಾನವಾಗಿ ಬೆಳೆಸುತ್ತಿರುವುದು ಸಾಮಾನ್ಯ ಸಂಗತಿಯಲ್ಲ. ಆದ್ದರಿಂದ ವಿದ್ಯಾರ್ಥಿಗಳು ಶ್ರದ್ಧೆಯಿಂದ ಓದಿ, ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ದೊಡ್ಡವರಾದ ಮೇಲೆ ಗುರುಗಳನ್ನು ಮರೆಯದೆ ಸ್ಮರಿಸಿಕೊಳ್ಳಬೇಕು. ಅವಶ್ಯಕತೆ ಇರುವವರಿಗೆ ನಮ್ಮ ಕೈಲಾದ ಸಹಾಯ ಮಾಡಬೇಕು, ಇಂತಹ ಮಾನವೀಯ ಮೌಲ್ಯಗಳನ್ನೆ ಶರಣರ ವಚನಗಳಲ್ಲೂ ಕಾಣಬಹುದು. ಬಿಡುವಿನ ಸಮಯದಲ್ಲಿ ವಚನಗಳನ್ನು ಅಭ್ಯಾಸ ಮಾಡುವ ಮೂಲಕ ನಮ್ಮ ಜೀವನದಲ್ಲೂ ಅವುಗಳನ್ನು ಅಳವಡಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕ್ಷೇತ್ರ ಭೇಟಿಗಾಗಿ ಆಗಮಿಸಿದ್ದ ಅನಿವಾಸಿ ಭಾರತೀಯರಾದ ಡಾ. ಪೂರ್ಣಿಮಾ ಮದಿವನ್ನನ್ ಮಾತನಾಡಿ, ಶ್ರೀಕ್ಷೇತ್ರದ ಭಕ್ತಿ, ಶಿಸ್ತು ನೋಡಿ ನನ್ನ ಆಯಾಸವೆಲ್ಲ ದೂರವಾಯಿತು. ನಿಮ್ಮನ್ನೆಲ್ಲಾ ನೋಡಿ ನನ್ನ ಉತ್ಸಾಹ ಇಮ್ಮಡಿಯಾಯಿತು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆತ್ತವರು ಎಷ್ಟೊಂದು ಕಷ್ಟಪಡುತ್ತಾರೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ನಮ್ಮ ಪೂರ್ವಿಕರು ನಮಗಾಗಿ ಕಷ್ಟಪಡುವುದರಿಂದ ಅವರನ್ನು ಸದಾ ಸ್ಮರಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಆರೋಗ್ಯ, ಸ್ವಚ್ಛ ಮನಸ್ಸು ಮತ್ತು ಹೃದಯ ಶುದ್ಧತೆಯನ್ನು ಕಾಪಾಡಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ತಮ್ಮ ಸಾಧನೆಯ ಹಾದಿಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ಬಂಡೀಪುರದ ಬುಡಕಟ್ಟು ಮಹಿಳೆ ಡಾ. ರತ್ನಮ್ಮನವರು, ಹುಟ್ಟು ಅಂಧರಾಗಿದ್ದ ತಂದೆ, ಸಂಕಷ್ಟಗಳ ನಡುವೆ ನಮ್ಮನ್ನು ಸಾಕಲು ನಮ್ಮ ತಾಯಿ ಪಡುತ್ತಿದ್ದ ಕಷ್ಟ ಅಷ್ಟಿಷ್ಟಲ್ಲ. ಬಾಲ್ಯದಲ್ಲಿ ಅರಣ್ಯ ಪ್ರದೇಶದಲ್ಲಿ ಸಿಗುವ ನೆಲ್ಲಿಕಾಯಿ ಸಂಗ್ರಹಿಸಿ ಅವುಗಳನ್ನು ಮಾರಾಟ ಮಾಡಿ ಜೀವನ ಮಾಡಿದೆ. ಶಾಲೆಗೆ ನಾನು ಹೋಗುತ್ತಿದ್ದುದು ವಿದ್ಯೆಗಿಂತ ಹೆಚ್ಚಾಗಿ ನನ್ನ ಹಸಿವಿಗೆ ಆಶ್ರಮ ಶಾಲೆಯಲ್ಲಿ ಕೊಡುತ್ತಿದ್ದ ಗಂಜಿ ಮತ್ತು ಊಟಕ್ಕಾಗಿ ಎಂದು ಸ್ಮರಿಸಿಕೊಂಡರಲ್ಲದೆ ವಿದ್ಯಾರ್ಥಿಗಳು ಸಿಗುವ ಅವಕಾಶಗಳನ್ನು ಜ್ಞಾನಾರ್ಜನೆಗೆ ಬಳಸಿಕೊಳ್ಳುವ ಮೂಲಕ ಸ್ವಾವಲಂಬಿ ಜೀವನವನ್ನು ರೂಪಿಸಿಕೊಳ್ಳಿ ಎಂದು ತಿಳಿಸಿದರು.

## ಮೈಸೂರು ಚಿತ್ರಮಂದಿರಗಳಲ್ಲಿ



| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಗುಂಟೂರು ಖಾರಂ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಬ್ಯಾಡ್ ಮ್ಯಾನರ್ಸ್ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಮೇರಿ ಕ್ರಿಸ್ಮಸ್(ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಕಾಟೇರ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಕಾಟೇರ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಅಯಲಾಮ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ಕ್ಯಾಪ್ಟನ್ ಮಿರರ್(ಕ) 2 ಪ್ರದರ್ಶನಗಳು ಕ್ಯಾಪ್ಟನ್ ಮಿರರ್(ತ) | 2 ಪ್ರದರ್ಶನಗಳು |
| **ಲಿಡೋ** | |
| ಹನುಮಾನ್ (ತೆ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಟೈಗರ್–3 (ಹಿಂ) | 4 ಪ್ರದರ್ಶನಗಳು |
| **ಪ್ರಭಾ** | |
| ಗುಂಟೂರು ಖಾರಂ(ತೆ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಗುಂಟೂರು ಕಾರಂ (ತೆ): ಬೆ.9.05ಕ್ಕೆ, ಮ.3.50ಕ್ಕೆ, ಕಾಟೇರ (ಕ): ಮ.12.15ಕ್ಕೆ, ರಾ.7ಕ್ಕೆ, ರಾ.10.25ಕ್ಕೆ. |
| ಸ್ಕ್ರೀನ್ 2 | ಅಯಲಾನ್ (ತ): ಬೆ.10ಕ್ಕೆ, ಸಂ.4.05ಕ್ಕೆ, ಮೇರಿ ಕ್ರಿಸ್‌ಮಸ್ (ತ): ಮ.1.10ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.15ಕ್ಕೆ, ಅಬ್ರಾಹಂ ಓಜ್ಲರ್ (ಮ): ರಾ.10.20ಕ್ಕೆ. |
| ಸ್ಕ್ರೀನ್ 3 | ಕ್ಯಾಪ್ಟನ್ ಮಿಲ್ಲರ್ (ಕ): ಬೆ.9.55ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.1ಕ್ಕೆ, ರಾ.10.20ಕ್ಕೆ, ಹನುಮಾನ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ. |
| ಸ್ಕ್ರೀನ್ 4 | ಕಾಟೇರ (ಕ): ಬೆ.9.35ಕ್ಕೆ, ಗುಂಟೂರು ಕಾರಂ (ತೆ): ಮ.1ಕ್ಕೆ, ರಾ.7.15ಕ್ಕೆ, ರಾ.10.25ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಸಂ.4.10ಕ್ಕೆ. |

### INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಗುಂಟೂರು ಕಾರಂ (ತೆ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ. |
| ಸ್ಕ್ರೀನ್ 2 | ಮೇರಿ ಕ್ರಿಸ್‌ಮಸ್ (ಹಿಂ): ಬೆ.8.55ಕ್ಕೆ, ಕಾಟೇರ (ಕ): ಬೆ.11.50ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ, ಅಯಲಾನ್ (ತ): ಮ.3.30ಕ್ಕೆ. |
| ಸ್ಕ್ರೀನ್ 3 | ಕಾಟೇರ (ಕ): ಬೆ.8.50ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.12.25ಕ್ಕೆ, ರಾ.10.10ಕ್ಕೆ, ಕ್ಯಾಪ್ಟನ್ ಮಿಲ್ಲರ್ (ಕ): ಮ.3.45ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.05ಕ್ಕೆ. |
| ಸ್ಕ್ರೀನ್ 4 | ಸೈಂಧವ್ (ತೆ): ಬೆ.9.10ಕ್ಕೆ, ಮ.3.35ಕ್ಕೆ, ಹನುಮಾನ್ (ತೆ): ಮ.12.10ಕ್ಕೆ, ರಾ.10ಕ್ಕೆ, ಅಯಲಾನ್ (ತ): ಸಂ.6.40ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519


| | |
|---|---|
| ಸ್ಕ್ರೀನ್ 1 | ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ. |
| ಸ್ಕ್ರೀನ್ 2 | ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ. |
| ಸ್ಕ್ರೀನ್ 3 | ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ. |
| ಸ್ಕ್ರೀನ್ 4 | ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ. |

### PVR CINEMAS ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಗೋಪಾಲಪುರ ಡೇರಿ ಜೆಡಿಎಸ್ ಪಾಲು



ಮೈಸೂರು ತಾಲೂಕು ಗೋಪಾಲಪುರ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಗೋವಿಂದೇಗೌಡ 9 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಇವರ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಮಹೇಶ್ 3 ಮತಗಳನ್ನು ಪಡೆದು ಪರಾಜಿತರಾಗಿದ್ದಾರೆ. ಉಪಾಧ್ಯಕ್ಷರಾಗಿ ಮಾದೇಗೌಡರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಗೋಪಾಲಪುರ ಗ್ರಾಮದ ಎಲ್ಲಾ ಜೆಡಿಎಸ್ ಮುಖಂಡರು ಹಾಜರಿದ್ದು, ವಿಜಯೋತ್ಸವ ಆಚರಿಸಿದರು.

## ಬಿಲಿಗೆರೆಹುಂಡಿ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ತಿ.ನರಸೀಪುರ, ಜ.13– ತಾಲೂಕಿನ ಬಿಲಿಗೆರೆಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಬಿ.ಮಹದೇವಸ್ವಾಮಿ, ಉಪಾಧ್ಯಕ್ಷರಾಗಿ ಮಂಜು(ಏಳುಮಲೆ) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶುಕ್ರವಾರ ನಡೆದ ಚುನಾವಣೆಯಲ್ಲಿ ಇವರಿಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಇವರಿಬ್ಬರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಬಿ.ಧನಲಕ್ಷ್ಮಿ ಪ್ರಕಟಿಸಿದರು. ಅವಿರೋಧ ಆಯ್ಕೆ ಪ್ರಕಟವಾಗುತ್ತಿದ್ದಂತೆ ಡೈರಿ ಮುಂಭಾಗ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ನಿರ್ದೇಶಕರಾದ ಎನ್. ಮಹೇಶ್, ಮಹದೇವಪ್ಪ ಸುಂದರಸ್ವಾಮಿ, ಶಂಕರು, ನಾಗರಾಜು, ಮಂಜು, ಸ್ವಾಮಿ, ಸಣ್ಣಯ್ಯ ಮಹದೇವ ನಾಯಕ ಬಿ.ಮಹದೇವಸ್ವಾಮಿ, ಡಿ ಮಹದೇವಮ್ಮ, ಪುಟ್ಟಮಲ್ಲಮ್ಮ ಎಸ್. ಸಿದ್ದೇಗೌಡ ಚುನಾವಣಾ ಸಭೆಯಲ್ಲಿ ಹಾಜರಿದ್ದು ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ಕಸಬಾ ಪಿಎಸಿಸಿ ಅಧ್ಯಕ್ಷ ಮಲ್ಲಣ್ಣ, ವೆಂಕಟೇಶ್ (ವೆಂಕಿ), ಶಿವರುದ್ರಗೌಡ, ನಾಗರಾಜು (ತಾತ), ಹುಣಸೂರು ಮಹದೇವಣ್ಣ, ಹುಣಸೂರು ನಾಗರಾಜು, ಕಾರ್ಯದರ್ಶಿ ಪುರುಷೋತ್ತಮ, ಸಹಾಯಕ ಅಭಿ ಸೇರಿದಂತೆ ಗ್ರಾಮಸ್ಥರು, ಮುಖಂಡರು ಭಾಗವಹಿಸಿದ್ದರು.



ಬಿಲಿಗೆರೆಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಆಯ್ಕೆಯಾದ ಅಧ್ಯಕ್ಷ ಬಿ.ಮಹದೇವಸ್ವಾಮಿ, ಉಪಾಧ್ಯಕ್ಷ ಮಂಜು(ಏಳುಮಲೆ) ಅವರನ್ನು ಅಭಿನಂದಿಸಲಾಯಿತು.

## ಮನೆಯ ಹಿಂಬಾಗಿಲು ಮೀಟಿ ಚಿನ್ನಾಭರಣ, ನಗದು ಕಳವು; ಆರೋಪಿಗಳ ಬಂಧನ

ಹುಣಸೂರು, ಜ.13– ನಗರದ ವಿ.ಪಿ.ಬೋರೆಯಲ್ಲಿ ಕಳೆದ ಕೆಲ ದಿನಗಳ ಹಿಂದೆ ಹಾರೆಯಿಂದ ಮನೆಯ ಹಿಂಬಾಗಿಲನ್ನು ಮೀಟಿ ಚಿನ್ನಾಭರಣ ಮತ್ತು ನಗದು ಕಳ್ಳತನ ಮಾಡಿದ್ದ ಆರೋಪಿಗಳನ್ನು ನಗರ ಪೊಲೀಸರು ಬಂಧಿಸಿದ್ದಾರೆ.


ವಿ.ಪಿ.ಬೋರೆ ನಿವಾಸಿಗಳಾದ ಮುಜಾಮೀಲ್ ಅಹಮದ್ ಅವರ ಮಗ ಮಹಮದ್ ಕಿರ್ಘುರ್, ಇದೇ ಬಡಾವಣೆಯ ವಾಸಿ ಅಬ್ದುಲ್ ಘನಿ ಅವರ ಮಗ ಮಹಮದ್ ಗೌಸ್ ಬಂಧಿತ ಆರೋಪಿಗಳು. ಆರೋಪಿಗಳಿಂದ ಕಳ್ಳತನ ಮಾಡಲಾಗಿದ್ದ ಒಡವೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ವಿ.ಪಿ.ಬೋರೆಯ ವಾಸಿ ಅನ್ವರ್ ಪಾಷ ಅವರ ಮಗ ಇಮ್ರಾನ್ ಪಾಷ ಅವರು ಅಜ್ಮೀರ್‌ಗೆ ತೆರಳಿದ್ದ ವೇಳೆ ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತ ಮಾಡಿಕೊಂಡ ಖದೀಮರು ಮನೆಯ ಹಿಂಬಾಗಿಲನ್ನು ಮೀಟಿ ಮನೆಯಲ್ಲಿದ್ದ 40 ಗ್ರಾಂ ಚಿನ್ನದ ಒಡವೆಗಳು, 46 ಗ್ರಾಂ ನಕಲಿ ಚಿನ್ನದ ರೆಡಿಮೇಡ್ ಒಡವೆಗಳು ಹಾಗೂ 30 ಸಾವಿರ ನಗದು ಹಣವನ್ನು ದೋಚಿ ಪರಾರಿಯಾಗಿದ್ದರು. ಇಮ್ರಾನ್ ಪಾಷ ಕುಟುಂಬ ಮನೆಗೆ ಬಂದಾಗ ಮನೆಯ ಹಿಂಬಾಗಿಲು ಮತ್ತು ಬೀರು ಒಡೆದಿರುವುದನ್ನು ಕಂಡು ನಗರ ಪೊಲೀಸರಿಗೆ ದೂರು ನೀಡಿದ್ದರು.

ದೂರು ದಾಖಲಿಸಿಕೊಂಡ ನಗರ ಪೊಲೀಸರು ಡಿ.ವೈ.ಎಸ್.ಪಿ ಗೋಪಾಲಕೃಷ್ಣ ಮತ್ತು ಇನ್ಸ್‌ಪೆಕ್ಟರ್ ಧರ್ಮೇಂದ್ರ ಅವರ ಮಾರ್ಗದರ್ಶನದಲ್ಲಿ ತಮ್ಮ ಬಾತ್ಮಿದಾರರ ಮಾಹಿತಿ ಮೇರೆಗೆ ವಿ.ಪಿ.ಬೋರೆಯ ಲೀಲಾ ಚಿತ್ರಮಂದಿರದ ಹತ್ತಿರ ಆರೋಪಿಗಳನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ಈ ಕಾರ್ಯಾಚರಣೆಯಲ್ಲಿ ಅಪರಾಧ ವಿಭಾಗದ ಪಿ.ಎಸ್.ಐ ಕೆ.ನಾಗಯ್ಯ, ಎ.ಎಸ್.ಐ ಪುಟ್ಟನಾಯಕ, ಸಿಬ್ಬಂದಿಗಳಾದ ಅರುಣ್, ಪ್ರಭಾಕರ್, ಇಮ್ರಾನ್, ಜೀಪ್ ಚಾಲಕ ಅಲೀಮ್ ಭಾಗವಹಿಸಿದರು.

## ಶ್ರೀರಾಮ ಮಂದಿರದ ಮಂತ್ರಾಕ್ಷತೆ ವಿತರಣೆ



ತಿ. ನರಸೀಪುರ ವರುಣ ವಿಧಾನಸಭಾ ಕ್ಷೇತ್ರದ ತಿರುಮಕೂಡಲಿನ ಒಂದು ಮತ್ತು ಎರಡನೇ ವಾರ್ಡಿನಲ್ಲಿ ಶ್ರೀರಾಮ ಜನ್ಮಭೂಮಿ ಮಂದಿರದ ಮಂತ್ರಾಕ್ಷತೆಯನ್ನು ಮನೆ ಮನೆಗೆ ತೆರಳಿ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಾಲಯದ ಪಾರುಪತ್ತೆಗಾರ್ ತಿರುಮಕೂಡಲು ದೀಪು ವಿತರಿಸಿದರು. ಜಗದೀಶ್, ಕಿರಣ್, ಪ್ರತಾಪ, ಮಂಜುನಾಥ, ನಾಗ, ಕುಮಾರ್ ಇದ್ದರು.

## ಸ್ವಾಮಿ ವಿವೇಕಾನಂದ ಜಯಂತಿ: 66 ಮಂದಿ ರಕ್ತದಾನ

ಸರಗೂರು, ಜ.13– ಸ್ವಾಮಿ ವಿವೇಕಾನಂದರ 161ನೇ ಜಯಂತಿ ಅಂಗವಾಗಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಮೈಸೂರಿನ ಕೆ.ಆರ್.ಆಸ್ಪತ್ರೆಯ ರಕ್ತನಿಧಿ ಕೇಂದ್ರ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು. ಶಿಬಿರದಲ್ಲಿ 66 ಮಂದಿ ರಕ್ತದಾನ ಮಾಡಿದರು.

ಈ ವೇಳೆ ಮಾತನಾಡಿದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಡಾ. ಅಭಿಷೇಕ್, ನಮ್ಮ ಸಂಸ್ಥೆಯಿಂದ ಪ್ರತೀ ತಿಂಗಳು ರಕ್ತದಾನ ಶಿಬಿರ ಮಾಡಲಾಗುತ್ತಿದ್ದು, ಪ್ರತೀ ಶಿಬಿರದಲ್ಲೂ ಹೆಚ್ಚು ಯುವಕ ಯುವತಿಯರು ಉತ್ಸಾಹದಿಂದ ರಕ್ತದಾನ ಮಾಡುವ ಮೂಲಕ ಜೀವ ರಕ್ಷಿಸುವ ಕಾರ್ಯದಲ್ಲಿ ಭಾಗಿಯಾಗುತ್ತಿರುವುದು ಸಂತೋಷದ ವಿಷಯವಾಗಿದೆ. ಆದಿವಾಸಿ ಜನಾಂಗದ ಶೇ.99ರಷ್ಟು ಭಾಗದ ಗರ್ಭಿಣಿಯರಲ್ಲಿ ರಕ್ತಹೀನತೆ ಕಾಣಿಸಿಕೊಳ್ಳುತ್ತಿದ್ದು ತಾಯಿ ಮತ್ತು ಮಗುವನ್ನು ಅಪಾಯದ ಅಂಚಿನಿಂದ ಪಾರು ಮಾಡಲು ಹಾಗೂ ಜೀವನ್ಮರಣ ಹೋರಾಟ ಮಾಡುತ್ತಿರುವ ವ್ಯಕ್ತಿಗಳ ಜೀವ ರಕ್ಷಿಸಲು ನೀವು ದಾನ ನೀಡುತ್ತಿರುವ ರಕ್ತ ಉಪಯುಕ್ತವಾಗಿದೆ ಎಂದರು.



ರಕ್ತದಾನ ಶಿಬಿರವನ್ನು ಉದ್ಘಾಟಿಸುತ್ತಿರುವ ಅತಿಥಿಗಳು

ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ. ಕುಸುಮ ಮಾತನಾಡಿ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯ ವತಿಯಿಂದ ಸಾಕಷ್ಟು ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಲಾಗುತ್ತಿದ್ದು ರಕ್ತದಾನ ಶಿಬಿರಗಳನ್ನು ಮಾಡುವ ಮೂಲಕ ನಮ್ಮ ರಕ್ತನಿಧಿ ಕೇಂದ್ರಕ್ಕೆ ನೀಡಿ ಜೀವನ್ಮರಣ ಹೋರಾಟ ನಡೆಸುತ್ತಿರುವ ಎಲ್ಲರಿಗೂ ಸಕಾಲದಲ್ಲಿ ರಕ್ತವನ್ನು ದೊರಕಿಸಿಕೊಡಲು ಸಹಕರಿಸುತ್ತಿದ್ದಾರೆ ಎಂದರು.

ವರ್ತಕರ ಸಂಘದ ಉಪಾಧ್ಯಕ್ಷ ಎಸ್.ಪಿ. ಪ್ರಸಾದ್ ಮಾತನಾಡಿ, ರಕ್ತದಾನ ಮಹಾದಾನ. ರಕ್ತದಾನಿಗಳು ಹೆಚ್ಚಾಗಿ ಬಂದು ದಾನ ಮಾಡುತ್ತಿರುವುದರಿಂದ ಜೀವಗಳನ್ನು ರಕ್ಷಿಸಲು ಆಸ್ಪತ್ರೆಯವರಿಗೆ ಅನುಕೂಲವಾಗುತ್ತದೆ ಎಂದರು. ಶಿಬಿರದಲ್ಲಿ 66 ರಕ್ತದಾನಿಗಳು ರಕ್ತದಾನ ಮಾಡಿದರು. ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಮುದಾಯ ಆಧಾರಿತ ಕಾರ್ಯಕ್ರಮಗಳ ವ್ಯವಸ್ಥಾಪಕ ಸಂತೋಷ್.ಎಸ್, ವೆಂಕಟಸ್ವಾಮಿ, ಸಹಾಯಕ ಕಾರ್ಯಕ್ರಮ ವ್ಯವಸ್ಥಾಪಕ ಚಿನ್ನಮಹದೇವ, ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಆಪರೇಷನ್ ಮ್ಯಾನೇಜರ್ ಶುಷ್ಮಶ್ರೀ, ಪಿ.ಆರ್.ಓ ಬಂಗಾರಶೆಟ್ಟಿ, ಸಂಯೋಜಕರಾದ ಜಯರಾಮ, ರಾಜೇಶ್, ಆರೋಗ್ಯ ಕಾರ್ಯಕರ್ತರಾದ ನಂದೀಶ್, ಭಾಗ್ಯಮ್ಮ, ಸುರೇಂದ್ರ ಆರ್, ಮಹೇಶ್ ಬಿ, ಚಿಕ್ಕನಾಯಕ, ಭೂಮಿಕಾ, ಲಾವಣ್ಯ, ರಕ್ತದಾನಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

## ಅಯೋಧ್ಯೆ ಮಂತ್ರಾಕ್ಷತೆ ವಿತರಣೆ

ಮಲ್ಲುಂಡಿ, ಜ.13– ಶ್ರೀರಾಮ ಜನ್ಮಭೂಮಿ ಅಯೋಧ್ಯೆಯಿಂದ ಬಂದಿರುವ ಮಂತ್ರಾಕ್ಷತೆ ಮತ್ತು ಶ್ರೀ ರಾಮನ ಫೋಟೋವನ್ನು ಮಾಜಿ ಶಾಸಕ ಬಿ.ಹರ್ಷವರ್ಧನ್ ಹೆಗ್ಗಡಹಳ್ಳಿ ಜಿಪಂ ವ್ಯಾಪ್ತಿಯ ಗ್ರಾಮಗಳ ಮನೆ ಮನೆಗೆ ತೆರಳಿ ವಿತರಿಸಿದರು.

ಈ ವೇಳೆ ಮಾತನಾಡಿದ ಅವರು, ಭಾರತ ದೇಶವನ್ನು ಬಲಪಡಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರು ಶ್ರಮ ವಹಿಸಿ ಶ್ರೀ ರಾಮಮಂದಿರ ನಿರ್ಮಾಣ ಮಾಡುತ್ತಿದ್ದಾರೆ. ಜ.22 ರಂದು ಶ್ರೀರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ನಡೆಯಲಿರುವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಕ್ಷೇತ್ರಾದ್ಯಂತ ಮನೆ ಮನೆಗೆ ತೆರಳಿ ಮಂತ್ರಾಕ್ಷತೆಯನ್ನು ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ವಳಗರೆ ಪುಟ್ಟಸ್ವಾಮಿ, ಮಹೇಶ್ ಬಾಬು, ಗ್ರಾಪಂ ಸದಸ್ಯ ಗೋವಿಂದರಾಜು ಹಾಜರಿದ್ದರು.

## ಶೇ.90ರಷ್ಟು ಮಂದಿ ಕೌಶಲ್ಯಾಭಿವೃದ್ಧಿಯಿಂದ ವಂಚಿತ




ಹೆಚ್.ಡಿ. ಕೋಟೆ, ಜ.13– ಜಪಾನ್‌ನಲ್ಲಿ ಶೇ 90ರಷ್ಟು ಮಂದಿ ಕೌಶಲ್ಯಾಭಿವೃದ್ಧಿ ಹೊಂದಿರುವವರು ಇದ್ದಾರೆ, ಆದರೆ ಭಾರತದಲ್ಲಿ ಶೇ 90 ರಷ್ಟು ಮಂದಿ ಕೌಶಲಾಭಿವೃದ್ಧಿಯಿಂದ ವಂಚಿತರಾಗಿದ್ದಾರೆ ಎಂದು ಜನಶಿಕ್ಷಣ ಸಂಸ್ಥಾನದ ನಿರ್ದೇಶಕ ರಮೇಶ್ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ಮಾಗುಡಿಲು ಗ್ರಾಮದಲ್ಲಿ ಮೈಸೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ಮತ್ತು ಭಾರತೀಯ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಅಭಿವೃದ್ಧಿ ಯೋಜನೆಯ ವತಿಯಿಂದ ವಿವೇಕಾನಂದರ 161 ಜನ್ಮ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ರಾಷ್ಟ್ರೀಯ ಯುವದಿನ ಮತ್ತು ಹೊಲಿಗೆ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

ಕೇಂದ್ರ ಸರ್ಕಾರವು ದೇಶದಲ್ಲಿ ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ಸುಮಾರು 40 ಕೋಟಿ ಮಂದಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಗುರಿ ಹೊಂದಿದೆ. ಈ ಹಿನ್ನಲೆಯಲ್ಲಿ ದೇಶದಲ್ಲಿ 304 ಜನಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ, ರಾಜ್ಯದಲ್ಲೂ 12 ಸಂಸ್ಥೆಗಳಿದ್ದು, ಮೈಸೂರು ಮತ್ತು ಬೆಂಗಳೂರಿನ ಸಂಸ್ಥೆಗಳನ್ನು ಜೆ.ಎಸ್.ಎಸ್ ವಿದ್ಯಾಪೀಠವು ವಹಿಸಿಕೊಂಡಿದೆ ಎಂದು ತಿಳಿಸಿದರು.

ಜನಶಿಕ್ಷಣ ಯೋಜನೆಯ ಸೌಭಾಗ್ಯ, ಸಹಾಯಕ ಕಾರ್ಯಕ್ರಮ ಅಧಿಕಾರಿ ಸುರೇಶ್, ತರಬೇತಿದಾರರಾದ ಲಕ್ಷ್ಮಿ ಬೀಚನಹಳ್ಳಿ, ಹಾಲಿನ ಡೈರಿ ಅಧ್ಯಕ್ಷೆ ಅಮೃತ, ಗ್ರಾಪಂ ಅಧ್ಯಕ್ಷೆ ಲಕ್ಷ್ಮಿ ರಮೇಶ್ ಇತರರು ಹಾಜರಿದ್ದರು.

## ಪ್ರಧಾನಿ ಜನ್‌ಮನ್ ಯೋಜನೆಯಡಿ 37 ಹಾಡಿಗಳ ಸಮಗ್ರ ಅಭಿವೃದ್ಧಿ

### ಪ್ರಸ್ತಾವನೆ ಸಲ್ಲಿಸಲು ಶಾಸಕ ಜಿ.ಡಿ.ಹರೀಶ್‌ಗೌಡ ಸೂಚನೆ

ಹುಣಸೂರು, ಜ.13– ತಾಲೂಕಿನ 37 ಹಾಡಿಗಳ ಸಮಗ್ರ ಅಭಿವೃದ್ಧಿಗೆ ಸೂಕ್ತ ಕ್ರಮವಹಿಸಿ ಕೇಂದ್ರ ಸರ್ಕಾರದ ಪ್ರಧಾನಿಗಳ ಜನ್‌ಮನ್ ಯೋಜನೆ ಅನುಷ್ಠಾನಕ್ಕೆ ಪ್ರಸ್ತಾವನೆ ಸಲ್ಲಿಸಲು ಶಾಸಕ ಜಿ.ಡಿ.ಹರೀಶ್ ಗೌಡ ಅಧಿಕಾರಿಗಳಿಗೆ ಸೂಚಿಸಿದರು.

ನಗರಸಭೆ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿ ಜನಮನ್ ಯೋಜನೆಯಡಿ ತಾಲೂಕಿನ ಗಿರಿಜನ ಹಾಡಿ ಸಮಗ್ರಅಭಿವೃದ್ಧಿಗೆ ಅಗತ್ಯವಾಗಿ ಬೇಕಿರುವ ರಸ್ತೆ, ಕುಡಿಯುವ ನೀರು, ವಿದ್ಯುತ್, ಶಿಕ್ಷಣ ಮತ್ತು ಆರೋಗ್ಯಕ್ಕೆ ಪ್ರಸ್ತಾವನೆ ಸಲ್ಲಿಸಿ ಯೋಜನೆ ಅನುಷ್ಠಾನಕ್ಕೆ ಸಿದ್ಧತೆ ನಡೆಸಬೇಕು ಎಂದರು.

ಪಿಎಂಜಿಎಸ್‌ವೈ ಯೋಜನೆ ಅಡಿಯಲ್ಲಿ ಹಾಡಿಗಳಿಗೆ ಲಿಂಕ್ ರಸ್ತೆ ನಿರ್ಮಿಸಲು ಪ್ರಸ್ತಾವನೆ ಸಿದ್ಧಗೊಳಿಸಿ, ಇದರಿಂದಾಗಿ ಹಾಡಿಗಳ ರಸ್ತೆ ಉತ್ತಮಗೊಂಡು ನಾಗರಿಕರಿಗೆ ಅನುಕೂಲವಾಗಲಿದೆ ಎಂದರು. ದೊಡ್ಡಹೆಜ್ಜೂರು, ನೇರಳಕುಪ್ಪೆ, ಕರ್ಣಕುಪ್ಪೆ ಕೊಳವಿಗೆ ಭಾಗದಲ್ಲಿ ಹಾಡಿಗಳ ರಸ್ತೆ ಸಂಪೂರ್ಣ ಹದಗೆಟ್ಟು ಓಡಾಡಲು ಸಾಧ್ಯವಾಗುತ್ತಿಲ್ಲ. ಈ ಯೋಜನೆ ಸಮರ್ಪಕವಾಗಿ ಬಳಸಿಕೊಂಡು ಸಾರ್ವಜನಿಕರಿಗೆ ಉತ್ತಮ ರಸ್ತೆ ಒದಗಿಸಲು ಪೂರಕವಾಗಿದೆ ಎಂದರು.

ಹಾಡಿ ವ್ಯಾಪ್ತಿಗೆ ಸೇರಿದ ದೊಡ್ಡ ಹೆಜ್ಜೂರು, ನೇರಳಕುಪ್ಪೆ, ಧರ್ಮಾಪುರ ಮತ್ತು ಹನಗೋಡು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಅವಕಾಶವಿದ್ದು, ಪ್ರಸ್ತಾವನೆ ಸಿದ್ಧಪಡಿಸುವಂತೆ ಸೂಚಿಸಿದರು. ಹನಗೋಡು ಆಸ್ಪತ್ರೆಯನ್ನು ಕಮ್ಯುನಿಟಿ ಹೆಲ್ತ್ ಕೇರ್ ಆಸ್ಪತ್ರೆಗೆ ಉನ್ನತೀಕರಣಕ್ಕೆ ಅವಕಾಶವಿದ್ದು ಪ್ರತ್ಯೇಕವಾಗಿ ಪ್ರಸ್ತಾವನೆ ಸಿದ್ಧಪಡಿಸಲು ತಾಲೂಕು ಆರೋಗ್ಯಾಧಿಕಾರಿ ಡಾ.ಕೀರ್ತಿಕುಮಾರ್‌ಗೆ ಸೂಚಿಸಿದರು.

11 ಹಾಡಿಗಳಲ್ಲಿ ಸರ್ಕಾರಿ ಶಾಲೆ ಇದ್ದು, ಒಟ್ಟು 1248 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಹಾಡಿಗೆ ಹೊಂದಿಕೊಂಡಿರುವ ಪ್ರೌಢಶಾಲೆಯಲ್ಲಿ ವಸತಿ ನಿಲಯ ಆರಂಭಿಸುವುದರಿಂದ ಮತ್ತಷ್ಟು ಗುಣಮಟ್ಟದ ಶಿಕ್ಷಣ ನೀಡಲು ಸಹಕಾರಿ ಆಗಲಿದೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿ ಸಂತೋಷ್‌ಕುಮಾರ್ ಹೇಳಿದರು.

ಶಾಸಕರು ಮಾತನಾಡಿ, ನೇರಳಕುಪ್ಪೆ ಗ್ರಾಮದ ಪ್ರೌಢಶಾಲೆಗೆ ವಸತಿ ನಿಲಯದ ವ್ಯವಸ್ಥೆ ಕಲ್ಪಿಸಲು ಪ್ರಸ್ತಾವನೆ ಸಿದ್ಧಪಡಿಸುವಂತೆ ಸೂಚಿಸಿದರು. ಕೌಶಲ್ಯ ತರಬೇತಿ ನೀಡಲು ಯೋಜನೆಯಲ್ಲಿ ಅವಕಾಶವಿದ್ದು, ಐಯ್ಯನಕೆರೆ ಹಾಡಿಯಲ್ಲಿ ನೂತನ ಕಟ್ಟಡ ನಿರ್ಮಿಸಿ ಕೌಶಲ್ಯ ತರಬೇತಿ ಕೇಂದ್ರ ಆರಂಭಿಸಲು ಈಗಾಗಲೇ ಇಲಾಖೆ ಪ್ರಸ್ತಾವನೆ ಸಲ್ಲಿಸಿದೆ. ಆದರೆ ಈ ಹಾಡಿಯಲ್ಲಿ ನಿವೇಶನದ ಸಮಸ್ಯೆ ಇದ್ದು ಮತ್ತೊಮ್ಮೆ ಅಧಿಕಾರಿಗಳ ತಂಡ ಭೇಟಿ ನೀಡಿ, ಪರಿಶೀಲಿಸುವುದು ಸೂಕ್ತ ಎಂದರು.



ನಗರಸಭೆ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಸೂಚನೆ ನೀಡುತ್ತಿರುವ ಶಾಸಕ ಜಿ.ಡಿ.ಹರೀಶ್‌ಗೌಡ

**ಸೋಲಾರ್ ದೀಪ:** ಗಿರಿಜನರ ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಸೆಸ್ಕ್ ಇಲಾಖೆ ಪಾತ್ರ ಹೆಚ್ಚಿದ್ದು, ಹುಣಸೂರು ಮತ್ತು ಬಿಳಿಕೆರೆ ಭಾಗದಲ್ಲಿನ ಹಾಡಿಗಳಿಗೆ ವಿದ್ಯುತ್ ಸಮರ್ಪಕವಾಗಿ ನೀಡಬೇಕು. ಹುಣಸೂರು ಉಪವಿಭಾಗದ 21 ಹಾಡಿ ಮನೆಗಳಿಗೆ ವಿದ್ಯುತ್ ನೀಡುವುದರೊಂದಿಗೆ ಬೀದಿದೀಪಕ್ಕೆ ಸೋಲಾರ್ ವ್ಯವಸ್ಥೆ ಬಳಸಿಕೊಳ್ಳುವುದು ಸೂಕ್ತ ಎಂದರು.

ಸಭೆಯಲ್ಲಿ ತಾಲೂಕು ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ಅಧಿಕಾರಿ ಬಸವರಾಜ್, ತಹಶೀಲ್ದಾರ್ ಮಂಜುನಾಥ್ ಮತ್ತು ಅಧಿಕಾರಿಗಳು ಹಾಜರಿದ್ದರು.



ನಂಜನಗೂಡು ತಾಲೂಕು ಎಸ್.ಹೊಸಕೋಟೆ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಎಚ್.ಪಿ. ನಾಗೇಂದ್ರ 9 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಮಹದೇವಮ್ಮ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ. ಈ ಸಂದರ್ಭದಲ್ಲಿ ಚುನಾವಣಾಧಿಕಾರಿ ಶಿವಪ್ರಸಾದ್, ಸಂಘದ ಕಾರ್ಯದರ್ಶಿ ಬಾಲಚಂದ್ರು ಹಾಗೂ ಎಲ್ಲಾ ನಿರ್ದೇಶಕರನ್ನು ಅಭಿನಂದಿಸಲಾಯಿತು.

# ಇಂಡಿಯಾ ಮೈತ್ರಿಕೂಟದ ಮುಖ್ಯಸ್ಥರಾಗಿ ಮಲ್ಲಿಕಾರ್ಜುನ ಖರ್ಗೆ ನೇಮಕ ನಿರ್ಧಾರ



ನವದೆಹಲಿ, ಜ.13– ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ಮುಖ್ಯಸ್ಥರಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇಮಕಕ್ಕೆ ಶನಿವಾರ ಒಮ್ಮತ ಮೂಡಿದೆ ಎಂದು ಮೂಲಗಳು ತಿಳಿಸಿವೆ. ಈ ಬಣದ ನಾಯಕರು ವರ್ಚುಯಲ್ ಸಭೆ ನಡೆಸಿದ್ದು, ಮೈತ್ರಿಕೂಟದ ವಿವಿಧ ಅಂಶಗಳು ಹಾಗೂ 2024ರ ಏಪ್ರಿಲ್–ಮೇ ನಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಯ ಸಿದ್ಧತೆ ಕುರಿತು ಚರ್ಚಿಸಿದ್ದಾರೆ

ತೃಣಮೂಲ ಕಾಂಗ್ರೆಸ್, ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ ಮತ್ತು ಸಮಾಜವಾದಿ ಪಕ್ಷದ ನಾಯಕರು ಸಭೆಗೆ ಹಾಜರಾಗಿಲ್ಲ ಎಂದು ಮೂಲಗಳು ತಿಳಿಸಿವೆ. ಇಂಡಿಯಾ ಅಧ್ಯಕ್ಷರಾಗಿ ಖರ್ಗೆ ಅವರನ್ನು ನೇಮಿಸುವ ಬಗ್ಗೆ ಒಮ್ಮತ ಮೂಡಿದೆ. ಈ ಕುರಿತು ಅಧಿಕೃತ ಘೋಷಣೆ ಇನ್ನೂ ಹೊರಬರಬೇಕಾಗಿದೆ ಎಂದು ಮೂಲಗಳು ತಿಳಿಸಿವೆ. ಬಿಹಾರದ ಮುಖ್ಯಮಂತ್ರಿ ಮತ್ತು ಜೆಡಿಯು ಅಧ್ಯಕ್ಷ ನಿತೀಶ್ ಕುಮಾರ್ ಅವರನ್ನು ಇಂಡಿಯಾ ಮೈತ್ರಿಕೂಟದ ಸಂಚಾಲಕರನ್ನಾಗಿ ಮಾಡಲು ನಾಯಕರು ನಿರ್ಧರಿಸಿದ್ದಾರೆ, ಆದರೆ ಸಭೆಯಲ್ಲಿ ಭಾಗವಹಿಸದ ಪ್ರತಿನಿಧಿಗಳನ್ನು ಸಂಪರ್ಕಿಸಿದ ನಂತರ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಉನ್ನತ ಮೂಲಗಳು ಹೇಳಿವೆ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು 28 ವಿರೋಧ ಪಕ್ಷಗಳು INDIA ವೇದಿಕೆಯಡಿ ಒಗ್ಗೂಡಿವೆ. ಆದಾಗ್ಯೂ, ಮುಖ್ಯಸ್ಥರ ಆಯ್ಕೆ ಇಂಡಿಯಾ ಮೈತ್ರಿಕೂಟ ಎದುರಿಸುತ್ತಿರುವ ಹಲವಾರು ಸವಾಲುಗಳ ಒಂದು ಮುಖವಾಗಿದೆ. ಎಲ್ಲಾ ಪಕ್ಷಗಳ ನಡುವಿನ ಸೀಟು ಹಂಚಿಕೆ ಸಮಸ್ಯೆಯನ್ನು ಅವರು ಇನ್ನೂ ನಿಭಾಯಿಸಬೇಕಾಗಿದೆ.

ಮಧ್ಯ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಸ್ಥಾನ ಹಂಚಿಕೊಳ್ಳಲು ರಾಜ್ಯ ಕಾಂಗ್ರೆಸ್ ನಿರಾಕರಿಸಿದ ಕಾರಣ ಸಮಾಜವಾದಿ ಪಕ್ಷ ಕ್ಷಮಿಸುವ ಮನಸ್ಥಿತಿಯಲ್ಲಿ ಇಲ್ಲ ಎಂದು ನಿರೀಕ್ಷಿಸಲಾಗಿದೆ. ರಾಜ್ಯದಲ್ಲಿ ಆರು ಸ್ಥಾನಗಳಿಗೆ ಕೇಂದ್ರ ನಾಯಕತ್ವದ ಬದ್ಧತೆಯನ್ನು ಗೌರವಿಸಲು ಪಕ್ಷದ ರಾಜ್ಯಾಧ್ಯಕ್ಷರಾಗಿದ್ದ ಕಮಲ್ ನಾಥ್ ನಿರಾಕರಿಸಿದ್ದರು. ಮಧ್ಯ ಪ್ರದೇಶ ಚುನಾವಣೆಯಲ್ಲಿ ಪಕ್ಷದ ಹೀನಾಯ ಸೋಲಿನ ನಂತರ ಅಖಿಲೇಶ್ ಯಾದವ್ ವಿರುದ್ಧ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ನಂತರ ಕಮಲ್ ನಾಥ್ ಅವರನ್ನು ಉನ್ನತ ಹುದ್ದೆಯಿಂದ ವಜಾಗೊಳಿಸಲಾಗಿದೆ.

ಎಎಪಿ ಜೊತೆಗಿನ ಕಾಂಗ್ರೆಸ್‌ನ ಚರ್ಚೆಯೂ ವಿವಾದಾಸ್ಪದವಾಗಿದೆ. ಪಕ್ಷ ದೆಹಲಿಯಲ್ಲಿ 4 ಸ್ಥಾನಗಳು ಮತ್ತು ಪಂಜಾಬ್‌ನಲ್ಲಿ ಏಳು ಸ್ಥಾನಗಳನ್ನು ಬಯಸಿದ್ದರೂ, ಎಎಪಿ ಅದನ್ನು ಒಪ್ಪಿಕೊಳ್ಳಲು ಸಿದ್ಧವಾಗಿಲ್ಲ. ದೆಹಲಿ ಮತ್ತು ಪಂಜಾಬ್ ಎರಡರಲ್ಲೂ ಆಡಳಿತ ಪಕ್ಷವು ಹೆಚ್ಚಿನ ಸ್ಥಾನಗಳನ್ನು ಬಯಸುತ್ತದೆ. ಎಎಪಿ ಗೋವಾ, ಹರಿಯಾಣ ಮತ್ತು ಗುಜರಾತ್‌ನಲ್ಲಿಯೂ ಸ್ಪರ್ಧಿಸಲು ಬಯಸಿದೆ ಎಂದು ಮೂಲಗಳು ತಿಳಿಸಿವೆ.

# ಇಂದಿನಿಂದ ಭಾರತ್ ಜೋಡೊ ನ್ಯಾಯ ಯಾತ್ರೆ ಆರಂಭ



ನವದೆಹಲಿ, ಜ.13–ಒಂದೆಡೆ ರಾಮಮಂದಿರ ಉದ್ಘಾಟನೆಯ ಅಬ್ಬರ, ಮತ್ತೊಂದೆಡೆ ಲೋಕಸಭಾ ಚುನಾವಣೆ ತಯಾರಿಯ ಭರಾಟೆ ಮಧ್ಯೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾನು ವಾರ ಮಣಿಪುರದಿಂದ ಮುಂಬೈವರೆಗೆ 6,713 ಕಿ.ಮೀ ದೂರದ 'ಭಾರತ್ ಜೋಡೊ ನ್ಯಾಯ ಯಾತ್ರೆ' (ಬಿಜೆಎನ್‌ವೈ) ಆರಂಭಿಸಲಿದ್ದಾರೆ.

ಮಣಿಪುರದ ಥೌಬಲ್ ಜಿಲ್ಲೆಯಲ್ಲಿ ಬ್ರಿಟಿಷರ ವಿರುದ್ಧ ಮಣಿಪುರಿಗಳು ಹೋರಾಡಿದ ಸ್ಥಳ, ಕೋಂಗ್‌ಜೋವ್ ಯುದ್ಧ ಸ್ಮಾರಕದ ಬಳಿಯಿಂದ ಯಾತ್ರೆ ಶುರುವಾಗಲಿದೆ.

ರಾಹುಲ್ ಅವರ 'ಯಾತ್ರೆ 2.0', ಪಾದಯಾತ್ರೆಯ ಜತೆ ಜತೆಗೆ ಬಸ್ ಯಾನವನ್ನೂ ಒಳಗೊಂಡಿದ್ದು, ಇದು ಚುನಾವಣಾ ಯಾತ್ರೆಯಲ್ಲ ಎಂದು ಕಾಂಗ್ರೆಸ್ ಹೇಳಿದೆ. ಆದರೆ, ಈ ಯಾತ್ರೆಯು ಲೋಕಸಭೆ ಚುನಾವಣೆಯ ಸಿದ್ಧತೆಯಲ್ಲಿ ಪಕ್ಷಕ್ಕೆ ನೆರವಾಗಲಿದೆ ಎಂಬ ನಿರೀಕ್ಷೆಯನ್ನು ಪಕ್ಷದ ನಾಯಕರು ಹೊಂದಿದ್ದಾರೆ. ಯಾತ್ರೆಯ ಕಾಲಕ್ಕೆ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ರಂಗದಲ್ಲಿ ಪಕ್ಷದ ಗ್ಯಾರಂಟಿಗಳ ಬಗ್ಗೆ ರಾಹುಲ್ ವಿವರಿಸುವ ಸಾಧ್ಯತೆಯೂ ಇದೆ. ರಾಹುಲ್ ಅವರ ಲೋಕಸಭಾ ಕ್ಷೇತ್ರ ಅಮೇಠಿ, ಸೋನಿಯಾ ಅವರ ರಾಯ್ ಬರೇಲಿ, ಪ್ರಧಾನಿ ಮೋದಿ ಅವರ ವಾರಾಣಸಿ ಮತ್ತು ಸಿಂಧಿಯಾ ಅವರ ಭದ್ರಕೋಟೆ ಗುನಾ ಮೂಲಕ ಯಾತ್ರೆಯು ಹಾದು ಅಂತಿಮವಾಗಿ ಮಾ.20ರಂದು ಮುಂಬೈನಲ್ಲಿ ಮುಕ್ತಾಯವಾಗಲಿದೆ. ಜನಾಂಗೀಯ ಹಿಂಸಾಚಾರ ಪೀಡಿತ ಮಣಿಪುರವನ್ನು ಆರಂಭದ ಸ್ಥಳವಾಗಿ ಆಯ್ಕೆ ಮಾಡುವ ಮೂಲಕ, ಯಾತ್ರೆಯು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯದ ವಿಷಯಗಳನ್ನು ಪ್ರಸ್ತಾಪಿಸಲಿದೆ ಎಂಬುದನ್ನು ಸೂಚ್ಯವಾಗಿ ತಿಳಿಸಲಾಗಿದೆ.